ಕಡೆಯಲ್ಲಿ ನಿಂಮ ಮರಣದಿಂದ ಬರುವ ಮಿತಿ ಇಲ್ಲದ ಫಲಗಳಂನು ಜ್ಞಾನಸ್ನಾನದ ಮುಖಾಂತ್ರದಿಂದ ನನಗೆ ಪಾಲಿಸಿ, ಜ್ಞಾನಸ್ನಾನವಂನು ತೆಗೆದ ಮೇಲೆ ತಿರಿಗಿ ನಾನು ಪಾಪದಲ್ಲಿ ಬೀಳಲಾಗಿ, ದೇವರವರು ನಂನಂನು ನರಕದಲ್ಲಿ ದೊಬ್ಬದೆ, ಪಾಪಸಂಕೀರ್ತನದ ಮುಖಾಂತ್ರದಿಂದ ನನಗೆ ತಾಳಿ ಕೊಂಡು, ದಿವ್ಯ ಭೋಜನವಾದ ಸತ್ಪ್ರಸಾದವಂನು ಕೊಟ್ಟು, ನನಗೆ ಕಾವಲಾಗಿರುವ ಹಾಗೆ ಸಂಮನಸ್ಸೊಬ್ಬಕಂನು ಪಾಲಿಸಿ, ಇವು ಮೊದಲಾಗಿ ಎಣಿಸ ಕೂಡದ ಸಹಾಯುಗಳಂನು ನನಗೆ ಮಾಡಿದ್ದರಿಂದಲೂ, ವಿಶೇಷವಾಗಿ ಈ ರಾತ್ರಿಕಾಲದಲ್ಲಿ ವಿಘ್ನವಿಲ್ಲದೆ ನಂನಂನು ರಕ್ಷಿಸಿದ್ದರಿಂದಲೂ, ಅರಿತ ಮನದೊಡನೆ ನಿಮಗೆ ಸ್ತೋತ್ರವಂನು ಮಾಡುತ್ತಾ ಇದ್ಧೇನೆ, ಸ್ವಾಮಿ!

ತಂನಂನು ಸರ್ವೇಶ್ವರನಿಗೆ ಸಮರ್ಪಿಸುವದು.

ಸರ್ವ ಲೋಕಕ್ಕೆ ಕರ್ತರಾದವರೇ, ನಂನ ಶರೀರವಂನೂ ಪಂಚೇಂದ್ರಿಯಗಳಂನೂ ಅವುಗಳಲ್ಲಿ ಉಂಟಾದ

ಶಕ್ತಿಗಳನ್ನೂ, ನನ್ನ ಆತ್ಮವನ್ನೂ ಇದರಲ್ಲಿ ಉಂಟಾದ ಬುದ್ಧಿ ನೆನಪು ಮನಸ್ಸೆಂಬ ಮೂರು ಶಕ್ತಿಗಳನ್ನೂ ನನಗೆ ಪಾಲಿಸಿದಿರಿ ಅಲ್ಲಾ? ಇವೆಲ್ಲವನ್ನು ನಿಮ್ಮ ದಿವ್ಯ ಪಾದದಲ್ಲಿ ಕಾಣಿಕೆಯಾಗಿ ಒಪ್ಪಿಸುತ್ತಾ ಇದ್ದೇನೆ. ಈ ಕಾಣಿಕೆ ನಿಮಗೆ ಪ್ರಿಯವಾಗಿ ಇರುವ ಹಾಗೆ, ಜೇಸುನಾಥರು ಮಾಡಿದಂಥ ಸುಕೃತವಾದ ಪುಣ್ಯಗಳೊಡನೆಯೂ, ಅರ್ಚ್ಯ ಶಿಷ್ಟರು ನಿಮಗೆ ಕೊಟ್ಟಂಥ ಕಾಣಿಕೆಗಳೊಡನೆಯೂ, ದೇವರವರಿಗೆ ಸಮರ್ಪಿಸುತ್ತಾ ಇದ್ದೇನೆ. ಇದರ ನಿಮಿತ್ತ ಈ ಕ್ಷಣ ಮೊದಲ್ಗೊಂಡು ಮರಣದ ಪರಿಯಂತರಕ್ಕು, ವಿಶೇಷವಾಗಿ ಈ ದಿನದಲ್ಲಿ ನಾನು ಮಾಡಿಕೊಳ್ಳುವದೆಲ್ಲಾ ದೇವರವರಿಗೆ ಸ್ತೋತ್ರವಾಗಿ ಮಾಡಿಕೊಳ್ಳುವೆನು.

ಸರ್ವೇಶ್ವರನ ಅನುಗ್ರಹವನ್ನು ಬೇಡಿಕೊಳ್ಳುವದು.

ಸರ್ವೇಶ್ವರಾ ಸ್ವಾಮಿ, ದೇವರವರು ಮಿತಿ ಇಲ್ಲದ ಕೃಪೆಯುಳ್ಳವರಾಗಿರುವ ಕಾರಣದಿಂದ, ಜೇಸುನಾಥ ಸ್ವಾಮಿಯವರ ಮುಖವನ್ನೋಡಿ, ನನಗೂ ತಿರು ಸಭೆಗೂ ಸಕಲವಾದ ಜನರಿಗೂ ಬೇಕಾದ ಸಹಾಯಗಳ ಮಾಡ ಕರುಣಿಸುವದಲ್ಲದೆ, ವಿಶೇಷವಾಗಿ ಈ ದಿನದಲ್ಲಿ ಪಾಪಗಳ ಮಾಡದೆ ಪುಣ್ಯ ದಾರಿಯಲ್ಲಿ ನಡೆಯುವದಕ್ಕೆ ನನಗೆ ಅನುಗ್ರಹವನ್ನು ಮಾಡ ಕರುಣಿಸಿರಿ, ಸ್ವಾಮಿ. ಆಮೆನ್ ಜೇಸು.

(ಆ ಮೇಲೆ ಪರಲೋಕದ, ನಮೋ ದೇವ, ವಿಶ್ವಾಸದ

ಮಂತ್ರ, ಹತ್ತು ಕಲ್ಪನೆ, ತಿರುಸಭೆಯ ಐದು ಕಲ್ಪನೆ ಕೇಳಿಕೊಳ್ಳುವದು.)

ಸರ್ವೇಶ್ವರಾ ಸ್ವಾಮೀ, ಇಂಥ ದಿವ್ಯ ಕಲ್ಪನೆಗಳಿಗೆ ವಿರೋಧವಾಗಿ ವಿಚಾರದಿಂದಲೂ, ವಾಕ್ಯದಿಂದಲೂ, ಕ್ರಿಯೆಯಿಂದಲೂ, ನಂನ ಕೊಂಚ ಬುದ್ಧಿಯಿಂದಲೂ, ಹೀನ ಶರೀರದ ದುರ್ಬಲದಿಂದಲೂ, ನಾನು ಮಾಡಿದ ಪಾಪಗಳೆಲ್ಲಾ ಒರು ತಪ್ಪಾಯಿತೆಂದು ನೆನಸಿ ಕೊಂಡು, ಜೇಸುನಾಥರ ಪಾಡುಗಳ ದಯವಂನು ನೋಡಿ, ನಂನ ಪಾಪಗಳ ತಾಳಿಕೊಳ್ಳಿ, ಸ್ವಾಮೀ.

(ಮರಳಾ ಭಕ್ತಿಯೊಂದಿಗೆ ಉತ್ತಮ ಮನಸ್ತಾಪದ ಮಂತ್ರವಂನು ಕೇಳಿಕೊಂಬುವದು.)

ಪಾಪಗಳ ಬಿಟ್ಟು ಪುಣ್ಯ ದಾರಿಯಲ್ಲಿ ನಡೆಯುವದಕ್ಕೆ ಪ್ರತಿಜ್ಞೆಯಂನು ಮಾಡಿಕೊಳ್ಳುವದು.

ಸರ್ವೇಶ್ವರಾ ಸ್ವಾಮೀ, ದೇವರವರು ಪಾಲಿಸಿದ ದೇವಕಲ್ಪನೆಗಳ ಪ್ರಕಾರ ನಾನು ಸುಮುದ್ರೆಯಾಗಿ ನಡೆಯುವಹಾಗೆ ನಿಶ್ಚೈಸುತ್ತೇನೆ. ಇದರ ನಿಮಿತ್ತ ನಂನಲ್ಲಿ ಇರುವ ಅಹಂಕಾರ, ಕೋಪ, ಮೊದಲಾದ ವಿಶೇಷ ದುರ್ಗುಣಾದಿಗಳ ನಿಗ್ರಹಿಸಿ, ಈ ದಿನದಲ್ಲಿ ಅನೇಕ ಧರ್ಮಗಳ ಮಾಡಿ, ವಾಕ್ಯದಿಂದಲೂ, ಕ್ರಿಯೆಯಿಂದಲೂ, ದಾಕ್ಷಿಣ್ಯ, ಶಾಂತಿ,

ವಿರಕ್ತಿ, ಮುಂತಾದ ಪುಣ್ಯಗಳಂನು ಪಡೆಯುವದಕ್ಕೆ ಪ್ರಯಾಸ ಪಡುವೆನು, ಸ್ವಾಮಿ. ಆದರೆ ಇವೆಲ್ಲಾ ನಂನ ಪ್ರಾಣದಿಂದ ಕೂಡದಲ್ಲವೇ. ಪರಿಶುದ್ಧ ದೇವ ಮಾತೆಯೇ, ನನಗಾಗಿ ನಿಂಮ ದಿವ್ಯ ಕುಮಾರಂನ ಬೇಡಿಕೊಳ್ಳಿ, ತಾಯೇ.

ಜೇಸುನಾಥರಂನು ಕುರಿತು ಮೂವತ್ತು ಮೂರು ಮಣೀ ಜಪ ಮಾಡುವ ಬಗೆಯು.

ಸರ್ವ ವಲ್ಲಭವುಳ್ಳ ಪಿತನಾದ ಸರ್ವೇಶ್ವರಾ ಸ್ವಾಮಿ, ಹೀನನಾಗಿಯೂ ಪಾಪಿಯಾಗಿಯೂ ಇರುವ ನಾನು ಮಟ್ಟಿಲ್ಲದ ಮಹಿಮೆ ಪ್ರತಾಪವುಳ್ಳಂಥ ನಿಂಮ ಸಂನಿಧಾನದಲ್ಲಿ ಜಪ ಮಾಡುವದಕ್ಕೆ ಅಪಾತ್ರನಾಗಿದ್ದಾಗ್ಯೂ, ದೇವರವರ ಅಪರಿಮಿತ ಕೃಪಾ ಕಟಾಕ್ಷ ನಂಬಿ ಕೊಂಡು, ಜೇಸುನಾಥರಿಗೆ ಸ್ತೋತ್ರವಾಗಿ ಈ ಮೂವತ್ತು ಮೂರು ಮಣೀ ಜಪ ಒಪ್ಪಿಸ ಬೇಕೆಂತ ಆಸೆಯಾಗಿ ಇಚ್ಛೇನೆ, ಸ್ವಾಮಿ. ಇಂಥ ಜಪವಂನು ಭಕ್ತಿಯೊಂದಿಗೆ ಮಾಡಿ ಪರಾಕಿಲ್ಲದೆ ನೆರವೇರಿಸುವ ಹಾಗೆ ದೇವರವರ ಸಹಾಯ ಕಟ್ಟಳೆ ಮಾಡ ಕರುಣಿಸಿರಿ, ಸ್ವಾಮಿ.

(ಸಕಲ ಪುಣ್ಯಗಳೊಳಗೆ ವಿಶ್ವಾಸವೆಂಬ ಪುಣ್ಯ ಅಸ್ತಿವಾರವಾಗಿ ಇರುವದರಿಂದ, ಮೊದಲು ಮೊದಲು ವಿಶ್ವಾ

ಸದ ಮಂತ್ರವನ್ನು ಹೇಳಿಕೊಳ್ಳುವದು. ಆ ಬಳಿಕ:)

ಪಿತನಾಗಿದ್ದಂಥ ಸರ್ವೇಶ್ವರಾ, ದೇವರವರು ತಪ್ಪಿಲ್ಲದ ಸತ್ಯ ಸ್ವರೂಪಿಯಾಗಿರುವವರಿಂದ, ತಿರು ಸಭೆ ವಿಶ್ವಾಸಿಸುವದೆಲ್ಲವನ್ನು ನೀವೇ ಪಾಲಿಸಿದ್ದರಿಂದ ಅದನ್ನು ನಾನು ಸಂದೇಹವಿಲ್ಲದೆ ಶುದ್ಧ ಮನಸ್ಸಾಗಿ ವಿಶ್ವಾಸಿಸುವ ಹಾಗೆ, ನನಗೆ ವಿಶ್ವಾಸವೆಂಬ ಪುಣ್ಯವ ಕೂಡ ಕರುಣಿಸಿರಿ, ಸ್ವಾಮಿ. (೧ ಪರಲೋಕದ ಮಂತ್ರ.)

ಸುತನಾಗಿದ್ದಂಥ ಸರ್ವೇಶ್ವರಾ, ದೇವರವರ ಮಿತಿ ಇಲ್ಲದ ಕೃಪೆಯನ್ನು ನಾನು ನಂಬುವ ಹಾಗೆ, ನಂಬಿಕೆ ಎಂಬ ಪುಣ್ಯವ ನನಗೆ ಪಾಲಿಸ ಕರುಣಿಸಿರಿ, ಸ್ವಾಮಿ. (೧ ಪರಲೋಕದ ಮಂತ್ರ.)

ಸ್ಪಿರಿತು ಸಾಂತುವಾಗಿರುವ ಸರ್ವೇಶ್ವರಾ, ದೇವರವರು ಪಿತನಿಗೂ ಸುತನಿಗೂ ಅನ್ಯೋನ್ಯ ಸ್ನೇಹವಾಗಿ ಇರುವದರಿಂದ, ತ್ರಿತ್ವವಾಗಿರುವ ಏಕ ಸರ್ವೇಶ್ವರನ ನಾನು ಸ್ನೇಹಿಸುವ ಹಾಗೆ, ನನಗೆ ದೇವ ಭಕ್ತಿ ಎಂಬ ಪುಣ್ಯವ ಪ್ರಸಾದಿಸ ಕರುಣಿಸಿರಿ, ಸ್ವಾಮಿ. (೧ ಪರಲೋಕದ ಮಂತ್ರ.)

ಪಿತನಿಗೂ ಸುತನಿಗೂ ಸ್ಪಿರಿತು ಸಾಂತುವಿಗೂ ಸ್ತೋತ್ರ ಉಂಟಾಗಲಿ; — ಆದಿಯಲ್ಲಿ ಇದ್ದ ಹಾಗೆ, ಈಗಲೂ, ಯಾವಾಗಲೂ, ಸದಾಕಾಲದಲ್ಲಿಯೂ ಸ್ತೋತ್ರ ಉಂಟಾಗಲಿ!

(ನಮೋ ದೇವ ಮಂತ್ರ ಹೇಳಿಕೊಳ್ಳುವದು. ಆ ಮೇಲೆ:)

ಸರ್ವೇಶ್ವರ ಸ್ವಾಮಿ ನಮಗೆ ಪಾಲಿಸಿದ ವೇದ ಕಲ್ಪಣೆಗಳು ಹತ್ತು:

೧ ನೇದು. ಸರ್ವೇಶ್ವರ ಸ್ವಾಮಿ ಒಬ್ಬರಿಗೆ ಆರಾಧನೆ ಮಾಡುವದು.

* ಸರ್ವೇಶ್ವರಾ ಸ್ವಾಮೀ, ಈ ದಿನದ ಪರಿಯಂತವಾಗಿ ಇಂಥ ಕಲ್ಪಣೆಗೆ ವಿರೋಧವಾದ ಪಾಪಗಳ ನಾನು ಮಾಡಿದೆನಾದರೆ: ನಂನ ಪಾಪಗಳ ತಾಳಿಕೊಳ್ಳಿ; ಇಂನು ಮೇಲೆ ಇದಂನು ನಾನು ಸಾಂಗೋಪಾಂಗವಾಗಿ ಸಲ್ಲಿಸುವ ಹಾಗೆ, ನಿಂಮ ಅನುಗ್ರಹವಂನು ಪಾಲಿಸ ಕರುಣಿಸಿರಿ, ಸ್ವಾಮೀ! (೧ ಪರಲೋಕದ.)

೨ ನೇದು. ಸರ್ವೇಶ್ವರ ಸ್ವಾಮಿಯ ತಿರು ನಾಮವಂನು ವ್ಯರ್ಥವಾಗಿ ಸ್ವೀಕರಿಸದೆ ಇರುವದು.

* ಸರ್ವೇಶ್ವರಾ ಸ್ವಾಮೀ, (ಮುಂಚೆ ಹೇಳಿದ ಹಾಗೆ; ಆ ಮೇಲೆ, ೧ ಪರಲೋಕದ.)

(ಒಂದೊಂದು ಕಲ್ಪಣೆಗೆ ಈ ಪ್ರಕಾರವಾಗಿ ಹೇಳಿಕೊಂಡು, ಹತ್ತು ಮಣೀ ಜಪ ಜಪಿಸುವದು. ಆದ ಮೇಲೆ: ಪಿತನಿಗೂ, ಸುತನಿಗೂ ಸ್ಪಿರಿತು ಸಾಂಕ್ತುವಿಗೂ....೧ ನಮೋ ದೇವ ಹೇಳುವದು.)

ದಯಾಪರರಾಗಿರುವ ದಿವ್ಯ ಜೇಸುವೇ, ನಂನಂನು ರಕ್ಷಿಸಿಕೊಳ್ಳಿ, ಸ್ವಾಮೀ. (೧ ಪರಲೋಕದ.)

(ಸದರಿ ವಾಕ್ಯಗಳಂನು ಹತ್ತು ಸಾರಿ ಉಚ್ಚರಿಸುವಾಗ ಒಂದೊಂದು ಸಾರಿಗೆ ೧ ಪರಲೋಕದ ಮಂತ್ರವಂನು

ಹೇಳಿ ಕೊಂಡು, ಈ ಪ್ರಕಾರವಾಗಿ ಹತ್ತು ಮಣೀ ಜಪ ತೀರಿದ ಮೇಲೆ, ಮುಂಚೇ ಹಾಗೆ, ಪಿತನಿಗೂ ಸುತನಿಗೂ... ಹೇಳಿ ಕೊಂಬುವದು.)

(೧ ನಮೋ ದೇವ ಹೇಳುವದು.)

ದಿವ್ಯ ಗುರುವಾಗಿರುವ ನಂನ ಜೇಸುವೇ, ದೇವರವರು ತಿರು ಶಿರಸ್ಸಿನಲ್ಲಿ ಪಾಡುಪಟ್ಟದ್ದಂನೂ ನಿಂಮ ದಯವಂನೂ ನೋಡಿ, ಪಾಪಿಯಾದ ನಾನು ಕೆಟ್ಟ ತಲೆಯಿಂದ ಮಾಡಿದ ಲೆಖ್ಖವಿಲ್ಲದ ಪಾಪಗಳ ನನಗೆ ತಾಳಿಕೊಳ್ಳಿ, ಸ್ವಾಮಿ. (೧ ಪರಲೋಕದ.)

ದಿವ್ಯ ಗುರುವಾಗಿರುವ ನಂನ ಜೇಸುವೇ, ದೇವರವರು ತಿರು ನೇತ್ರಗಳಲ್ಲಿ ಪಾಡು ಪಟ್ಟದ್ದಂನೂ ನಿಂಮ ದಯವಂನೂ ನೋಡಿ, ಪಾಪಿಯಾದ ನಾನು ಕೆಟ್ಟ ಕಂಣುಗಳಿಂದ ಮಾಡಿದ ಲೆಖ್ಖವಿಲ್ಲದ ಪಾಪಗಳ ನನಗೆ ತಾಳಿಕೊಳ್ಳಿ, ಸ್ವಾಮಿ. (೧ ಪರಲೋಕದ.)

ದಿವ್ಯ ಗುರುವಾಗಿರುವ ನಂನ ಜೇಸುವೇ, ದೇವರವರು ತಿರು ಕರ್ಣಗಳಲ್ಲಿ ಪಾಡು ಪಟ್ಟದ್ದಂನೂ ನಿಂಮ ದಯವಂನೂ ನೋಡಿ, ಪಾಪಿಯಾದ ನಾನು ಕೆಟ್ಟ ಕಿವಿಗಳಿಂದ ಮಾಡಿದ ಲೆಖ್ಖವಿಲ್ಲದ ಪಾಪಗಳ ನನಗೆ ತಾಳಿಕೊಳ್ಳಿ, ಸ್ವಾಮಿ. (೧ ಪರಲೋಕದ.)

ದಿವ್ಯ ಗುರುವಾಗಿರುವ ನಂನ ಜೇಸುವೇ, ದೇವರವರು ತಿರು ನಾಸಿಕದಲ್ಲಿ ಪಾಡು ಪಟ್ಟದ್ದಂನೂ ನಿಂಮ ದಯವಂನೂ ನೋಡಿ, ಪಾಪಿಯಾದ ನಾನು ಕೆಟ್ಟ ಮೂಗಿನಿಂದ

ಮಾಡಿದ ಲೆಖ್ಖವಿಲ್ಲದ ಪಾಪಗಳ ನನಗೆ ತಾಳಿಕೊಳ್ಳಿ, ಸ್ವಾಮಿ. (೧ ಪರಲೋಕದ.)

ದಿವ್ಯ ಗುರುವಾಗಿರುವ ನಂನ ಜೇಸುವೇ, ದೇವರವರು ತಿರು ವದನದಲ್ಲಿ ಪಾಡು ಪಟ್ಟದ್ದಂನೂ ನಿಮ್ಮ ದಯವಂನೂ ನೋಡಿ, ಪಾಪಿಯಾದ ನಾನು ಕೆಟ್ಟ ಬಾಯಿಂದ ಮಾಡಿದ ಲೆಖ್ಖವಿಲ್ಲದ ಪಾಪಗಳ ನನಗೆ ತಾಳಿಕೊಳ್ಳಿ, ಸ್ವಾಮಿ. (೧ ಪರಲೋಕದ.)

ದಿವ್ಯ ಗುರುವಾಗಿರುವ ನಂನ ಜೇಸುವೇ, ದೇವರವರು ತಿರು ಕೆಂನೆಯಲ್ಲಿ ಪಾಡು ಪಟ್ಟದ್ದಂನೂ ನಿಂಮ ದಯವಂನೂ ನೋಡಿ, ಪಾಪಿಯಾದ ನಾನು ಕೆಟ್ಟ ಮುಖದಿಂದ ಮಾಡಿದ ಲೆಖ್ಖವಿಲ್ಲದ ಪಾಪಗಳ ನನಗೆ ತಾಳಿಕೊಳ್ಳಿ, ಸ್ವಾಮಿ. (೧ ಪರಲೋಕದ.)

ದಿವ್ಯ ಗುರುವಾಗಿರುವ ನಂನ ಜೇಸುವೇ, ದೇವರವರು ತಿರು ಹಸ್ತಗಳಲ್ಲಿ ಪಾಡು ಪಟ್ಟದ್ದಂನೂ ನಿಂಮ ದಯವಂನೂ ನೋಡಿ, ಪಾಪಿಯಾದ ನಾನು ಕೆಟ್ಟ ಕೈಗಳಿಂದ ಮಾಡಿದ ಲೆಖ್ಖವಿಲ್ಲದ ಪಾಪಗಳ ನನಗೆ ತಾಳಿಕೊಳ್ಳಿ, ಸ್ವಾಮಿ. (೧ ಪರಲೋಕದ.)

ದಿವ್ಯ ಗುರುವಾಗಿರುವ ನಂನ ಜೇಸುವೇ, ದೇವರವರು ತಿರು ಹೃದಯದಲ್ಲಿಯೂ ತಿರು ಮಗ್ಗಲಿನಲ್ಲಿಯೂ ಪಾಡು ಪಟ್ಟದ್ದಂನೂ ನಿಮ್ಮ ದಯವಂನೂ ನೋಡಿ, ಪಾಪಿಯಾದ ನಾನು ಕೆಟ್ಟ ಹೃದಯದಿಂದ ಮಾಡಿದ ಲೆಖ್ಖವಿಲ್ಲದ ಪಾಪಗಳ ನನಗೆ ತಾಳಿಕೊಳ್ಳಿ, ಸ್ವಾಮಿ. (೧ ಪರಲೋಕದ.)

ದಿವ್ಯ ಗುರುವಾಗಿರುವ ನಂನ ಜೇಸುವೇ, ದೇವರವರು ತಿರು ಪಾದಗಳಲ್ಲಿ ಪಾಡುಪಟ್ಟದ್ದಂನೂ ನಿಂಮ ದಯವಂನೂ ನೋಡಿ, ಪಾಪಿಯಾದ ನಾನು ಕೆಟ್ಟ ಕಾಲುಗಳಿಂದ ಮಾಡಿದ ಲೆಖ್ಖವಿಲ್ಲದ ಪಾಪಗಳ ನನಗೆ ತಾಳಿಕೊಳ್ಳಿ, ಸ್ವಾಮಿ.
(೧ ಪರಲೋಕದ.)

ದಿವ್ಯ ಗುರುವಾಗಿರುವ ನಂನ ಜೇಸುವೇ, ದೇವರವರು ತಿರು ಶರೀರದ ಸರ್ವ ಅವಯುವಗಳಲ್ಲಿಯೂ ಪಾಡು ಪಟ್ಟದ್ದಂನೂ ನಿಂಮ ದಯವಂನೂ ನೋಡಿ, ಪಾಪಿಯಾದ ನಾನು ಕೆಟ್ಟ ಶರೀರದ ಸಕಲ ಅವಯುವಗಳಲ್ಲಿಯೂ ಮಾಡಿದ ಲೆಖ್ಖವಿಲ್ಲದ ಪಾಪಗಳ ನನಗೆ ತಾಳಿಕೊಳ್ಳಿ, ಸ್ವಾಮಿ.
(೧ ಪರಲೋಕದ.)

ಪಿತನಿಗೂ ಸುತನಿಗೂ ಸ್ಪಿರಿತುಸಾಂರ್ತುವಿಗೂ...

ಪರಿಶುದ್ಧ ಕನ್ಯಾಸ್ತ್ರೀಯಾದ ದೇವ ಮಾತೆಯೇ, ಪಾಪಿಯಾಗಿರುವ ನಾನು ಮಾಡಿದ ಇಂಥ ಮೂವತ್ತು ಮೂರು ಮಣೀ ಜಪವಂನು ಮೂವತ್ತು ಮೂರು ಮಾಣಿಕ್ಯಗಳೋಪಾದೆಯಲ್ಲಿ ನಿಂಮ ದಿವ್ಯ ಕುಮಾರನ ತಿರು ಪಾದದಲ್ಲಿ ಒಪ್ಪಿಸಿ ಅಲಂಕರಿಸ ಬೇಕೆಂದು ಬೇಡಿ ಕೊಳ್ಳುತ್ತಿದ್ದೇನೆ, ತಾಯೇ. ನಿಂಮ ದಿವ್ಯ ಕುಮಾರನು ಈ ಭೂಲೋಕದಲ್ಲಿ ಮೂವತ್ತು ಮೂರು ವರುಷ ಸಂಚಾರ ಮಾಡಿದ ಮಹಿಮೆಗೆ ಸ್ತೋತ್ರವಾಗುವದಾಗೂ, ಉತ್ತರಿಸುವ ಸ್ಥಳದಲ್ಲಿ ಇರುವ ಆತ್ಮಗಳೆಲ್ಲಾ ಶೀಘ್ರದಲ್ಲಿ ಮೋಕ್ಷಕ್ಕೆ ಹೋಗುವ ದಾಗೂ, ಪಾಪಿಯಾಗಿರುವ ನಾನು ನಿಮ್ಮಂನು ಪ್ರಾರ್ಥಿಸಿ

ಬೇಡಿ ಕೊಳ್ಳುತ್ತಿದ್ದೇನೆ. ತಾಯೇ, ದಯ ಮಾಡಿ. (೧ ಪರಲೋಕದ, ೧ ನಮೋ ದೇವ.)

ಪಂಚ ಘಾಯಗಳ ಕುರಿತ ಜಪವು.

ನಂನ ಜೇಸುನಾಥರೇ, ನಾನು ಮಾಡಿದ ಪಾಪಗಳಿಗಾಗಿ ಮಹಾ ಮನಸ್ತಾಪ ಪಡುತ್ತಾ ಇದ್ದೇನೆ: ನಿಮ್ಮ ಎಡ ಪಾದದ ತಿರು ಘಾಯವಂನು ನೋಡಿ, ನಂನ ಪಾಪಗಳ ತಾಳಿ, ನಂನಂನು ರಕ್ಷಿಸಿ ಕೊಳ್ಳಿ, ಸ್ವಾಮಿ. (೧ ಪರಲೋಕದ ಮಂತ್ರ ಹೇಳಿ ಕೊಳ್ಳುವದು.)

ನಂನ ಜೇಸುನಾಥರೇ, ನನಗೆ ಶತೃಗಳಾದ ಲೋಕ ಶರೀರ ಪಿಶಾಚ ಎಂಬ ಮೂರು ಶತೃಗಳಂನು ನಾನು ಜಯಿಸುವಹಾಗೂ, ನಿಂಮ ದೇವಿಷ್ಟ ಪ್ರಸಾದವು ನಂನ ವಾಸದಲ್ಲಿ ಸ್ಥಿರವಾಗಿರುವಹಾಗೂ, ನಿಂಮ ಬಲ ಪಾದದ ತಿರು ಘಾಯವಂನು ನೋಡಿ, ನನಗೆ ಅನುಗ್ರಹವನ್ನು ಮಾಡ ಕರುಣಿಸಿರಿ, ಸ್ವಾಮಿ. (೧ ಪರಲೋಕದ.)

ನಂನ ಜೇಸುನಾಥರೇ, ನಾನು ಮಾಡಿದ ಪಾಪಗಳಿಂದ ನರಕಕ್ಕೆ ಹೋಗ ಪಾತ್ರನಾದೆನು ಹೌದು: ಆದರೆ ನಿಂಮ ಎಡ ಕೈಯ್ಯ ತಿರು ಘಾಯವಂನು ನೋಡಿ, ನರಕದಿಂದ ನಂನಂನು ರಕ್ಷಿಸಿಕೊಳ್ಳಿ, ಸ್ವಾಮಿ. (೧ ಪರಲೋಕದ.)

ನಂನ ಜೇಸುನಾಥರೇ, ನಾನು ಮಾಡಿದ ಪಾಪಗಳ ಕಾರಣದಿಂದ ಅನೇಕ ಸಾರಿ ಹೋಗಲಾಡಿಸಿದ ನಿಂಮ

ಮೋಕ್ಷದಾನಂದ ಭಾಗ್ಯವಂನು, ನಿಂಮ ಬಲ ಕೈಯ್ಯ ತಿರು ಘಾಯವಂನು ನೋಡಿ, ನನಗೆ ತಿರಿಗಿ ಪ್ರಸಾದಿಸ ಕರುಣಿಸಿರಿ, ಸ್ವಾಮೀ. (೧ ಪರಲೋಕದ.)

ನಂನ ಜೇಸುನಾಥರೇ, ಸಕಲವಾದ ವಸ್ತುಗಳ ಮೇಲೆ ಉಂಟಾದ ಪಕ್ಷಕ್ಕಿಂತ ದೇವರವರ ಮೇಲೆ ಅಧಿಕ ಭಕ್ತಿಯಾಗಿ ಇರುವದಾಗೆ, ನಿಂಮ ಮಗ್ಗಲಿನ ತಿರು ಘಾಯವಂನು ನೋಡಿ, ನನಗೆ ದಯವಂನು ಮಾಡಿರಿ, ಸ್ವಾಮೀ. (೧ ಪರಲೋಕದ.)

ಪರಿಶುದ್ಧ ಕನ್ಯಾಸ್ತ್ರೀಯಾಗಿ ಇರುವ ಅಚ್ಯಕ್ಷಿಷ್ಟ ಮಾತೆಯೇ, ಪಾಪಿಯಾಗಿರುವ ನಾನು ಮಾಡಿದ ಈ ಪಂಚ ಘಾಯಗಳ ಜಪವಂನು ನಿಂಮ ದಿವ್ಯ ಕುಮಾರನ ಪಾದದಲ್ಲಿ ಐದು ರತ್ನಗಳೋಪಾದಿಯಲ್ಲಿ ಒಪ್ಪಿಸಿ ಅಲಂಕರಿಸಬೇಕೆಂದು ನಿಂಮಂನು ಬೇಡಿಕೊಳ್ಳುತ್ತಿದ್ದೇನೆ, ತಾಯೇ. ಉತ್ತರಿಸುವ ಸ್ಥಳದಲ್ಲಿ ಇರುವ ಆತ್ಮಗಳೆಲ್ಲಾ ಶೀಘ್ರದಲ್ಲಿ ಮೋಕ್ಷಕ್ಕೆ ಹೋಗುವದಾಗಲೂ, ನಂನ ಲೆಖ್ಖವಿಲ್ಲದ ಪಾಪಗಳ ತಾಳಿಕೊಂಬುವದಾಗಲೂ, ನನಗಾಗಿ ನಿಂಮ ದಿವ್ಯ ಕುಮಾರಂನ ಎಡಬಿಡದೆ ಪ್ರಾರ್ಥಿಸಿಕೊಳ್ಳಿ, ತಾಯೇ. (೧ ನಮೋ ದೇವ.)

ಆ ಮೇಲೆ ಸ್ವಾಮಿ ಅನುಭವಿಸಿದ ಕಷ್ಟಗಳ ಸ್ಮರಣೆ ಮಾಡಿ,
ಕೊಳ ತಕ್ಕದ್ದು.

ನಂನ ಕರ್ತರಾದ ಜೇಸು ಕ್ರೀಸ್ತುವೇ, ದೇವರವರು ಲೋಕ ರಕ್ಷಿಸುವದಕ್ಕೆ ಹುಟ್ಟಲಾ, ವೃಕ್ಷಛೇದನೆಯಂನು

ಪಡಲೂ, ಕೆಂನೆಯಲ್ಲಿ ಮುದ್ದಂನಿಕ್ಕಿದ ದ್ರೋಹಿಯಾದ ಜೂದಾಸೆಂಬವನಿಂದ ತೋರಿಸಲ್ಪಡಲೂ, ಹಗ್ಗಗಳಿಂದ ಬಿಗಿಯಲ್ಪಡಲೂ, ಕೆಂಗುರಿಯುಪ್ಪಂದ ಬಲಿಗೆ ಎಳೆಯಲ್ಪಡಲೂ, ಅಂನಾಸ್, ಕೈಫಾಸ್, ಪೋಂಸ್ಯ ಪಿಲಾತು, ಹೆರೋದೆಸೆಂಬವರ ಬಳಿಯಲ್ಲಿ ಅನಾಚಾರವಾಗಿ ಒಪ್ಪಿಸಲ್ಪಡಲೂ, ಅಸತ್ಯ ಸಾಕ್ಷಿಗಳ ನುಡಿದ ವೈರಿಗಳಿಂದ ಅಲ್ಲಡವರಾಗಲ್ಪಡಲೂ, ಎಲ್ಲಾ ಶರೀರದಲ್ಲಿಯೂ ಕೊಲ್ಲಲ್ಪಡಲೂ, ದೂಷಿಸಲ್ಪಡಲೂ, ತಿರು ಮುಖದಲ್ಲಿ ಉಗಿಯಲ್ಪಡಲೂ, ಶಿರಸ್ಸು ಘುಟ್ಟಿ ಮುಳ್ಳಿನ ಕಿರೀಟದಿಂದ ಚುಚ್ಚಲ್ಪಡಲೂ, ಬಿದುರು ಕೋಲಿನಿಂದ ತಿರು ತಲೆಯ ಮೇಲೆ ಬಡಿಯಲ್ಪಡಲೂ, ನಿಂಮ ತಿರು ಮುಖವಂನು ವಸ್ತ್ರದಿಂದ ಮುಚ್ಚಲ್ಪಡಲೂ, ನಿಂಮ ತಿರು ಅರ ಜಟ್ಟೆಯಂನು ತೆಗೆಯಲ್ಪಡಲೂ, ಕಬ್ಬಿಣದ ಮೊಳೆಗಳಿಂದ ಶಿಲ್ವೆಯಲ್ಲಿ ಜಡಿಯಲ್ಪಡಲೂ, ಜಡಿಯಲ್ಪಟ್ಟ ಶಿಲ್ವೆಯು ಮೇಲೆ ಎತ್ತಲ್ಪಡಲೂ, ಇಬ್ಬರು ಕಳ್ಳರ ಮಧ್ಯದಲ್ಲಿ ನೆಡಲ್ಪಡಲೂ, ನಿಂಮ ದಾಹದಲ್ಲಿ ಪಿಚ್ಚಿನೊಂದಿಗೆ ಕಲಸಿದ ದ್ರಾಕ್ಷೀ ಹಂಣಿನ ಹುಳಿಯಾದ ರಸವಂನು ಕುಡಿಸಲ್ಪಡಲೂ, ನಿಮ್ಮ ಮಗ್ಗಲು ಈಟಿಯಿಂದ ತಿವಿಯಲ್ಪಡಲೂ ಚಿತ್ತವಾಗಿದ್ದಿರಿಯಲ್ಲಾ. ತಂದೆಯೊಡನೆಯೂ ಸ್ಪಿರಿತು ಸಾಂಕ್ತುವಿನೊಡನೆಯೂ ಒಬ್ಬ ದೇವರೂ ಆಳುವವರೂ ನನ್ನ ಕರ್ತರೂ ಆದಂಥ ಜೇಸು ಕ್ರೀಸ್ತುವೇ, ಪಾಪಿಯಾದವನೂ ಅಪಾತ್ರನಾದವನೂ ಆದ ನಾನು ನೆನಸಿಕೊಂಡು ಬರುವ ನಿಂಮ ತಿರು ನಿರ್ಬಂಧ

ಗಳಂನೂ ಶಿಲ್ಬೆಯಂನೂ ಮರಣವಂನೂ ನೋಡಿ, ನಿಮ್ಮ ಕೂಡ ಶಿಲ್ಬೆಯಲ್ಲಿ ಕೊಂಧಾಕಲ್ಪಟ್ಟ ಕಳ್ಳನಿಗೆ ಪ್ರಸಾದಿಸಿದ ಮೋಕ್ಷವಂನು ನಾನು ಸಹಾ ಪಡೆಯುವ ಹಾಗೆ ದಯ ಮಾಡಿ, ಸ್ವಾಮಿ. ಆಮೆನ್ ಜೇಸು.

(ಆ ಮ್ಯೇಲೆ ಅವನವನು ತಂನ ತಂನ ಭಕ್ತಿಗೆ ತಕ್ಕಷ್ಟು ಪ್ರಾರ್ಥನೆಗಳ ಕೇಳಿಕೊಂಬುವದು.)

ಜೇಸುವಿನ ತಿರು ನಾಮಧೇಯದ ಪ್ರಾರ್ಥನೆ.

ಸ್ವಾಮಿ, ಕೃಪೆಯಂನು ಮಾಡಿ;
ಕ್ರೀಸ್ತುವೇ, ಕೃಪೆಯಂನು ಮಾಡಿ;
ಸ್ವಾಮಿ, ಕೃಪೆಯಂನು ಮಾಡಿ;
ಕ್ರೀಸ್ತುವೇ, ನಂಮಂನು ಆಲೈಸಿರಿ;
ಕ್ರೀಸ್ತುವೇ, ನಂಮ ಪ್ರಾರ್ಥನೆ ಚನ್ನಾಗಿ ಕೇಳಿಕೊಳ್ಳಿ.

ಪರಲೋಕದ ದೆಶೆಯಿಂದ ಪಿತನಾಗಿದ್ದಂಥ ದೇವರೇ, ನಮಗೆ ದಯ ಮಾಡಿ, ಸ್ವಾಮಿ.

ಲೋಕವ ರಕ್ಷಿಸುವ ಸುತನಾಗಿದ್ದಂಥ ದೇವರೇ, ನಮಗೆ ದಯ ಮಾಡಿ, ಸ್ವಾಮಿ.

ಸ್ಪಿರಿತು ಸಾಂತುವಾಗಿದ್ದಂಥ ದೇವರೇ, ನಮಗೆ ದಯ ಮಾಡಿ, ಸ್ವಾಮಿ.

ಅಭ್ಯರ್ಣಶಿಷ್ಟ ತ್ರಿಮ ತ್ರಿತ್ವಂತರಾಗಿದ್ದಂಥ ಏಕ ದೇವರೇ, ನಮಗೆ ದಯ ಮಾಡಿ, ಸ್ವಾಮಿ.

ಜೀವಿಯಾದ ಸರ್ವೇಶ್ವರನಿಗೆ ಸುತನಾದ ಜೇಸುವೇ,

ಪಿತನಾದ ಸರ್ವೇಶ್ವರನಿಗೆ ಕಾಂತಿಯಾದ ಜೇಸುವೇ,

ನಿತ್ಯ ಪ್ರಕಾಶದ ನಿರ್ಮಲತ್ವವಾದ ಜೇಸುವೇ,

ಉನ್ನತವಾದ ಮಹಿಮೆಯುಳ್ಳ ರಾಯನಾದ ಜೇಸುವೇ,

ನೀತಿ ಆದಿತ್ಯನಾದ ಜೇಸುವೇ,

ಕನ್ಯಾ ಸ್ತ್ರೀಯಾದ ಮರಿಯಮ್ಮನವರಿಗೆ ಪುತ್ರನಾದ ಜೇಸುವೇ,

ಮಹಾ ಸ್ನೇಹಕ್ಕೆ ಪಾತ್ರನಾದ ಜೇಸುವೇ,

ಆಶ್ಚರ್ಯಕ್ಕೆ ಆಸ್ಪದವಾದ ಜೇಸುವೇ,

ಸರ್ವ ವಲ್ಲಭವುಳ್ಳ ದೇವರಾದ ಜೇಸುವೇ,

ಬರುವ ಯುಗಂಗಳಿಗೆ ಪಿತನಾದ ಜೇಸುವೇ,

ಪರಮ ಯೋಚನೆಗಳಿಗೆ ದಿವ್ಯ ದೂತನಾದ ಜೇಸುವೇ,

ಮಿತಿ ಇಲ್ಲದ ಸತ್ವವುಳ್ಳ ಜೇಸುವೇ,

ಅತ್ಯಂತ ತಾಳ್ಮೆಯುಳ್ಳ ಜೇಸುವೇ,

ಸಾಂಗೋಪಾಂಗವಾದ ಶ್ರವಣವುಳ್ಳಂಥ ಜೇಸುವೇ,

(ನಮಗೆ ದಯ ಮಾಡಿ, ಸ್ವಾಮಿ.)

ದಾಕ್ಷಿಣ್ಯ ಮಧುರ ಗುಣಗಳುಳ್ಳಂಥ ಜೇಸುವೇ,
ವಿರಕ್ತತನಕ್ಕೆ ಪ್ರಿಯನಾದ ಜೇಸುವೇ,
ನಂಮ ಮೇಲೆ ಕರುಣ ಕಟಾಕ್ಷವುಳ್ಳ ಜೇಸುವೇ,
ಸಮಾಧಾನದ ದೇವರಾದ ಜೇಸುವೇ,
ಪ್ರಾಣಕ್ಕೆ ಕಾರಣವಾದ ಜೇಸುವೇ,
ಸಕಲ ಪುಣ್ಯಗಳಿಗೆ ಮಾತೃಕೆಯಾದ ಜೇಸುವೇ,
ಆತ್ಮಗಳ ರಕ್ಷಣ್ಯವ ಅಪೇಕ್ಷಿಸುವಂಥ ಜೇಸುವೇ,
ನಂಮ ದೇವರಾದ ಜೇಸುವೇ,
ನಂಮ ಆಶ್ರಯವಾದ ಜೇಸುವೇ,
ದರಿದ್ರರಿಗೆ ಪಿತನಾದ ಜೇಸುವೇ,
ವಿಶ್ವಾಸಿಗಳಿಗೆ ನಿಕ್ಷೇಪವಾದ ಜೇಸುವೇ,
ಸದ್ಗುರುವಾದ ಜೇಸುವೇ,
ನಿಜವಾದ ಪ್ರಕಾಶವಾಗಿರುವ ಜೇಸುವೇ,
ನಿತ್ಯ ಜ್ಞಾನವಾದ ಜೇಸುವೇ,
ಮಿತಿ ಇಲ್ಲದ ಮೇಲು ಸ್ವರೂಪಿಯಾದ ಜೇಸುವೇ,
ನಂಮ ಜೀವವೂ ಮಾರ್ಗವೂ ಆದ ಜೇಸುವೇ,
ಸಮ್ಮನಸ್ಸುಗಳಿಗೆ ಪರಮಾನಂದವಾದ ಜೇಸುವೇ,
ಪೂರ್ವ ಪಿತೃಗಳಿಗೆ ರಾಯನಾದ ಜೇಸುವೇ,
ದೀರ್ಘ ದರ್ಶಿಗಳಿಗೆ ಜ್ಞಾನವಂ ಪಾಲಿಸುವಂಥ ಜೇಸುವೇ,
ಅಪೋಸ್ತಲರಿಗೆ ಗುರುವಾದ ಜೇಸುವೇ,
ಸುವಿಶೇಷಕರಿಗೆ ಬೋಧಕರ್ತನಾದ ಜೇಸುವೇ,

ನಮಗೆ ದಯ ಪಾಲಿಸು, ಸ್ವಾಮಿ.

ವೇದ ಸಾಕ್ಷಿಗಳಿಗೆ ತ್ರಾಣವಾದ ಜೇಸುವೇ, ನಮಗೆ ದಯ ಮಾಡಿ, ಸ್ವಾಮಿ.

ಸ್ತುತಿಯರುಗಳಿಗೆ ಪ್ರಕಾಶವಾದ ಜೇಸುವೇ, ನಮಗೆ ದಯ ಮಾಡಿ, ಸ್ವಾಮಿ.

ವಿರಕ್ತರಂನು ಶುದ್ಧಕರಿಸುವ ಜೇಸುವೇ, ನಮಗೆ ದಯ ಮಾಡಿ, ಸ್ವಾಮಿ.

ಮುಕ್ತಿ ಕೊಂಡಿದ ಸಮಸ್ತರಿಗೆ ಕಿರೀಟವಾದ ಜೇಸುವೇ, ನಮಗೆ ದಯ ಮಾಡಿ, ಸ್ವಾಮಿ.

ದಯಾಪರರಾಗಿದ್ದು, ಜೇಸುವೇ, ನಂಮ ಪಾಪಗಳ ತಾಳಿಕೊಳ್ಳಿ.

ದಯಾಪರರಾಗಿದ್ದು, ಜೇಸುವೇ, ನಂಮ ಪ್ರಾರ್ಥನೇ ಪ್ರಕಾರ ದಯ ಮಾಡಿ.

ಯಾವ ಪಾಪವೂ ಬಾರದ ಹಾಗೆ,

ನಿಂಮ ಕೋಪವು ಬಾರದ ಹಾಗೆ,

ಪಿಶಾಚನ ತಂತ್ರಗಳಲ್ಲಿ ನಾವು ಸಿಕ್ಕದ ಹಾಗೆ,

ಮೋಕಂದ ಆಶೆ ಬಾರದ ಹಾಗೆ,

ನಿತ್ಯ ಸಾವು ಬಾರದ ಹಾಗೆ,

ನೀವು ಕೊಟ್ಟ ಒಳ್ಳೇ ವಿಚಾರಗಳ ನಾವು ತಳ್ಳದ ಹಾಗೆ,

ದೇವರವರ ಮನುಷ್ಯಾವತಾರದ ಪರಮ ರಹಸ್ಯವಂನು ನೋಡಿ,

ದೇವರವರು ಮನುಷ್ಯನಾಗಿ ಹುಟ್ಟಿದ್ದಂನು ನೋ (ಡಿ,

ಜೇಸುವೇ, ನಂಮಂನ ರಕ್ಷಿಸು ಸ್ವಾಮಿ.

ದೇವರವರ ಬಾಲ್ಯವಂನು ನೋಡಿ,
ದೇವರವರ ದಿವ್ಯ ಚರಿತ್ರೆಗಳನ್ನು ನೋಡಿ,
ದೇವರವರ ಪ್ರಯಾಸಗಳಂನು ನೋಡಿ,
ದೇವರವರ ಜೀವ ಸಂಕಟವಂನೂ ಪೀಡೆಯಂನೂ ನೋಡಿ,
ದೇವರವರ ಶಿಲ್ವೆಯಂನೂ ಸಕಲರಿಂದ ಕೈ ಬಿಡಲ್ಪಟ್ಟದಂನೂ ನೋಡಿ,
ದೇವರವರ ಉಪದ್ರ ನಿರ್ಬಂಧಗಳಂನು ನೋಡಿ,
ದೇವರವರ ಮರಣವಂನೂ ಸಮಾಧಿಯಲ್ಲಿ ಸ್ಥಾಪನೆಯಂನೂ ನೋಡಿ,
ದೇವರವರ ದೇರುಂದ ಉತ್ಥಾನವಂನು ನೋಡಿ,
ದೇವರವರ ಮೋಕ್ಷಕ್ಕೆ ಆರೋಹಣವಂನು ನೋಡಿ,
ದೇವರವರ ಸಂತೋಷಗಳಂನು ನೋಡಿ,
ದೇವರವರ ಮರುಮೇ ಪ್ರತಾಪವಂನು ನೋಡಿ,

ಜೇಸುವೇ ನಂಮಂನು ರಕ್ಷಿಸಿ ಕೊಳ್ಳಿ.

ಲೋಕದ ಪಾಪಗಳ ಪರಿಹರಿಸುವ ಸರ್ವೇಶ್ವರನ ಕುಂಗುರೀಮರಿಯೇ:— ನಂಮ ಪಾಪಗಳನ್ನು ತಾಳಿಕೊಳ್ಳಿ, ಸ್ವಾಮಿ.

ಲೋಕದ ಪಾಪಗಳ ಪರಿಹರಿಸುವ ಸರ್ವೇಶ್ವರನ ಕುಂಗುರೀಮರಿಯೇ, — ನಂಮ ಪ್ರಾರ್ಥನೇ ಪ್ರಕಾರ ಕರುಣಿಸಿರಿ, ಸ್ವಾಮಿ.

ಲೋಕದ ಪಾಪಗಳ ಪರಿಹರಿಸುವ ಸರ್ವೇಶ್ವರನ ಕುಂಗುರೀಮರಿಯೇ, — ದಯವಾಗಿರಿ, ಸ್ವಾಮಿ.

ಜೇಸುವೇ, ನಂಮ ಪ್ರಾರ್ಥನೆ ಕೇಳಿಕೊಳ್ಳಿ;
ಜೇಸುವೇ, ನಂಮ ಪ್ರಾರ್ಥನೆ ಅಂಗೀಕರಿಸಿ ಕೊಳ್ಳಿ.
(೧ ಪರಲೋಕದ ಮಂತ್ರ.)

ಪ್ರಾರ್ಥಿಸಿಕೊಂಬುವದು.

ಮಿತಿಯಿಲ್ಲದ ದಯಾ ಸ್ವರೂಪಿಯಾಗಿದ್ದಂಥ ಜೇಸುವೇ, ನಿಂಮ ತಿರು ನಾಮಧೇಯದ ಬಲ್ಮೆಯಿಂದ ನಮಗೆ ಜೇಸುವಾಗಿರಿ; ನಿಮಗೆ ನಾವು ಪ್ರಿಯವಾದ ಶಿಷ್ಯರಾಗುವಹಾಗೆ ಕರುಣಿಸಿಕೊಳ್ಳಿ; ನಿಂಮ ದಯದಿಂದ ಈ ದಿವ್ಯ ಹೆಸರು ನಂಮ ಹೃದಯದಲ್ಲಿ ಬರೆಯ ಕರುಣಿಸಿರಿ, ಸ್ವಾಮಿ. ನಮಗೆ ಜೀವವಾದ ಜೇಸುವೇ, ನಂಮ ಭಕ್ತಿಗೆ ಕಾರಣವಾದ ಜೇಸುವೇ, ನಂಮ ಮರಣದ ತರುಣದಲ್ಲಿ ಜೇಸುವೆಂಬ ವಚನವಂನು ಉಚ್ಚರಿಸಿ ಇಂಥ ಹೆಸರಿನ ಮೇಲೆ ಭಕ್ತಿಯು ಐಕ್ಯದಿಂದ ನಿಂಮಲ್ಲಿ ನಾವು ಐಕ್ಯವಾಗುವಹಾಗೆ ಅನುಗ್ರಹಿಸಿಕೊಳ್ಳಿ. ಜೇಸುವೇ, ಜೇಸುವೇ, ಜೇಸುವೇ, ನಂಮಂನು ರಕ್ಷಿಸಿಕೊಳ್ಳಿ. ಆಮೆನ್ ಜೇಸು.

(ನಮೋ ರಾಣಿಯೇ ಮಂತ್ರ ಹೇಳಿಕೊಂಬುವದು.)

ಅರ್ಚ್ಯಶಿಷ್ಟ ಮರಿಯಂಮನವರ ನಾಮಧೇಯ
ವಂನು ಕುರಿತು ಬೇಡಿಕೊಂಬುವದು.

ಪರಲೋಕಕ್ಕೆ ರಾಣಿಯಾಗಿರುವ ಅರ್ಚ್ಯಶಿಷ್ಟ ಮರಿಯೇ,

ನಮಗಾಗಿ ನಿಂಮ ದಿವ್ಯ ಕುಮಾರಂನ ಬೇಡಿ ಕೊಳ್ಳಿ, ತಾಯೇ. (೧ ನಮೋ ದೇವ.)

ಭೂಲೋಕಕ್ಕೆ ಒಡತಿಯಾಗಿರುವ ಅಚ್ಚರ್ಯ. ಮರಿಯೇ, ನಮಗಾಗಿ ನಿಂಮ ದಿವ್ಯ ಕುಮಾರಂನ ಬೇಡಿ ಕೊಳ್ಳಿ, ತಾಯೇ. (೧ ನಮೋ ದೇವ.)

ಸಮುದ್ರದ ನಕ್ಷತ್ರವಾದಂಥ ಅಚ್ಚರ್ಯ. ಮರಿಯೇ, ನಮಗಾಗಿ ನಿಂಮ ದಿವ್ಯ ಕುಮಾರಂನ ಬೇಡಿಕೊಳ್ಳಿ, ತಾಯೇ. (೧ ನಮೋ ದೇವ.)

ಪರಿಶುದ್ಧ ವಿರಕ್ತತ್ವದಿಂದ ಸಕಲ ಮೋಕ್ಷವಾಸಿಗಳಿಗಿಂತ ಅಧಿಕ ಮಹಿಮೆಯುಳ್ಳ ಅಚ್ಚರ್ಯ. ಮರಿಯೇ, ನಮಗಾಗಿ ನಿಂಮ ದಿವ್ಯ ಕುಮಾರಂನ ಬೇಡಿ ಕೊಳ್ಳಿ, ತಾಯೇ. (೧ ನಮೋ ದೇವ.)

ಅಳವಡಿಸ ಕೂಡದ ಜ್ಞಾನ ಪ್ರಕಾಶದಿಂದ ಅಲಂಕರಿಸಲ್ಪಟ್ಟವಳಾಗಿರುವ ಅಚ್ಚರ್ಯ. ಮರಿಯೇ, ನಮಗಾಗಿ ನಿಂಮ ದಿವ್ಯ ಕುಮಾರಂನ ಬೇಡಿ ಕೊಳ್ಳಿ, ತಾಯೇ. (೧ ನಮೋ ದೇವ.)

ಅಚ್ಚರ್ಯಶಿಷ್ಟ ಆಗುಸ್ತೀನೆಂಬವರ ಬೇಡುದಲೆ.

ಅಚ್ಚರ್ಯಶಿಷ್ಟ ಮರಿಯಂಮನವರೇ, ಶರಣಾರ್ಥಿಯರಿಗೆ ಆಧಾರವಾಗಿರಿ, ಧೈರ್ಯ ತಪ್ಪುವವರಂನು ಸಂತೈಸಿರಿ, ಅಳುವವರಿಗೆ ದುಃಖೋಪಶಮನವಾಗಿರಿ, ಸಕಲ ಜನರಿ

ಗಾಗಿ ಬೇಡಿ ಕೊಳ್ಳಿ, ಗುರುಪಟ್ಟಕ್ಕೆ ಸಂಮಂಧವಾದವರಿಗೆ ಆಸ್ಪದವಾಗಿರಿ, ಭಕ್ತಿಶಾಲಿ ಸ್ತ್ರೀ ಜನರಿಗಾಗಿ ಪ್ರಾರ್ಥಿಸಿಕೊಳ್ಳಿ; ನಿಂಮ ತಿರು ನಾಮವಂನು ಹೊಗಳಿ ಸ್ತುತಿಸುವವರು ಯಾರೋ, ಅವರೆಲ್ಲರು ನಿಂಮ ಶರಣದ ಅನುಭವವಂನು ಪಡೆಯುವರಾಗಲಿ.

ಪ್ರಾರ್ಥಿಸಿಕೊಂಬುವದು.

ಸರ್ವ ವಲ್ಲಭರಾದ ಸರ್ವೇಶ್ವರಾ, ಪರಿಶುದ್ಧ ಕನ್ಯಾಸ್ತ್ರೀಯಾದ ಮರಿಯಂಮನವರ ನಾಮಧೇಯದಲ್ಲಿಯೂ ಶರಣದಲ್ಲಿಯೂ ಆನಂದಿಸಿ ಕೊಂಡಿರುವ ನಿಂಮ ಶೇವಕರಾದ ನಾವು, ಅಂಮನವರ ಮಧುರ ಬೇಡುದಲೆಗಳಿಂದ, ಈ ಭೂಲೋಕದಲ್ಲಿಯೂ ಸಕಲ ಮೋಸಗಳಲ್ಲಿ ರಕ್ಷಣೆಯನ್ನೂ, ಮೋಕ್ಷದಲ್ಲಿಯೂ ನಿರಂತರವಾದ ಆನಂದಗಳನ್ನೂ ಪಡೆಯುವ ಹಾಗೆ ಕರುಣಿಸ ಬೇಕೆಂದು ನಿಮ್ಮನ್ನು ಬೇಡಿ ಕೊಳ್ಳುತ್ತಾ ಇದ್ದೇವೆ. ಈ ಬಿಂನಹ ಜೇಸುನಾಥರಂನು ನೋಡಿ ಪ್ರಸಾದಿಸಿರಿ, ಸ್ವಾಮಿ. ಆಮೆನ್ ಜೇಸು.

ದೇವರ ತಾಯಿಗೆ
ತಂನಂನು ಕಾಣಿಕೆಯಾಗಿ ಒಪ್ಪಿಸುವದು.

ಪರಿಶುದ್ಧ ಕನ್ಯಾಸ್ತ್ರೀಯೂ ದೇವರ ಮಾತೆಯೂ ಆಗಿರುವ ಅಜ್ಯರ್ಶಿಷ್ಟ ಮರಿಯಂಮನವರೇ, ನಿಂಮ ದಾಸರಾಗಿರುವದಕ್ಕೆ ನಾವು ಪಾತ್ರರಾದವರಲ್ಲ; ಆದರೆ ನಿಂಮ

అపరిమితవాద కరుణాదిగళంను అరితు, నిమ్మంను పాల్యైసువదక్కె తాత్పర్యవాగిద్దేవె. ఇదర నిమిత్త నమగె కావలాగిరువ సంమనస్సుగళ ముందె నావీగళే నింమ శరణవంను హొక్కొండు నంమ రాణియూ నంమ గతియూ నంమ తాయ్యూ నీవే సరి ఎందు స్థిరవాగి హేళుత్తా ఇద్దేవె. ఆదరె ఈ దినదల్లి నింమ ఆశ్రయవంను మాడికొండు ఇంను అపార మందిగళు నిమ్మ భక్తరాగి నిమ్మ శేవెయంను మాడువహాగె కూడిదష్టు ప్రయాస పడువెవు. నింమ దివ్య కుమారనాద జేసునాథరు నమగోస్కర సురిద నెత్తరన్ను నోడి, నిమ్మ భక్తరొళగె నమ్మంను కూడిసికొండు, నావు ఎందెందిగూ నింమ గులామరెందు ఎణిసల్పడువహాగూ, నంమ కృత్యదల్లి నీతివంతరాగిద్దు నింమ దివ్య కుమారన అనుగ్రహవంగొండు విచారదిందలూ వాక్యదిందలూ క్రియెయిందలూ అవరంనూ నింమంనూ నోయిసదహాగూ పాలిసికొళ్ళి. మధురవాద తాయే, ఈ దేశాంతరదల్లియూ నంమంను మరెయదె మరణద అవధియల్లియూ నంమంను కైబిడదె సంత్యైసికొళ్ళి, తాయే. ఆమెన్ జేసు.

పితనాద సర్వేశ్వరనిగె కుమార్తియే, సుతనాద సర్వేశ్వరనిగె తాయే, స్పిరితుసాంక్తువాద

ಸರ್ವೇಶ್ವರನಿಂದ ಅಲಂಕರಿಸಲ್ಪಟ್ಟ ತ್ರಿತ್ವನಾಗಿರುವ ಏಕ ಸರ್ವೇಶ್ವರನ ಪ್ರಧಾನ ದೇವಾಲಯವೇ, ನಿಮಗೆ ಮಂಗಳ, ಮಂಗಳ, ಮಂಗಳ, ಮಿತಿ ಇಲ್ಲದ ಸ್ತೋತ್ರವುಂಟಾಗಲಿ. ಆಮೆನ್ ಜೇಸು.

ಕಾವಲಾಗಿರುವ ಸಂಮನಸ್ಸಾದವರಂನು ಕುರಿತು ಕೇಳತಕ್ಕದ್ದು.

ಸರ್ವೇಶ್ವರನು ತಂನ ಕೃಪಾಕಟಾಕ್ಷದಿಂದ ನಮಗೆ ಕೈಕೊಟ್ಟು ನಡಿಸುವಹಾಗೆ ಪಾಲಿಸಿದಂಥ ಮಹಾ ಪ್ರಭುಧರೂ ದೇವದೂತರೂ ನಂಮ ಕಾವಲೂ ಆಗಿರುವ ಸಂಮನಸ್ಸಾದವರೇ, ನಿಂಮಂನು ನಾವು ನಮಸ್ಕರಿಸುತ್ತಾ ಇದ್ದೇವೆ. ಇಷ್ಟು ವರುಷ ಮೊದಲಿನಿಂದ ಇಷ್ಟು ಬಗೆಯಲ್ಲಿ ಎಡಬಿಡದೆ ಅಪಾತ್ರರಾದ ನಂಮಂನು ಕಾಪಾಡಿಕೊಂಡು ನಂಮ ಆತ್ಮವಂನೂ ಶರೀರವಂನೂ ರಕ್ಷಿಸುವದರಿಂದ, ನಿಮಗೆ ಸಾಲಬಿದ್ದವರಾಗಿಯೂ ನೀವು ಮಾಡಿದ ಉಪಕಾರಗಳಂನು ಅರಿತಂಥವರಾಗಿಯೂ ಇರುವ ನಾವು ನಿಮಗೆ ಸ್ತೋತ್ರ ಮಾಡುತ್ತಿದ್ದೇವೆ. ಈ ದಿನದಲ್ಲಿ ನಮ್ಮ ಆತ್ಮವಂನೂ ಶರೀರವಂನೂ ನಿಮ್ಮ ಕೈವಶ ಮಾಡಿ, ನಿಂಮ ಆಧಾರದಲ್ಲಿ ನಾವು ನಷ್ಟ ಪಡದಹಾಗೂ, ದೇವಿಷ್ಟವಂನು ಹೋಗಲಾಡಿಸದಹಾಗೂ, ದಯ ಮಾಡಿ ಎಂದು ನಿಂಮಂನು ಬೇಡಿಕೊಳ್ಳುತ್ತಿದ್ದೇವೆ.

ಪ್ರಾರ್ಥಿಸಿಕೊಂಬುವದು.

ಸರ್ವಶಕ್ತಿಯುಳ್ಳವರೂ ಆದ್ಯಂತವಿಲ್ಲದವರೂ ಆಗಿರುವ ಸರ್ವೇಶ್ವರಾ, ದೇವರವರು ನಿಂಮ ಮಿತಿಯಿಲ್ಲದ ಕೃಪೆಯಿಂದ ಮನುಷ್ಯರೆಲ್ಲರು ಹುಟ್ಟಿದಾಕ್ಷಣದಲ್ಲಿ ಅವರವರ ಶರೀರಕ್ಕೂ ಆತ್ಮಕ್ಕೂ ಒಬ್ಬೊಬ್ಬ ವಿಶೇಷವಾದ ಸಂಮನಸ್ಸಂನು ಕಾವಲಾಗಿ ಪಾಲಿಸಿದಿರಲ್ಲಾ. ದೇವರವರು ನಮಗೆ ಕೃಪಾಕಟಾಕ್ಷವಾಗಿ ಪಾಲಿಸಿದಂಥ ಸಂಮನಸ್ಸಂನು ನಾವು ವಿನಯಾಚಾರವಾಗಿಯೂ ಸ್ನೇಹವಾಗಿಯೂ ಅನುಸರಿಸಿ, ನಿಂಮ ದಯದಿಂದಲೂ ಅವರ ಆಧಾರದಿಂದಲೂ ಕಾಯಲ್ಪಟ್ಟು ಮೋಕ್ಷರಾಜ್ಯದಲ್ಲಿ ದೇವರವರಮೇಲೆ ಮುಗಿಯದ ಕಾಲ ಸ್ತೋತ್ರ ಮಾಡುವಹಾಗೆ ಮಾಡ ಕರುಣಿಸಿರಿ. ನಿಂಮೊಡನೆಯೂ ಸ್ಪಿರಿತು ಸಾಂತುವಿನೊಡನೆಯೂ ಏಕ ದೇವರಾಗಿರುವ ನಿಂಮ ದಿವ್ಯ ಸುತನೂ ನಂಮ ಆಳಿದವರೂ ಆದ ಜೇಸುಕ್ರೀಸ್ತುವನ್ನು ನೋಡಿ, ಈ ಪ್ರಾರ್ಥನೆ ಪಾಲಿಸ ಕರುಣಿಸಿರಿ, ಸ್ವಾಮಿ. ಆಮೆನ್ ಜೇಸು.

ಪರಮ ದೂತರುಗಳಂನೂ ಸಕಲ ಅರ್ಚ್ಯಶಿಷ್ಟವರಂನೂ ಕುರಿತು ಕೇಳತಕ್ಕದ್ದು.

ಮೋಕ್ಷವಾಸಿಗಳೇ, ಸರ್ವೇಶ್ವರನ್ನ ಪ್ರತ್ಯಕ್ಷವಾಗಿ ನೋಡಿಕೊಂಡು ಅವರಿಗೆ ಐಕ್ಯನಾದವರಾಗಿ ಇರುವದರಿಂದಲೂ, ನೀವು ನಮಗೋಸ್ಕರ ಬೇಡಿಕೊಂಡು ಅನೇಕ ಸಹಾಯ

ಗಳ ಸರ್ವೇಶ್ವರನು ನಿಮ್ಮ ಮುಖಾಂತ್ರದಿಂದ ನಮಗೆ ಪಾಲಿಸಿದ್ದರಿಂದಲೂ, ತಿರು ಸಭೆ ಕಟ್ಟು ಮಾಡಿದ ಪ್ರಕಾರವಾಗಿ ನಿಮಗೆ ಸಾಧಾರಣವಾದ ನಮಸ್ಕಾರವನ್ನು ಮಾಡುತ್ತಿದ್ದೇವೆ.

(ತಲೆ ಬಗ್ಗಿಸಿ ನಮಸ್ಕಾರವನು ಮಾಡುವದು.)

ಬೇಡುದಲೆಗಳು.

ಉತ್ತರಿಸುವ ಸ್ಥಳದಲ್ಲಿರುವ ಆತ್ಮಗಳೆಲ್ಲಾ ಶೀಘ್ರದಲ್ಲಿ ಮೋಕ್ಷಕ್ಕೆ ಹೋಗುವರಾಗಿ, ಸಂಮನಸ್ಸುಗಳೊಳಗೆ ಪ್ರಧಾನ ಸಂಮನಸ್ಸಾಗಿರುವ ಅರ್ಚ್ಯಶಿಷ್ಟ ಮಿಖಯೇಲ್, ಗಬ್ರಿಯೇಲ್, ರಫಯೇಲೆಂಬ ಸಂಮನಸ್ಸಾದವರನ್ನು ಕುರಿತು: ೧ ಪರಲೋಕದ, ೧ ನಮೋ ದೇವ ಮಂತ್ರ ಹೇಳಿಕೊಂಬುವದು.

ಪ್ರಧಾನ ಗುರುವಾಗಿರುವ ಅರ್ಚ್ಯಶಿಷ್ಟ ಪಾಪು ಸ್ವಾಮಿಯವರು ನೆನಸಿದ ಧರ್ಮ ಕಾರ್ಯಗಳೆಲ್ಲಾ ಅನುಕೂಲವಾಗುವ ಹಾಗೂ, ಈ ಸಿಂಧು ರಾಜ್ಯಕ್ಕೆ ಸತ್ಯ ಉಪದೇಶವನು ಬೋಧಿಸುವದಕ್ಕೆ ಬಂದಂಥ ಗುರುಸ್ವಾಮಿಯವರ ಆತ್ಮ ಶರೀರವನು ಸರ್ವೇಶ್ವರ ಸ್ವಾಮಿ ಒಂದು ಮೋಸವಿಲ್ಲದೆ ಕಾದು ರಕ್ಷಣೆ ಮಾಡಿಕೊಂಡು ಬರುವ ಹಾಗೂ, ಅವರು ಈ ರಾಜ್ಯದಲ್ಲಿ ವಾಸವಾಗಿರುವ ಹಾಗೂ, ಕ್ರೀಸ್ತುವರಾದ ಅರಸುಗಳೂ ಪ್ರಮುಥ ರಾಯರುಗಳೂ ತಂಮೊಳಗೆ ತಾವು ಸಮಾಧಾನವಾಗಿರುವ ಹಾಗೂ, ಶೋಧನೆ

ಪಡುವ ಮಂದಿಗಳಿಗೆ ಧೈರ್ಯವೂ, ಪಾಪಿಗಳಿಗೆ ಪರಿಹಾರವೂ, ವ್ಯಾಧಿಕಾರರಿಗೆ ಆರೋಗ್ಯವೂ, ಕಷ್ಟದಲ್ಲಿ ಇರುವಂಥವರಿಗೆ ಸಂತೋಷವೂ, ನಂಮ ಬಂಧು ಮಿತ್ರರುಗಳಿಗೂ ನಮಗೆ ಉಪಕಾರ ಮಾಡುವಂಥ ಸಕಲವಾದ ಜನರಿಗೂ ದೇವ ಕೃಪೆಯು ಉಂಟಾಗುವಹಾಗೂ, ಅರ್ಚ್ಯಶಿಷ್ಟ ಸಭೆಯಲ್ಲಿ ಉಂಟಾದ ಸಕಲ ಅವಸರಗಳಲ್ಲಿ ಒಂದು ನಷ್ಟ ಬಾರದೆ ಸ್ಥಿರ ಉಂಟಾಗುವಹಾಗೂ, ಅರ್ಚ್ಯಶಿಷ್ಟ ದೇವರ ತಾಯ್ಯಂನು ಕುರಿತು: ೧ ಪರಲೋಕದ, ೧ ನಮೋ ದೇವ....

ಹೊಸ್ತಾಗಿ ಸತ್ಯ ಉಪದೇಶವಂನು ಕೇಳಿದಂಥವರಿಗೆ ವಿಶ್ವಾಸ ಭಕ್ತಿ ವರ್ಧಿಸುವಹಾಗೂ, ಈ ರಾಜ್ಯದ ಕರ್ತರಿಗೆ ಧರ್ಮಬುದ್ಧಿ ಧರ್ಮಜ್ಞಾನ ಬರುವಹಾಗೂ, ಅಜ್ಞಾನಿಗಳಿಗೂ ಪಾಪಿಗಳಿಗೂ ಪತಿತರಿಗೂ ಜೂದರಿಗೂ ದೇವರ ಕೃಪೆ ಉಂಟಾಗುವಹಾಗೂ, ಈ ರಾಜ್ಯಕ್ಕೆ ಮಹಾಂತರಾಗಿಯೂ ವಿಶೇಷವಾದ ಕಾವಲಾಗಿಯೂ ಇರುವ ದೇವದೂತರಂನೂ ಸ್ನಾಪಕರಾದ ಅರ್ಚ್ಯಶಿಷ್ಟ ಜೊವಾನಿಯಂನೂ ಅಪೋಸ್ತಲರಾದ ಅರ್ಚ್ಯಶಿಷ್ಟ ಪೇದ್ರನಂನೂ ಪೌಲನಂನೂ ಅರ್ಚ್ಯಶಿಷ್ಟ ಥೋಮೆಯಂನೂ ಅರ್ಚ್ಯಶಿಷ್ಟ ಇಗ್ನಾಸಿ ರಾಯರಂನೂ ಕ್ಸವೇರಿ ರಾಯರಂನೂ ಅರ್ಚ್ಯಶಿಷ್ಟ ಅಂತೋಣಿ ರಾಯರಂನೂ ಕಸ್ತಿಕಾರರಿಗೆ ಸಹಾಯವಾಗಿರುವ ಅರ್ಚ್ಯಶಿಷ್ಟ ಅಂನಂಮನವರಂನೂ ಕುರಿತು: ೧ ಪರಲೋಕದ, ೧ ನಮೋ ದೇವ....

ನಾವು ಹೋಗುವಂಥ ದಾರಿಗಳಲ್ಲಿಯೂ ಸಂಚರಿಸುವಂಥ ಜನರುಗಳಲ್ಲಿಯೂ ತಿರುಗಾಡುವಂಥ ಸ್ಥಳಗಳಲ್ಲಿಯೂ, ಮಂದಿಗಳ ಸಹವಾಸದಿಂದಲೂ ಹುಳ ಜಂತು ಮೊದಲಾದ ವಿಘ್ನ ವಿರೋಧಗಳಿಂದಲೂ, ನೀರಿನಲ್ಲಿಯೂ ಬೆಂಕಿಯಲ್ಲಿಯೂ ಬೀಳದ ಹಾಗೂ, ನರಿ ನಾಯಿ ಕೊಲೆ ಪಾತರ ಮೊದಲಾದ ದುಷ್ಟ ಮೃಗ ದುಷ್ಟ ಜಂತು ದುಷ್ಟ ಕಳ್ಳರ ಕೈಯಲ್ಲಿ ಸಿಕ್ಕದ ಹಾಗೂ, ನಾವು ಶತ್ರುಗಳ ಶೋಧನೆಯಲ್ಲಿ ಸಿಕ್ಕದೆ ಸಕಲ ಮೋಸ ಅವಸರ ಇಕ್ಕಟ್ಟುಗಳಲ್ಲಿ ನಂಮಂನು ಕಾದು ರಕ್ಷಣೆ ಮಾಡಿ ಕೊಂಡು ಬರುವ ಹಾಗೂ, ವಿಶೇಷವಾಗಿ ಈ ದಿನದಲ್ಲಿ ನಂಮ ಆತ್ಮವಂನು ಸರ್ವೇಶ್ವರ ಸ್ವಾಮಿ ಒಂದು ಮೋಸವಿಲ್ಲದೆ ರಕ್ಷಿಸುವ ಹಾಗೂ, ಅತ್ಯುತ್ಕೃಷ್ಟ ದೇವ ಮಾತೆಯಾದವಳ ಪರಿಶುದ್ಧ ವಿರಕ್ತ್ವವೆಂಬ ಪುಣ್ಯಕ್ಕೆ ಮಿತಿಯಿಲ್ಲದ ಸ್ತೋತ್ರವುಂಟಾಗಲಿ ಎಂದು: ಮೂರು ನಮೋ ದೇವ ಮಂತ್ರ ಹೇಳಿಕೊಂಬುವದು.

ಸುತ್ತಮುತ್ತು ಇರುವ ರಾಜ್ಯ ದ್ವೀಪಾಂತ್ರಗಳಲ್ಲಿಯೂ ಈ ಸ್ಥಳದಲ್ಲಿಯೂ ಇಂನು ಬೇರೆ ಬೇರೆ ರಾಜ್ಯಗಳಲ್ಲಿಯೂ ಮರಣ ಹೊಂದಿದ ಕ್ರೀಸ್ತುವರ ಆತ್ಮಗಳು ಉತ್ತರಿಸುವ ಸ್ಥಳದಲ್ಲಿದ್ದರೆ, ಗುರುಗಳ ಆತ್ಮಗಳೂ ಪರದೇಶಿಗಳ ಆತ್ಮಗಳೂ ಯಾರು ವಿಚಾರಿಸದೆ ದಿಕ್ಕಿಲ್ಲದೆ ಮರಣ ಹೊಂದಿದವರ ಆತ್ಮಗಳೂ, ಪಾಪಸಂಕೀರ್ತನ ದೇವ ಪ್ರಸಾದ ಅವಧಿಸುಭ್ಯಂಗ ಅವಸರವಾದ ಪೂಜೆ ದೊರಕದೆ ಮರಣ ಹೊಂದಿದ ಕ್ರೀಸ್ತುವರ ಆತ್ಮಗಳೂ, ನಂಮ ಸ್ನೇಹಿತರ ಆತ್ಮ

ಗಳೂ ಬಂಧು ಮಿತ್ರರ ಆತ್ಮಗಳೂ ನಮಗೆ ಉಪಕಾರ ಅಪಕಾರ ಮಾಡಿದವರ ಆತ್ಮಗಳೂ, ನೀರಿನಲ್ಲಿಯೂ ಬೆಂಕಿಯಲ್ಲಿಯೂ ನರಿ ನಾಯಿ ಕೊಲೆ ಪಾತಕರವಲ್ಲಿಯೂ ಮರಣ ಹೊಂದಿದ ಕ್ರೀಸ್ತುವರ ಆತ್ಮಗಳೂ, ಕರೆ ಸಂಕೋಲೆಯಲ್ಲಿ ಸಿಕ್ಕಿ ಸಾವಾದ ಪಾಪವಿಲ್ಲದೆ ಮರಣ ಹೊಂದಿದವರ ಆತ್ಮಗಳೂ, ಇನ್ನೂ ಉತ್ತರಿಸುವ ಸ್ಥಳದಲ್ಲಿ ಹೆಚ್ಚಾದ ಕಷ್ಟ ಪಡುವಂಥ ಆತ್ಮಗಳೂ ಶೀಘ್ರದಲ್ಲಿ ಮೋಕ್ಷಕ್ಕೆ ಹೋಗುವ ಹಾಗೆ, ಅವರವರ ಕಾವಲಾಗಿರುವ ಸಂಮನಸ್ಸಾದವರಂನೂ ಅವರವರ ಹೆಸರುಂಟಾದ ಅರ್ಚ್ಯಶಿಷ್ಟವರಂನೂ ಕುರಿತೂ, ನಮ್ಮ ಪಾಪಕ್ಕಾಗಿ ಶಿಲ್ವೆಯ ಮರದಲ್ಲಿ ಪಾಡುಪಟ್ಟ ಜೇಸುನಾಥ ಸ್ವಾಮಿಯವರ ಪಂಚ ಘಾಯಗಳಿಗೆ ಸ್ತೋತ್ರವಾಗಿಯೂ, ಜೇಸುವೆಂಬ ದಿವ್ಯನಾಮಧೇಯವಂನು ಕುರಿತೂ: ಮೂರು ಪರಲೋಕದ ಮಂತ್ರವಂನು ಬೇಡಿಕೊಂಬುವದು.

ಅಜ್ಞಾನ ತಗ್ಗುವಹಾಗೂ ಸತ್ಯವೇದ ಪ್ರಬಲವಾಗುವಹಾಗೂ, ಜ್ಞಾನ ತಂದೆ ತಾಯಿಗಳಿಗಾಗಿಯೂ ಜ್ಞಾನ ಮಕ್ಕಳಿಗಾಗಿಯೂ ಬೇಡಿಕೊಳ್ಳ ಹೇಳಿದ ಮಂದಿಗಳಿಗಾಗಿಯೂ, ದಾರಿ ಪ್ರೈಣ ಮಾಡುವಂಥ ಕ್ರೀಸ್ತುವರಿಗಾಗಿಯೂ ಮುತ್ತಿಗೆ ಕೋಟೆ ಕರೆ ಸಂಕೋಲೆಯಲ್ಲಿ ಸಿಕ್ಕಿರುವ ಕ್ರೀಸ್ತುವರಿಗಾಗಿಯೂ, ಕೆಟ್ಟು ಹೋದ ಪತಿತರು ಜ್ಞಾನ ಮಾರ್ಗಕ್ಕೆ ತಿರುಗುವ ಹಾಗೂ, ಸಾವಾದ ಪಾಪದಲ್ಲಿ ಬಿದ್ದಿರುವವರು ಸಾವಾದ ಪಾಪವಂನು ಬಿಟ್ಟು ಸ್ವಾಮಿಯ ದಿವ್ಯ ಚಿತ್ತಕ್ಕೆ

ಸರಿಯಾಗಿ ನಡೆಯುವಹಾಗೂ, ವಿಶೇಷವಾಗಿ ನಾವೆಲ್ಲರು ಪಾಪದ ಮಾರ್ಗವಂನು ಬಿಟ್ಟು ಪುಣ್ಯಮಾರ್ಗದಲ್ಲಿ ಸ್ಥಿರವಾಗಿ ನಡೆಯುವಹಾಗೂ, ನಮಗೆ ದುರ್ಮರಣ ಸಿಕ್ಕದೆ ಒಳ್ಳೇ ಮರಣ ಸಿಕ್ಕುವಹಾಗೂ, ನಂಮ ಮರಣದ ತರುಣದಲ್ಲಿ ಪಾಪ ಸಂಕೀರ್ತನ ದೇವ ಪ್ರಸಾದ ಅವಧಿಯಭ್ಯಂಗ ದೊರಕುವಹಾಗೂ, ನಂಮ ಮರಣದ ಸಮಯದಲ್ಲಿ ಜೇಸು ಮರಿಯೇ ಜೋಸೇಫ ಎಂಬ ಪಾರ್ಶ್ವದಲ್ಲಿ ಒಳ್ಳೇ ಮರಣದ ದಯ ಪಾಲಿಸುವ ಹಾಗೂ, ಈ ರಾಜ್ಯಕ್ಕೆ ಮಳೆ ಬೆಳೆ ವರ್ಧಿಸುವ ಹಾಗೂ, ಈ ರಾಜ್ಯಕ್ಕೆ ಬಂದಿರುವಂಥ ಕೆಟ್ಟ ಆಪತ್ತು ವಿಪತ್ತುಗಳೆಲ್ಲಾ ಪರಿಹಾರವಾಗುವಹಾಗೂ, ಸಕಲ ಅರ್ಚ್ಯಶಿಷ್ಟವರಂನು ಕುರಿತು: ೧ ಪರಲೋಕದ, ೧ ನಮೋ ದೇವ ಮಂತ್ರ ಹೇಳಿಕೊಂಬುವದು.

ಪರಮ ರಹಸ್ಯವಾಗಿರುವ ದೇವ ಪ್ರಸಾದಕ್ಕೂ ಜನ್ಮ ಪಾಪದ ಕಳಂಕಿಲ್ಲದೆ ಉದ್ಭವಿಸಿದ ನಂಮ ಒಡತಿಯಾದ ಮುಕ್ತಿಯಾಂದಿದ ಅರ್ಚ್ಯಶಿಷ್ಟ ಮರಿಯಂಮನವರ ಪರಿಶುದ್ಧ ವಿರಕ್ತತ್ವಕ್ಕೂ ಮಿತಿ ಇಲ್ಲದ ಸ್ತೋತ್ರವುಂಟಾಗಲಿ!

ಸ್ವಾಮಿ, ನಂಮ ಪ್ರಾರ್ಥನೆಯಂನು ಚಂನಾಗಿ ಕೇಳಿಕೊಳ್ಳಿ;—— ನಾವು ಕೂಗುವ ಶಬ್ದ ದೇವರವರ ಸನ್ನಿಧಾನದ ಪರಿಯಂತರ ಬರುವದಾಗಲಿ.

ಪ್ರಾರ್ಥಿಸಿಕೊಂಬುವದು.

ಸ್ವಾಮಿ, ಶುದ್ಧ ಮನಸ್ಸಾಗಿ ಸಾಷ್ಟಾಂಗವಾಗಿ ಬಿದ್ದಿರುವ

ಈ ಕುಟುಂಬವನ್ನು, ಯಾವಾಗಲೂ ಪರಿಶುದ್ಧ ಕನ್ಯಾಸ್ತ್ರೀಯೂ ಮುಕ್ತಿ ಹೊಂದಿದವಳೂ ನಮ್ಮ ಒಡತಿಯೂ ಆಗಿರುವ ಅರ್ಚ್ಯಶಿಷ್ಟ ಮರಿಯಮ್ಮನವರ ಬೇಡುದಲೆಯಿಂದ, ಸಕಲ ಶತ್ರುಗಳ ಶೋಧನೆಗಳಲ್ಲಿ ಬೀಳದ ಹಾಗೆ ಪ್ರಸನ್ನರಾಗಿ ದಯದೊಡನೆ ರಕ್ಷಿಸಿ ಕೊಳ್ಳಿ, ಸ್ವಾಮಿ. ಆಮೆನ್ ಜೇಸು.

ನಮ್ಮನ್ನು ಸೃಷ್ಟಿಸಿದಂಥ ಪಿತನೇ, ನಮ್ಮನ್ನು ಬಿಡಿಸಿ ರಕ್ಷಿಸಿದಂಥ ಸುತನೇ, ನಮ್ಮನ್ನು ಶುದ್ಧಿಕರಿಸಿದಂಥ ಸ್ಪೀರಿತು ಸಾಂತುವಾಗಿರುವ ಸರ್ವೇಶ್ವರನ ಪರಮ ಭದ್ರಾಸನವೇ, ನಿಮಗೆ ಆದಿಯಲ್ಲಿ ಇದ್ದ ಹಾಗೆ ಈಗಲೂ ಯಾವಾಗಲೂ ಸದಾಕಾಲದಲ್ಲಿಯೂ ಸ್ತೋತ್ರವುಂಟಾಗಲಿ. ಆಮೆನ್ ಜೇಸು.

ದಯಾಪರರಾದ ಸರ್ವೇಶ್ವರಾ, ನಿಮ್ಮ ಪೂರ್ಣ ದಯ ಮಾಡಿ, ಮುಗಿಯದ ಕಾಲವೂ ನಿತ್ಯವಾದ ಭಾಗ್ಯವೂ ಆನಂದವಾದ ಸ್ಥಳವೂ ಸುಖದಲ್ಲಿಯೂ ಸಮಾಧಾನದಲ್ಲಿಯೂ ನಮಗುಂಟಾಗುವ ಹಾಗೂ, ಉತ್ತರಿಸುವ ಸ್ಥಳದಲ್ಲಿರುವ ಆತ್ಮಗಳೆಲ್ಲಾ ಶೀಘ್ರದಲ್ಲಿ ಮೋಕ್ಷಕ್ಕೆ ಹೋಗುವ ಹಾಗೂ ದೇವರವರನ್ನು ಪ್ರಾರ್ಥಿಸಿಕೊಳ್ಳುತ್ತೇವೆ. ನಮ್ಮ ಪಾಪಕ್ಕಾಗಿ ಶಿಲ್ವೆಯಮರದಲ್ಲಿ ಪಾಡುಪಟ್ಟ ಜೇಸುನಾಥಸ್ವಾಮಿಯವರ ದಿವ್ಯ ಹೃದಯವನ್ನೂ ತಾಯ್ಯಾದವಳ ವ್ಯಾಕುಲವಾದ ತಿರು ಹೃದಯವನ್ನೂ ನೋಡಿ, ನಮ್ಮ ಪ್ರಾರ್ಥನೆ ಚೆನ್ನಾಗಿ ಕೇಳಿಕೊಳ್ಳಿ, ಸ್ವಾಮಿ.

(೧ ಪರಲೋಕದ, ೧ ನಮೋ ದೇವ ಮಂತ್ರ ಹೇಳಿ ಕೊಂಬುವದು.)

ರಾತ್ರೀ ಕಾಲದ ಜಪವು.

(ಉದಯಕಾಲದಲ್ಲಿ ದಿನದ ಕೆಲಸಗಳ ಮೇಲೆ ಸ್ವಾಮಿಯು ಆಶೀರ್ವಾದ ಬರುವ ಹಾಗೆ ಜಪ ಮಾಡುವದು ಅವಸರವಾಗಿರುವ ಮೇರೆಗೆ, ರಾತ್ರೀ ಕಾಲದಲ್ಲಿಯೂ ತೀರಿ ಹೋದ ದಿನದೊಳಗೆ ಸ್ವಾಮಿ ನಮ್ಮ ಆತ್ಮಕ್ಕೂ ಶರೀರಕ್ಕೂ ಕರುಣಿಸಿದ ಉಪಕಾರಗಳಿಗೆ ಸ್ತೋತ್ರವಾಗಿಯೂ, ನಾವು ಮಾಡಿದ ಪಾಪಗಳಿಗೆ ಪರಿಹಾರವಾಗಿಯೂ, ತೊಡಗುವ ರಾತ್ರಿಯಲ್ಲಿ ಆತ್ಮಕ್ಕೂ ಶರೀರಕ್ಕೂ ಪಿಶಾಚಿ ತಂತ್ರಗಳಾದರೂ ವ್ಯಾಧಿ ಸಾವಾದರೂ ಬಾರದ ಹಾಗೆಯೂ, ಜಪ ಮಾಡುವದೇ ಘನವಾದ ಅವಸರವಾಗಿದೆ. ಹೀಗಿರಲಾಗಿ ಕ್ರೀಸ್ತುವರುಗಳೆಲ್ಲರು ಮಠದಲ್ಲ್ಯಾಗಲಿ ಮನೆಯಲ್ಲ್ಯಾಗಲಿ ಜನರು ಕೂಡಿಕೊಂಡು, ಮುಂಚೆ ಬರೆಯಲ್ಪಟ್ಟ ಜಪ ಮಂತ್ರಗಳನ್ನು ಬೇಡಿಕೊಳ್ಳುವರು. ಅಧಿಕ ತೊಂದರೆ ಇರುವ ಸಮಯದಲ್ಲಿ, ೫೩ ಮಣೀ ಜಪವನ್ನು ಬಿಟ್ಟು, ಮಂತ್ರಗಳನ್ನಾದರೂ ಬೇಡಿಕೊಳ್ಳುವದಾಗಲಿ.)

(ಶಿಲ್ವೆಯ ಗುರುತು.)

ಸರ್ವವ್ಯಾಪಿಯಾಗಿದ್ದಂಥ ಸರ್ವೇಶ್ವರಾ, ನಿಮ್ಮ ಸಂನಿ-

ಧ್ಯಾನದಲ್ಲಿದ್ದು ಈ ರಾತ್ರೀಕಾಲದಲ್ಲಿ ದೇವರವರಿಗೆ ಆರಾಧನೆ ಸ್ತೋತ್ರಗಳಂನು ಸಲ್ಲಿಸುವದಕ್ಕೆ ಬಂದಿದ್ಧೇನೆ ; ನಿಮಗೆ ಮಟ್ಟಿಲ್ಲದ ಆರಾಧನೆ ಪೂಜೆಯುಂಟಾಗಲಿ, ಸ್ವಾಮಿ. (ತಲೆ ಬಗ್ಗಿಸಿ ಆರಾಧನೆ ಮಾಡುವದು.)

(ಆ ಮೇಲೆ ವಿಶ್ವಾಸ ನಂಬಿಕೆ ದೇವಸ್ನೇಹದ ಮಂತ್ರಗಳ ಹೇಳಿಕೊಂಬುವದು.)

ದೇವ ವಿಶ್ವಾಸದ ಮಂತ್ರವು.

ಸತ್ಯವಂತರಾಗಿದ್ದಂಥ ಸರ್ವೇಶ್ವರಾ ಸ್ವಾಮಿ, ತಿರುಸಭೆ ವಿಶ್ವಾಸಿಸಿ ನಮಗೆ ಬೋಧಿಸುವಂಥ ಸತ್ಯಗಳಂನು ದೇವರವರೇ ಅರುಹಿಸಿದ ಮುಖಾಂತ್ರದಿಂದ ಘಟ್ಟಿ ಮನಸ್ಸಾಗಿ ವಿಶ್ವಾಸಿಸುತ್ತಾ ಇದ್ಧೇನೆ, ಸ್ವಾಮಿ. ಪಿತನೂ ಸುತನೂ ಸ್ಪಿರಿತು ಸಾಂತ್ತೂ ಮೂವರಾಗಿದ್ದಾಗ್ಯೂ ಒಬ್ಬ ಸರ್ವೇಶ್ವರನೇ. ನಿಂವೊಳಗೆ ಎರಡನೇ ಮಂದಿಯಾಗಿರುವ ಸುತನಾದ ಸರ್ವೇಶ್ವರನು, ಯಾವಾಗಲೂ ಕನ್ಯಾಸ್ತ್ರೀಯ್ಯಾಗಿದ್ದಂಥ ಅರ್ಚ್ಯಶಿಷ್ಟ ಮರಿಯಂಮನವರ ಗರ್ಭದಲ್ಲಿ ಉದ್ಭವಿಸಿ ಮನುಷ್ಯನಾಗಿ ಹುಟ್ಟಿ, ಮನುಷ್ಯರು ಮಾಡಿದ ಪಾಪಗಳಿಗೋಸ್ಕರ ಶಿಲ್ವೆಯಲ್ಲಿ ಕಠಿನ ಮರಣವಂನು ಹೊಂದಿ, ಮೂರನೇ ದಿವಸದಲ್ಲಿ ಜೀವಂತರಾಗಿ ಎದ್ದು, ಆತ್ಮ ಶರೀರದೊಂದಿಗೆ ಮಹಾ ಒಡ್ಡೋಲಗವಾಗಿ ನಾಲ್ವತ್ತನೇ ದಿವಸದಲ್ಲಿ ಮೋಕ್ಷಕ್ಕೆ ಚಿತ್ತೈಸಿದರೆಂದೂ, ಮತ್ತು ಸದಾಕಾಲ ಅಕ್ಷಯವಾಗಿದ್ದಂಥ ನಂನ ಆತ್ಮಕ್ಕೂ ಪುನರುತ್ಥಾನವಾದ

నంన శరీరక్కూ మోక్షవంనాదరూ నరకవంనాదరూ, నాను మాడిద పాప పుణ్యక్కె తక్క హాగె, నేమిసువరెంబూ దృఢ మనదొడనె విశ్వాసిసుత్తా ఇద్దేనె, స్వామీ. నంన కర్తనే, నంన విశ్వాసవు కెడదహాగె వరవంను కరుణిస బేకెందు బేడికొళ్ళుత్తిద్దేనె, స్వామీ.

దేవ నంబికెయ మంత్రవు.

సర్వ వల్లభరాగిద్దంథ సర్వేశ్వరా, నంన రక్షకరాద జేసు క్రీస్తువిన మితి ఇల్లద ఫలగళింద ఈ భూలోకదల్లి నింమ వర ప్రసాదవంనూ, ఇంను మేలె పరలోకదల్లి మోక్షదానందవంనూ పాలిసువిరి ఎందు ఘట్టియాగి నంబి ఇద్దేనె, స్వామీ. నంన కర్తనే, దేవరవరు వాగ్దత్తవంను పాలిసిద ప్రకారదయ మాడ బేకెందు బేడికొళ్ళుత్తిద్దేనె, స్వామీ.

దేవ స్నేహద మంత్రవు.

నంన సర్వేశ్వరా స్వామీ, దేవరవరు మట్టిల్లద స్నేహక్కె పాత్రరాగిరువ కారణదింద ఎల్లక్కింత దేవరవరంను తుంబ మనదొడనె స్నేహిసుత్తిద్దేనె.

ನಂನ ಸರ್ವೇಶ್ವರಾ, ನಿಂಮಂನು ನೋಡಿ, ನಂನಂನು ನಾನು ಸ್ನೇಹಿಸುವ ಮೇಲಿಗೆ ಪರರಂನು ಸ್ನೇಹಿಸುತ್ತಿದ್ದೇನೆ, ಸ್ವಾಮಿ. ನಂನ ಕರ್ತರೇ, ಇಂಥ ಸ್ನೇಹವು ಕೆಡದಹಾಗೆ ವರವಂನು ಕರುಣಿಸ ಬೇಕೆಂದು ದೇವರವರಂನು ಬೇಡಿಕೊಳ್ಳುತ್ತಿದ್ದೇನೆ, ಸ್ವಾಮಿ. ಆಮೆನ್ ಜೇಸು.

(ಈ ಮೂರು ಮಂತ್ರಗಳ ಮೇಲೆ ಅಧಿಕಾಧಿಕವಾದ ಭಕ್ತಿ ವರ್ಧಿಸುವ ಹಾಗೆ, ಒಂದು ಮಾಸದ ದಿನಕಟ್ಟಳೆಯಾಗಿ ಅವುಗಳಂನು ಬೇಡಿಕೊಂಡವರು ಪಾಪ ಸಂಕೀರ್ತನ ಮಾಡಿ ಸತ್ಪ್ರಸಾದವಂನು ತೆಕ್ಕೊಂಡು ಅರ್ಚ್ಯ. ಪಾಪುಸ್ವಾಮಿಗಳು ನೆನಸುವ ಧರ್ಮ ಕಾರ್ಯಗಳು ಅನುಕೂಲವಾಗುವ ಹಾಗೆ ಬೇಡಿಕೊಂಡರೆ ಆ ತಿಂಗಳಲ್ಲಿ ಒಂದು ಪರಿಪೂರ್ಣ ಫಲವಂನು ೧೪ ನೇ ಬೆನೆದಿಕ್ತೆಂಬ ಅರ್ಚ್ಯ. ಪಾಪುಸ್ವಾಮಿಯವರು ಅಂಥವರಿಗೆ ಪಾಲಿಸಿದರು. ಇದಲ್ಲದೆ, ಇವುಗಳಂನು ಭಕ್ತಿಯಾಗಿ ಬೇಡಿಕೊಳ್ಳುವವರಿಗೆ ಒಂದೊಂದು ಸಾರಿಗೆ ೭ ವರುಷದ ೨೮೦ ದಿವಸ ಜ್ಞಾನ ಫಲಗಳಂನು ನೇಮಿಸಿದರು.)

(ಸರ್ವೇಶ್ವರ ಸ್ವಾಮಿ ನಮಗೆ ಮಾಡಿದ ಉಪಕಾರಗಳ ಸ್ಥಿತಿಗಳಂನು ನೆನಸಿಕೊಂಡು ಸ್ತೋತ್ರವಂನು ಮಾಡುವದು. ೨೫ ನೇ ಪರ್ರ. ಕಡೇಸ್ತೋತ್ರದಲ್ಲಿ "ಈ ರಾತ್ರೀ ಕಾಲದಲ್ಲಿ" ಎಂಬ ವಾಕ್ಯಕ್ಕೆ ಬದಲು "ಈ ದಿನದಲ್ಲಿ" ಹೇಳುವದು.

ಆ ಮೇಲೆ, ಈ ದಿನದಲ್ಲಿ ನಾವು ಮಾಡಿದ ಪಾಪಗಳು ನಮ್ಮ ನೆನಪಿಗೆ ಚಂನಾಗಿ ಬರುವ ಹಾಗೆ, ಸರ್ವೇಶ್ವರಂನ ನೋಡಿ ಬೇಡಿ ಕೊಳ್ಳುವದು :)

ಸರ್ವಜ್ಞಾನಿ ಸರ್ವವ್ಯಾಪಿ ಆಗಿದ್ದಂಥ ಸರ್ವೇಶ್ವರಾ, ನಾನು ಈ ದಿನದಲ್ಲಿ ನೆನಸಿದ್ದೆಲ್ಲಾ ಮಾತನಾಡಿದ್ದೆಲ್ಲಾ ಮಾಡಿದ ಕ್ರಿಯೆಗಳೆಲ್ಲಾ ನಿಂಮ ಕಂಣಿನಿಂದ ನೋಡಿದಿರಲ್ಲಾ, ನಿಮ್ಮ ಕಿವಿಗಳಿಂದ ಕೇಳಿದಿರಲ್ಲಾ, ನಂನ ಕರ್ಮಗಳಂನು ಒಂದನ್ನು ಬಿಡದೆ ನಿಂಮ ಸಂನಿಧಿಯಲ್ಲಿ ಬರೆದಿರಿಸಿದಿರಲ್ಲಾ, ನ್ಯಾಯ ನಿರ್ಣಯದ ದಿವಸದಲ್ಲಿ ಇಂಥ ಕರ್ಮ ನಡತೆಗಳಂನು ನನಗೂ ಸಮಸ್ತ ಮನುಷ್ಯರಿಗೂ ಪ್ರತ್ಯಕ್ಷವಾಗಿ ಬೈಲು ಮಾಡಿ ಅವುಗಳ ಮೇಲೆ ತಕ್ಕ ಹಾಗೆ ತೀರ್ವೆಯಂನಿಡುವಿರಲ್ಲಾ; ದಿವ್ಯ ರಕ್ಷಕರೇ, ನಾನು ಮಾಡಿದಂಥ ತಪ್ಪುಗಳಂನೆಲ್ಲಾ ಈ ಸಮಯದಲ್ಲಿ ನಾನು ಚಂನಾಗಿ ಜ್ಞಪ್ತಿ ಮಾಡಿಕೊಂಬುವ ಹಾಗೂ ಒಳ್ಳೇ ಮನಸ್ತಾಪದಿಂದ ಅವುಗಳನ್ನೆಲ್ಲಾ ಪರಿಹರಿಸುವ ಹಾಗೂ ನನಗೆ ದಯ ಮಾಡ ಕರುಣಿಸಿರಿ, ಸ್ವಾಮಿ. (೧ ಪರಲೋಕದ ಮಂತ್ರ.)

(ಈ ದಿನದಲ್ಲಿ ನಾವು ಮಾಡಿದ ಪಾಪಗಳಂನೆಲ್ಲಾ, ಆಡಿದ ಮಾತುಗಳಂನೆಲ್ಲಾ, ಕೈಕೊಂಡ ಕೆಟ್ಟ ವಿಚಾರಗಳಂನೆಲ್ಲಾ ನೆನಸಿಕೊಂಡು, ಒಂದೊಂದು ಪಾಪವು ಎಷ್ಟೆಷ್ಟು ಸಾರಿ ಆಯಿತೆಂದು ಆತ್ಮ ಶೋಧನೆ ಮಾಡಿ ಕೊಂಡು, ಹತ್ತು ಕಲ್ಪಣೇ ಪ್ರಕಾರ ವಿಚಾರಿಸುವ ಹಾಗೆ, ಹತ್ತು ಕಲ್ಪಣೆಯ ತಿರು ಸಭೇಕಲ್ಪಣೆಯ ಮಂತ್ರ ಹೇಳಿಕೊಳ್ಳುವದು.)

ಅವನವನು ತಂನ ಪಾಪಗಳ ಒಂದಿಷ್ಟೊತ್ತು ಶೋಧಿಸಿದ ಬಳಿಕ ಹೇಳ ತಕ್ಕದು:

ಮಿತಿ ಇಲ್ಲದ ದಯಾ ಸ್ವರೂಪವಾದಂಥ ಕರ್ತನೇ, ದ್ರೋಹಿಯೂ ಪಾಪಿಯೂ ಆಗಿರುವ ನಾನು ಮಾಡಿದ ಲೆಖ್ಖವಿಲ್ಲದ ಪಾಪಗಳ ತಾಳಿಕೊಳ್ಳಿ.

(ಮಹಾ ದಾಕ್ಷಿಣ್ಯದೊಂದಿಗೆ ಪಾಪಸಂಕೀರ್ತನದ ಮಂತ್ರವಂನು ಹೇಳಿಕೊಳ್ಳುವದು. ೫೨ ನೇ ಪತ್ರ.)

ಆ ಮೇಲೆ ಮಹಾ ಮನಸ್ತಾಪ ಪಟ್ಟು ಬೇಡಿಕೊಳ್ಳುವದು:

ಸ್ವಾಮಿ, ವಿಚಾರದಿಂದಲೂ ವಾಕ್ಯದಿಂದಲೂ ಕ್ರಿಯೆಯಿಂದಲೂ ಬಹು ಪಾಪಗಳ ಮಾಡಿದೆನು; ನಂನ ಪಾಪಗಳ ತಾಳಿಕೊಳ್ಳಿ, ಸ್ವಾಮಿ. ಸರ್ವೇಶ್ವರಾ, ಈ ಪಾಪಗಳಂನೆಲ್ಲಾ ಅರಿಯದೆ ಮಾಡಿದೆನು; ನಂನ ಪಾಪಗಳ ತಾಳಿಕೊಳ್ಳಿ, ಸ್ವಾಮಿ. (ಹೀಗೆ ೩ ಸಾರಿ.) ಇಂನು ಮುಂದೆ ಪಾಪಗಳ ಮಾಡುವದಿಲ್ಲವೆಂದು ಘಟ್ಟಿ ಮನಸ್ಸಾಗಿ ಪ್ರತಿಜ್ಞೆಯಂನು ಮಾಡುತ್ತಿದ್ಧೇನೆ, ಸ್ವಾಮಿ. ನಿತ್ಯ ಸ್ವರೂಪವಾಗಿದ್ದಂಥ ಸರ್ವ ಶಕ್ತಿಯುಳ್ಳ ಸರ್ವೇಶ್ವರಾ, ಪಿತನೂ, ಸುತನೂ ಸ್ಪೀರಿತು ಸಾಂತ್ತೂ, ತ್ರಿತ್ವೈತರಾಗಿದ್ದಂಥ ಒಬ್ಬ ನಿಶ್ಚಯವಾದ ದೇವರೇ, ನೀವು ಮೇಲಾದಂಥ ಸ್ವರೂಪವೂ ಎಲ್ಲರಿಗೆ ತಂದೆಯೂ ಎಲ್ಲರಿಗೆ ಆಧಾರವೂ ಎಲ್ಲರಿಗೆ ನಿಲಕಡೆಯೂ ಆಗಿರುವದರಿಂದ, ನಂಮ ಮೇಲೆ ಅಧಿಕ ಪ್ರಿಯವಂನು ಮಾಡಿ ಬಹು ಭಕ್ತಿಯಾಗಿದ್ಧೇನೆ, ಸ್ವಾಮಿ. ನಾನು ಪಾಪದಲ್ಲಿ ಬಿದ್ದು ಬಹು ತಪ್ಪಿದೆನೆಂದು ನೋಡಿ, ನಾನು

ಮಾಡಿದ ಪಾಪದಿಂದ ಮೋಕ್ಷದ ಭಾಗ್ಯವಂನು ಕಯೋಗಲಾಡಿಸಿಕೊಂಡು ನರಕಕ್ಕೆ ಪಾತ್ರನಾದೆನೆಂದರಿತು, ಬಹು ದುಃಖವಂಗೈದು ಬಹು ಮನಸ್ತಾಪವಾಗಿದ್ಧೇನೆ, ಸ್ವಾಮಿ. ಇಂನು ಮುಂದೆ ಪಾಪಗಳಂನೆಲ್ಲಾ ಶುದ್ಧವಾಗಿ ಬಿಟ್ಟು ಬಿಟ್ಟು, ನೀವು ಕೇಳಿದ ಹಾಗೆ ನಡೆದುಕೊಂಡು, ಸಮಯವಾದರೆ ಪಾಪ ಸಂಕೀರ್ತನವನ್ನು ಮಾಡಿ, ಪ್ರಾಯಶ್ಚಿತ್ತವಂನು ತೀರಿಸಿ, ಪಾಪ ಮಾಡುವದಿಲ್ಲವೆಂದು ಘಟ್ಟಿ ಮನಸ್ಸಾಗಿ ಪ್ರತಿಜ್ಞೆಯಂನು ಮಾಡುತ್ತಿದ್ಧೇನೆ, ಸ್ವಾಮಿ. ನೀವು ಹೀನ ಮನುಷ್ಯರಂನು ಕುರಿತು ಪಟ್ಟಂಥ ಕಷ್ಟವಂನೂ ಸುರಿದಂಥ ರಕ್ತವಂನೂ ಅನುಭವಿಸಿದಂಥ ಮರಣವಂನೂ ನೋಡಿ, ನಿಂಮ ಮಿತಿಯಿಲ್ಲದ ದಯವಂನು ಈಗಲೇ ಮಾಡ ಕರುಣಿಸಿರಿ, ಸ್ವಾಮಿ. ನಾನು ಮಾಡಿದ ದ್ರೋಹಂಗಳೆಲ್ಲಾ ತೊರೆದುಬಿಟ್ಟು ಕ್ಷಮೆಯಾಗಿ ತಾಳಿಕೊಳ್ಳಿ, ಸ್ವಾಮಿ. ಇನ್ನು ಮುಂದೆ ಪುಣ್ಯದ ಮೇಲೆ ಘಟ್ಟಿ ಮನಸ್ಸು ಕೊಟ್ಟು, ಸರ್ವಕಾಲ ಪರಿಯಂತರಕ್ಕೂ ಒಂದು ಪಾಪ ಬಾರದಹಾಗೆ ದಯಮಾಡಿ ರಕ್ಷಿಸಿಕೊಳ್ಳಿ, ಸ್ವಾಮಿ. ಆಮೆನ್ ಜೇಸು.

ಇಂಥ ಒಳ್ಳೇ ಪ್ರತಿಜ್ಞೆಯಂನು ನೆರವೇರಿಸುವದಕ್ಕೆ ಬೇಕಾದಂಥ ಸಹಾಯ ಬರುವಹಾಗೂ, ಈ ರಾತ್ರಿಯಲ್ಲಿ ನಂಮ ಆತ್ಮ ಶರೀರವಂನು ಕಾಪಾಡಿ ರಕ್ಷಿಸುವ ಹಾಗೂ, ದೇವರ ತಾಯಿಗೆ ಸ್ತೋತ್ರ ಜಪವಂನು ಒಪ್ಪಿಸುವದು.

ಸಮುದ್ರದ ನಕ್ಷತ್ರವೇ,
ದೇವರ ಮಹಾ ತಾಯೇ,
ನಿತ್ಯವಾದ ಕಂನಿಕೆಯೇ,
ಮೋಕ್ಷದ ಭಾಗ್ಯ ಬಾಗಲೇ, ನಮಃ
ಗಬ್ರಿಯೇಲ ವಾಕ್ಯನಿಂದಲೇ
ಈ ಮಂಗಳವಂ ಗೊಂಡು,
ಏವೆಯ ನಾಮವಂ ಬಿಟ್ಟು,
ಕ್ಷಮೆಯಲ್ಲಿ ನಂಮಂನು ಸ್ಥಾಪಿಸಿರಿ.
ಪಾಪಿಗಳಿಗೆ ಸಂಕೋಲೆ ಬಿಡಿಸಿ,
ಅಂಧಕರಿಗೆ ದೃಷ್ಟಿಯಂ ತಂದು,
ನಂಮ ಕಷ್ಟಗಳ ನಿವಾರಿಸಿ,
ಎಲ್ಲಾ ಮೇಲುಗಳ ಬೇಡಿರಿ.
ನೀವು ತಾಯ್ಯೆಂದು ತೋರಿಸಿ,
ನಮಗಾಗಿ ಉದ್ಭವಿಸಿದಂಥ
ನಿಮಗೆ ಪುತ್ರನಾದವರು
ನಿಂಮಿಂದ ನಂಮ ಜಪ ಕೇಳಲಿ.
ಕಂನಿಕೆಗಳಲ್ಲಿ ಕಂನಿಕೆಯೇ,
ಶಾಂತಿಗಳಲ್ಲಿ ಶಾಂತಿಯೇ,
ಪಾಪದ ಕ್ಷಯವಂ ಪಾಲಿಸಿ,
ಶಾಂತಿಯಂ ಶುದ್ಧಿಯಂ ನಂಮಲ್ಲಿ ಬೆಳಿಸಿರಿ.
ನಿಷ್ಕಳಂಕ ನಡೆಯಂ ಪಾಲಿಸಿ,
ನಿರ್ಭಯ ಮಾರ್ಗವನ್ನೆ ಏರ್ಪಡಿಸಿ.

ಜೇಸುವಿನ ದರ್ಶನದಲ್ಲಿ
ಸದಾರಾಲ ಅನುಮೋದಿಸುವೆವಾಗಲಿ.

ತಂದೆ ಸರ್ವೇಶ್ವರನಿಗೆ ಸ್ತೋತ್ರವು,
ರರ್ತಾ ಕ್ರೀಸ್ತುವಿಗೆ ರೀರ್ತಿ,
ಸ್ಪಿರಿತು ಸಾಂಕ್ತುವಿಗೂ ಮೂವರಿಗೂ
ಏರ ಮಹಿಮೆ ಉಂಟಾಗಲಿ. ಆಮೆನ್ ಜೇಸು.

ಸರ್ವೇಶ್ವರನ ಅರ್ಚ್ಯಶಿಷ್ಟ ಮಾತೆಯೇ, ಇಗೋ ನಾವು ನಿಂಮ ಶರಣಾಗತರಾಗಿ ಓಡಿ ಬಂದಿದ್ದೇವೆ, ತಾಯೇ; ನಂಮ ಅವಸರಗಳಲ್ಲಿಯೂ ಇರ್ಕಟ್ಟು ಆಪತ್ತುಗಳಲ್ಲಿಯೂ ನಾವು ನಿಂಮಂನು ಬೇಡಿರೊಳ್ಳವಾಗ, ನೀವು ಪರಾನ್ಮುಖವಾಗಿ ಇರ ಬೇಡಿ; ಆಶೀರ್ವದಿಸಲ್ಪಟ್ಟವಳೂ ಮುಕ್ತಿಹೊಂದಿದವಳೂ ಆಗಿರುವ ನಿತ್ಯ ರಂನಿರೆಯೇ, ಸರಲ ಆಪತ್ತುಗಳಿಂದ ನಂಮನ್ನು ರಕ್ಷಿಸಿ ರೊಳ್ಳಿ, ತಾಯೇ.

ದೇವರ ತಾಯ್ಯ ಪ್ರಾರ್ಥನೆ.

(ಭಕ್ತಿಯೊಂದಿಗೆ ಈ ಪ್ರಾರ್ಥನೆಗಳ ರೇಳುವವರಿಗೆ ೨೦೦ ದಿವಸ ಫಲವ ಅರ್ಚ್ಯ. ಪಾಪು ಸ್ವಾಮಿಯವರು ನೇಮಿಸಿದರು.)

ಸರ್ವೇಶ್ವರಾ ಸ್ವಾಮಿ, ಉತ್ತರಿಸುವ ಸ್ಥಳದಲ್ಲಿರುವ ಆತ್ಮಗಳಿಗೆ ದಯ ಮಾಡಿ, ಸ್ವಾಮಿ. (ಹೀಗೆ ಮೂರು ಸಾರಿ ರೇಳುವದು.)

ಸ್ವಾಮೀ, ಕೃಪೆಯನ್ನು ಮಾಡಿ;
ಕ್ರೀಸ್ತುವೆ, ಕೃಪೆಯನ್ನು ಮಾಡಿ;
ಸ್ವಾಮೀ, ಕೃಪೆಯನ್ನು ಮಾಡಿ:
ಕ್ರೀಸ್ತುವೇ, ನಮ್ಮನ್ನು ಆಲೈಸಿರಿ;
ಕ್ರೀಸ್ತುವೇ, ನಮ್ಮ ಪ್ರಾರ್ಥನೆ ಚೆನ್ನಾಗಿ ಕೇಳಿಕೊಳ್ಳಿ.

ಪರಲೋಕದ ದೆಶಿಯಿಂದ ಪಿತನಾಗಿದ್ದಂಥ ದೇವರೇ, ನಮಗೆ ದಯ ಮಾಡಿ, ಸ್ವಾಮೀ.

ಲೋಕವ ರಕ್ಷಿಸುವ ಸುತನಾಗಿದ್ದಂಥ ದೇವರೇ, ನಮಗೆ ದಯ ಮಾಡಿ, ಸ್ವಾಮೀ.

ಸ್ಪಿರಿತು ಸಾಂಕ್ತುವಾಗಿದ್ದಂಥ ದೇವರೆ, ನಮಗೆ ದಯ ಮಾಡಿ, ಸ್ವಾಮೀ.

ಅರ್ಚ್ಯಶಿಷ್ಟ ತಮ ತ್ರಿತ್ವಂತಿರಾಗಿದ್ದಂಥ ಏಕ ದೇವರೇ, ನಮಗೆ ದಯ ಮಾಡಿ, ಸ್ವಾಮೀ.

ಅರ್ಚ್ಯಶಿಷ್ಟ ಮರಿಯೇ,
ಸರ್ವೇಶ್ವರನ ಅರ್ಚ್ಯ ತಾಯೇ,
ಕನ್ನಿಕೆಗಳೊಳಗೆ ಮಹಾ ಶ್ರೇಷ್ಠ ಕನ್ನಿಕೆಯೇ.
ಕ್ರೀಸ್ತುವಿನ ತಾಯೇ,
ದೇವ ಕೃಪೆಯ ತಾಯೇ,
ಪರಿಶುದ್ಧ ತಾಯೇ,
ಮಹಾ ವಿರಕ್ತಿಯಾದ ತಾಯೇ,
ನಿರ್ಮಲವಾದ ತಾಯೇ,
ಕನ್ಯತ್ವದ ಶುದ್ಧ ಕೆಡದಂಥ ತಾಯೇ.

} ನಮಗೋಸ್ಕರ ಬೇಡಿಕೊಳ್ಳಿ.

ಮಹಾ ಸ್ನೇಹಕ್ಕೆ ಪಾತ್ರವಳಾದಂಥ ತಾಯೇ,
ಆಶ್ಚರ್ಯಕ್ಕೆ ಆಸ್ಪದವಾದ ತಾಯೇ,
ಸೃಷ್ಟಿಸುವವರ ತಾಯೇ,
ರಕ್ಷಿಸುವವರ ತಾಯೇ,
ಮಹಾ ಬುದ್ಧಿವಂತೆಯಾದಂಥ ಕಂನಿಕೆಯೇ,
ಪೂಜ್ಯವಾದಂಥ ಕಂನಿಕೆಯೇ,
ಸ್ತುತಿಗಳಿಗೆ ಯೋಗ್ಯವಾದಂಥ ಕನ್ನಿಕೆಯೇ,
ಶಕ್ತಿಯುಳ್ಳಂಥ ಕಂನಿಕೆಯೇ,
ದಯಾರಸವಾದಂಥ ಕಂನಿಕೆಯೇ,
ಮಹಾ ವಿಶ್ವಾಸಿಯಾದಂಥ ಕಂನಿಕೆಯೇ,
ನೀತಿಗೆ ಕಂನಡಿಯೇ,
ಜ್ಞಾನಕ್ಕಿರುವ ಸ್ಥಳವೇ,
ನಂಮ ಸಂತೋಷಕ್ಕೆ ಕಾರಣವೇ,
ಜ್ಞಾನ ಪಾತ್ರೆಯೇ,
ಮಹಿಮೆಯಾದ ಪಾತ್ರೆಯೇ,
ಅತ್ಯಂತ ಭಕ್ತಿಯುಳ್ಳ ಪಾತ್ರೆಯೇ,
ಪರಮ ರಹಸ್ಯವುಳ್ಳ ರೋಜವೆಂಬ ಪುಷ್ಪವೇ,
ದಾವೀದನ ಉಪ್ಪರಿಗೆಯೇ,
ಜಂತದ ಉಪ್ಪರಿಗೆಯೇ,
ಚಿಂನವಾದ ಆಲಯವೇ,
ವಾಗ್ದತ್ತದ ಪೆಟ್ಟಿಗೆಯೇ;
ಮೋಕ್ಷದ ಬಾಗಲೇ,

ನಮಗಾಗಿ ಬೇಡಿಕೊಳ್ಳಿ.

ಉದಯಕಾಲದ ನಕ್ಷತ್ರವೇ,
ವ್ಯಾಧಿಕಾರರಿಗೆ ಆರೋಗ್ಯವೇ,
ಪಾಪಿಗಳಿಗೆ ಶರಣಾಗತಿಯೇ,
ಕಷ್ಟ ಪಡುವವರಿಗೆ ಉಪಶಮನವೇ,
ಕ್ರೀಸ್ತುವರಿಗೆ ಸಹಾಯವೇ,
ಸಂಮನಸ್ಸುಗಳಿಗೆ ರಾಣಿಯೇ,
ಪ್ರಧಾನ ಪಿತೃಗಳಿಗೆ ರಾಣಿಯೇ,
ದೀರ್ಘ ದರ್ಶಿಗಳಿಗೆ ರಾಣಿಯೇ,
ಅಪೋಸ್ತಲರುಗಳಿಗೆ ರಾಣಿಯೇ,
ವೇದ ಸಾಕ್ಷಿಗಳಿಗೆ ರಾಣಿಯೇ,
ಸ್ತುತಿಯರಿಗೆ ರಾಣಿಯೇ,
ಕನ್ಯಾಸ್ತ್ರೀಯರುಗಳಿಗೆ ರಾಣಿಯೇ,
ಸಕಲವಾದಂಥ ಅರ್ಚ್ಯಶಿಷ್ಟವರುಗಳಿಗೆ ರಾಣಿಯೇ,
ಜನ್ಮ ಪಾಪವಿಲ್ಲದೆ ಉದ್ಭವಿಸಿದ ರಾಣಿಯೇ,

— ನಮಗಾಗಿ ಬೇಡಿ ಕೊಳ್ಳಿ.

ಲೋಕದ ಪಾಪಗಳ ಪರಿಹರಿಸುವ ಸರ್ವೇಶ್ವರನ ಕಂಗುರೀ ಮರಿಯೇ, — ನಂಮ ಪಾಪಗಳಂನು ತಾಳಿಕೊಳ್ಳಿ, ಸ್ವಾಮಿ.

ಲೋಕದ ಪಾಪಗಳ ಪರಿಹರಿಸುವ ಸರ್ವೇಶ್ವರನ ಕಂಗುರೀ ಮರಿಯೇ, — ನಂಮ ಪ್ರಾರ್ಥನೇ ಪ್ರಕಾರ ಕರುಣಿಸಿರಿ, ಸ್ವಾಮಿ.

ಲೋಕದ ಪಾಪಗಳ ಪರಿಹರಿಸುವ ಸರ್ವೇಶ್ವರನ ಕಂಗುರೀ ಮರಿಯೇ, — ದಯವಾಗಿರಿ, ಸ್ವಾಮಿ.

ಕ್ರೀಸ್ತುವೇ, ಕೃಪೆಯಾಗಿರಿ;
ಕ್ರೀಸ್ತುವೇ, ಕೃಪೆಯಾಗಿರಿ. (೧ ಪರಲೋಕದ ಮಂತ್ರವು.)

ಜೇಸು ಕ್ರೀಸ್ತುವಿನ ವಾಗತ್ತಗಳಿಗೆ ನಾವು ಪಾತ್ರರಾಗುವ ಹಾಗೆ, — ಅಚ್ಯರ್ಶಿಷ್ಟೆ ದೇವರ ತಾಯೇ, ನಮಗಾಗಿ ಬೇಡಿಕೊಳ್ಳಿ.

ಸ್ವಾಮಿ, ನಂಮ ಪ್ರಾರ್ಥನೆಯಂನು ಚಂನಾಗಿ ಕೇಳಿ ಕೊಳ್ಳಿ, — ನಾವು ಕೂಗುವ ಶಬ್ದ ನಿಂಮ ಸಂನಿಧಾನದ ಪರಿಯಂತರಕ್ಕೆ ಬರುವದಾಗಲಿ.

ಪ್ರಾರ್ಥಿಸಿಕೊಂಬುವದು.

ಸ್ವಾಮಿ, ಶುದ್ಧ ಮನಸ್ಸಾಗಿ ಸಾಷ್ಟಾಂಗವಾಗಿ ಬಿದ್ದಿರುವ ಈ ಕುಟುಂಬವಂನು. ಯಾವಾಗಲೂ ಪರಿಶುದ್ಧ ಕನ್ಯಾಸ್ತ್ರೀಯೂ ಮುಕ್ತಿ ಕೊಂಡಿದವಳೂ ನಂಮ ಒಡತಿಯೂ ಆಗಿರುವ ಜಿರ್ಕ್ಯ. ಮರಿಯಂಮನವರ ಬೇಡುದಲೆಯಿಂದ, ಸಕಲ ಶತೃಗಳ ಶೋಧನೆಗಳಲ್ಲಿ ಬೀಳದ ಹಾಗೆ ಪ್ರಸಂನರಾಗಿ ದಯದೊಡನೆ ರಕ್ಷಿಸಿ ಕೊಳ್ಳಿ, ಸ್ವಾಮಿ. ಆಮೆನ್ ಜೇಸು.

(ನಮೋ ರಾಣಿಯೇ ಮಂತ್ರವು.)

ಅಚ್ಯರ್ಶಷ್ಟವರ ಸಹಾಯವಂನು ಬೇಡಿ ಕೊಳ್ಳುವದು.

ಸರ್ವೇಶ್ವರಾ ಸ್ವಾಮಿ, ದೇವರವರಂನು ಸ್ತುತಿಸುವ ಮಂದಿಗಳಿಗೆ ಬಹುಮಾನವಂನು ಮಾಡುತ್ತೀರಿ, ದೇವರ

ವರ ಮೇಲೆ ಭಕ್ತಿಯಾಗಿರುವ ಮಂದಿಗಳಿಂದ ಪೂಜಿಸಲ್ಪಡುತ್ತೀರಿ; ನಮಗೆ ಪಿತೃಗಳಾಗಿರುವ ಅಜ್ಯರ್. ಇಗ್ನಾಸಿ ಕ್ಸವೇರಿಯೆಂಬವರ ಪ್ರಕಾಶವಾದ ಉತ್ತಮ ಪುಣ್ಯಗಳಂನು ಸ್ತುತಿಸುವ ನಾವು ಇವರು ನಮಗಾಗಿ ದೇವರವರ ಸಂನಿಧಾನದಲ್ಲಿ ಬೇಡಿಕೊಳ್ಳುವ ಫಲಗಳಂನು ಅರಿತುಕೊಳ್ಳುವ ಹಾಗೆ, ನಂಮ ಹೃದಯಗಳಿಗೆ ಅನುಗ್ರಹವ ಮಾಡ ಬೇಕೆಂದು ಬೇಡಿಕೊಳ್ಳುತ್ತಿದ್ದೇವೆ. ಈ ಪ್ರಾರ್ಥನೆ ಜೇಸುನಾಥರಂನು ನೋಡಿ ಪ್ರಸಾದಿಸ ಕರುಣಿಸಿರಿ, ಸ್ವಾಮಿ. ಆಮೆನ್ ಜೇಸು.

(ಐವತ್ತು ಮೂರು ಮಣೀ ಜಪ ಮಾಡುವದಕ್ಕೆ ಅವಕಾಶವಿಲ್ಲದ ಮಂದಿಗಳು ಇಲ್ಲಿ ಬಿಡುವಲೆ ಕೇಳುವರು. ೧೦೯ನೇ ಪರ್ವ.)

೧೫೩ ಮಣೀ ಜಪದ ಮೇಲೆ ಅರಿಯ ಕ್ಕರ ವಿವರವು.

ರೋಜಪೆಂಬ ಪುಷ್ಪವಾದದ್ದು ಸೂರ್ಯಕಾಂತಿಯಿಂದಲೂ ಸುಗಂಧ ಪರಿಮಳದಿಂದಲೂ ಸಕಲ ಪುಷ್ಪಗಳಿಗಿಂತ ಮನುಷ್ಯರಿಗೆ ಮಹಾ ಪ್ರಿಯವಾಗಿರುವದು ಸರಿ. ಆದರೆ ದಿವ್ಯ ಗುರುವಾದ ಜೇಸುನಾಥರು ತಿರು ವಾಕ್ಕಿನಿಂದ ಕಲ್ಪಿಸಿದ ಪರಲೋಕದ ಮಂತ್ರವೂ, ದೇವದೂತರಾದ ಗಬ್ರಿಯೇಲೆಂಬ ಸಂಮನಸ್ಸಾದವರು ದೇವರ ತಾಯಿಗೆ ಸಲ್ಲಿ

ಸಿದ ಮಂಗಳ ವಾರ್ತೆಗಳೂ, ಮಹಾ ಪುಣ್ಯ ಸ್ತ್ರೀಯಾದ ಎಲಿಸಬೇತೆಂಬವಳು ಹೇಳಿದ ಸ್ತುತೀ ವಚನಗಳೂ, ದಿವ್ಯ ರಹುಕರಂನು ಕುರಿತು ದೇವರ ತಾಯಿ ಅನುಭವಿಸಿದ ಸಂತೋಷಗಳಂನೂ, ದುಃಖಗಳಂನೂ, ಮಹಿಮೆಗಳಂನೂ, ಸ್ಮರಣೆ ಮಾಡುವಂಥ ಪ್ರಾರ್ಥನೆಗಳೂ ೧೫೩ ಮಣೀ ಜಪದಲ್ಲಿ ವರಿಸೆಯಾಗಿ ನಡಿಯುವದರಿಂದ, ಸಕಲ ಜಪಗಳಿಗಿಂತ ದೇವರ ತಾಯಿಗೆ ಮಹಾ ಪ್ರಿಯವಾಗಿರುವದೆಂಬುವದಕ್ಕೆ ಸಂದೇಹವಿಲ್ಲ. ಇದರ ನಿಮಿತ್ತ ೧೫೩ ಮಣಿ ಜಪಿಸುವದು, ರೋಜವೆಂಬ ಪುಷ್ಪಗಳಿಂದ ಕಟ್ಟಲ್ಪಟ್ಟ ಮಾಲೆಯಂನಾದರೂ ಕುಂಬಿದ ಬುಟ್ಟಿಯಂನಾದರೂ ದೇವರ ತಾಯಿಗೆ ಒಪ್ಪಿಸುವ ಹಾಗಾಗುತ್ತದೆ ಎಂದು, ಮಹಾತ್ಮರು ಬರೆದಿರಿಸಿದ್ಧಾರೆ. ಹೀಗಿರಲಾಗಿ ಪತಿತರುಗಳಂನೂ ಪಾಪಿಗಳಂನೂ ಸತ್ಯ ಮಾರ್ಗಕ್ಕೆ ತಿರಿಗಿಸುವದಕ್ಕೋಸ್ಕರ, ದೇವರ ತಾಯ್ಯಾದವಳ ಅಪ್ಪಣೇ ಪ್ರಕಾರವೇ, ಅರ್ಚ್ಯಶಿಷ್ಟ ಡೊಮಿನಿಕೆಂಬವರು ಇಂಥ ೧೫ ರಹಸ್ಯಗಳೊಂದೊಂದಕ್ಕೆ ೧೦ ನಮೋ ದೇವ ಮಂತ್ರವಂನೂ ೧ ಪರಲೋಕದ ಮಂತ್ರವಂನೂ ಕ್ರಮವಾಗಿ ನಡಿಸಿಕೊಂಡು ತಿರು ಸಭೆಯಲ್ಲಿ ಪಾಕ್ಯೃಸಿದರು. ಸ್ವಲ್ಪ ಕಾಲದೊಳಗೆ ಸದರಿ ಜಪವಾದದ್ದು ಬಹು ಪ್ರಬಲವಾದ್ದರಿಂದಲೂ ಅನೇಕ ಇಕಟ್ಟುಗಳಲ್ಲಿ ತಿರು ಸಭೆಗೆ ಸಹಾಯ ಫಲಿಸಿದ್ದರಿಂದಲೂ ಕ್ರೀಸ್ತುವರುಗಳ ಹೃದಯದಲ್ಲಿ ಇಂಥ ಮೇಲಾದ ಜಪದ ಮೇಲೆ ಅಧಿಕಾಧಿಕವಾಗಿ ಭಕ್ತಿಯೂ ಜ್ಞಾನ ಸಂತೋಷನೂ ವರ್ಧಿಸುವದಕ್ಕಾಗಿ ಅರ್ಚ್ಯ-

ಪಾಪು ಸ್ವಾಮಿಗಳು ೧೫೩ ಮಣೀ, ಅಥವಾ ರೋಜರಿ, ಎಂಬ ದೇವರ ತಾಯ್ಯನ್ನು ಕುರಿತು ವರುಷಂಪ್ರತಿ ಆಶ್ವೀಜಮಾಸದ ಪ್ರಥಮ ಆದಿತ್ಯವಾರದಲ್ಲಿ ಒಂದು ಹಬ್ಬವನ್ನು ಆಚರಿಸ ಬೇಕೆಂದು ಕಟ್ಟಳೆಯನ್ನು ಮಾಡಿದ್ದಲ್ಲದೆ, ಜಪದ ಸರಗಳ ಮೇಲೆ ಭಕ್ತಿಯೊಂದಿಗೆ ೧೫೩ ಮಣೀ ಜಪವನ್ನು ಜಪಿಸುವವರಿಗೆ ಎಣಿಸಕೂಡದ ಫಲಗಳನ್ನು ಪಾಲಿಸಿದರು. ಆದರೆ ಕೆಲಸದ ತೊಂದರೆಯಲ್ಲಿ ಸಿಕ್ಕಿಕೊಂಡಿರುವ ಮಂದಿಗಳಿಗೆ ೧೫೩ ಮಣೀ ಜಪ ದಿನಂಪ್ರತಿಯಲ್ಲಿ ಸಲ್ಲಿಸುವದಕ್ಕೆ ಅವಕಾಶವಿಲ್ಲದ ಕಾರಣ, ಅದರಲ್ಲಿ ಮೂರುಪಾಲು ಮಾಡಿ, ೫ ರಹಸ್ಯಗಳ ಕುರಿತು ೫೩ ಮಣೀ ಜಪವನ್ನು ಒಂದು ದಿನದಲ್ಲಿ ಜಪಿಸುವದಕ್ಕೆ ಅಪ್ಪಣೆಯನ್ನು ಕೊಟ್ಟರು. ಹೀಗೆ ಮೂರು ದಿನಗಳಲ್ಲಿ ೧೫ ರಹಸ್ಯಗಳ ನೆರವೇರಿಸಲಾದೀತು.

(ಸರ್ವ ವಲ್ಲಭವುಳ್ಳ.... ೪೯ ನೇ ಪಕ್ಕ; ೫ ಮೇಲೆ; ೧ ಪರಲೋಕದ.)

ಪಿತನಾದ ಸರ್ವೇಶ್ವರನಿಗೆ ಕುಮಾರ್ತಿಯಾಗಿರುವ ಅರ್ಚ್ಯಶಿಷ್ಟ ಕನ್ಯೆ ಮರಿಯೇ, ವಿಶ್ವಾಸವೆಂಬ ಪುಣ್ಯ ನಮಗೆ ಬರ ಕರುಣಿಸಿರಿ, ತಾಯೇ. (೧ ನಮೋ ದೇವ.)

ಸುತನಾದ ಸರ್ವೇಶ್ವರನಿಗೆ ಮಾತೆಯಾಗಿರುವ ಅರ್ಚ್ಯಶಿಷ್ಟ ಕನ್ಯೆ ಮರಿಯೇ, ದೇವರವರ ಕೃಪೆಯನ್ನು ನಾವು ನಂ

ಬುವ ಹಾಗೆ ನಂಬಿಕೆ ಎಂಬ ಪುಣ್ಯ ನಮಗೆ ಬರ ಮಾಡಿ, ತಾಯೇ. (೧ ನಮೋ ದೇವ.)

ಸ್ಪಿರಿತು ಸಾಂತುವಾದ ಸರ್ವೇಶ್ವರನಿಂದ ಅಲಂಕರಿಸಲ್ಪಟ್ಟವಳಾಗಿರುವ ಅರ್ಚ್ಯಶಿಷ್ಟ ಕನ್ಯಾಮರಿಯೇ, ದೇವಸ್ನೇಹವೆಂಬ ಪುಣ್ಯ ನಮಗೆ ಬರ ಮಾಡ ಕರುಣಿಸಿರಿ, ತಾಯೇ. (೧ ನಮೋ ದೇವ.)

ಪಿತನಿಗೂ ಸುತನಿಗೂ ಸ್ಪಿರಿತು ಸಾಂತುವಿಗೂ ಸ್ತೋತ್ರ ಉಂಟಾಗಲಿ ; — ಆದಿಯಲ್ಲಿ ಇದ್ದ ಹಾಗೆ, ಈಗಲೂ, ಯಾವಾಗಲೂ ಸದಾಕಾಲದಲ್ಲಿಯೂ ಸ್ತೋತ್ರ ಉಂಟಾಗಲಿ. ಆಮೆನ್ ಜೇಸು.

ಸಂತೋಷದ ರಹಸ್ಯಗಳು.

(ಮಂಗಳ, ಬುಧ, ಶನಿ ವಾರಗಳಲ್ಲಿ.)

೧ ನೇದು. ಅರ್ಚ್ಯಶಿಷ್ಟ ಮರಿಯಂಮನವರ ನಿರ್ಮಲವಾದ ಗರ್ಭದಲ್ಲಿ ಸುತನಾದ ಸರ್ವೇಶ್ವರನು ಮನುಷ್ಯನಾಗಿ ಉದ್ಭವಿಸಿದ ಮೊದಲನೇ ರಹಸ್ಯವನ್ನು ಧ್ಯಾನಿಸಿಕೊಂಡು, ನಮ್ಮ ಪಾಪಕ್ಕಾಗಿ ನಮ್ಮ ಭಾವನೆಯನ್ನು ತೆಕ್ಕೊಂಡ ರಕ್ಷಕರಿಗೆ ನಾವು ಅವರ ಧರ್ಮ ಪುಣ್ಯದಿಂದ ಭಾವನೆಯಾಗಿರುವ ಹಾಗೆ, ಅರ್ಚ್ಯಶಿಷ್ಟ ದೇವರ ತಾಯ್ಯಾದವಳನ್ನು ಬೇಡಿ ಕೊಳ್ಳುವದು.

(೧೦ ನಮೋ ದೇವ ತೀರಿದ ಮೇಲೆ, ಪಿತನಿಗೂ ಸುತನಿಗೂ.... ಮತ್ತೂ ೧ ಪರಲೋಕದ.)

೨ ನೇದು. ಅರ್ಚ್ಯಶಿಷ್ಟ ಮರಿಯಂಮನವರು ಎಲಿಸಬೇತಂಮನವರಂನು ಸಂಧಿಸಿದ ಸಮಯದಲ್ಲಿ ಶಿಶುವಾದ ಜೊವಾನಿ ತಾಯಿಯ ಗರ್ಭದಲ್ಲಿ ಕುಪ್ಪಳಿಸಿದ್ದರಿಂದ ದೇವರ ತಾಯಿಗೆ ಬಂದ ಸಂತೋಷವಂನು ಧ್ಯಾನಿಸಿಕೊಂಡು, ನಮಗೆ ಯಜಮಾನರಾಗಿರುವ ಮಂದಿಗಳಂನು ನಾವು ಬರುಮಾನದಲ್ಲಿ ವಿಚಾರಿಸುವ ಹಾಗೆ, ಅರ್ಚ್ಯಶಿಷ್ಟ ದೇವರ ತಾಯಿಯಾದವಳಂನು ಬೇಡಿ ಕೊಂಬುವದು. (೧೦ ನಮೋ ದೇವ.)

೩ ನೇದು. ಸುತನಾದ ಸರ್ವೇಶ್ವರನು ಸುಖ ದ್ರವ್ಯ ಬರುಮಾನಗಳೊಂದೂ ಇಲ್ಲದೆ ಒಂದು ದನದ ಕೊಟ್ಟಿಗೆಯಲ್ಲಿ ಅರ್ಚ್ಯಶಿಷ್ಟ ಮರಿಯಂಮನವರ ನಿರ್ಮಲವಾದ ಗರ್ಭದಿಂದ ಮನುಷ್ಯನಾಗಿ ಹುಟ್ಟಿದ ಮೂರನೇ ರಹಸ್ಯವಂನು ಧ್ಯಾನಿಸಿಕೊಂಡು, ಈ ಲೋಕದ ಶಾರೀರ ಸುಖ ದ್ರವ್ಯ ಬರುಮಾನಗಳಂನು ನಾವು ವರ್ಜಿಸುವಹಾಗೆ, ಅರ್ಚ್ಯಶಿಷ್ಟ ದೇವರ ತಾಯ್ಯಾದವಳಂನು ಬೇಡಿಕೊಂಬುವದು. (೧೦ ನಮೋ ದೇವ.)

೪ ನೇದು. ಅರ್ಚ್ಯಶಿಷ್ಟ ಮರಿಯಂಮನವರು ತಮ್ಮ ದಿವ್ಯ ಕುಮಾರನಂನು ದೇವಾಲಯದೊಳಗೆ ಕಾಣಿಕೆಯಾಗಿ ಒಪ್ಪಿಸಿದ ಸಮಯದಲ್ಲಿ ಅಂನಂಮ ಸಿಮೆಯೋನೆಂಬವರು ದೀರ್ಘದರ್ಶನದಿಂದ ಲೋಕರಕ್ಷಕರೆಂದು ಶೇವಿಸುವಾಗ, ದೇವರ ತಾಯ್ಯಿಗೆ ಬಂದ ಸಂತೋಷವಂನು ಧ್ಯಾನಿಸಿ ಕೊಂಡು, ನಂಮಂನು ನಾವು ಸರ್ವೇಶ್ವರನಿಗೆ

శుద్ధవాగి ఒప్పిసువరాగే, అర్చ్య. దేవర తాయ్యా దవళంను బేడికొంబువదు. (౧౦ నమో దేవ.)

౫ నేదు. అర్చ్యశిష్ట మరియమ్మనవరు తమ్మ దివ్య కొమారనంను మూరు దివస కాణదె, కడేసారి సర్వేశ్వరన దేవాలయదల్లి వేదశాస్త్రిగళొళగె కండ సమయదల్లి దేవర తాయ్యిగె బంద సంతోషవంను ధ్యానిసికొండు, నమ్మ పాపదింద నమ్మను బిట్టుహోద కర్తరంను నావు జాగ్రతెయాగి తడకి కాణువరాగే, అర్చ్యశిష్ట దేవర తాయ్యాదవళంను బేడికొంబువదు. (౧౦ నమోదేవ, పితనిగూ....)

దుఃఖద రహస్యగళు.

(బృహస్పతి, శుక్ర వారగళల్లి.)

అత్యంత కృపెయుళ్ళ అర్చ్యశిష్ట దేవర మాతెయే, నిమ్మ తిరు కుమారనాద జేసునాథరు దెబ్బె పట్టు శిల్వెయల్లి జడియల్పట్ట మేలెగే, నీవు సహా దెబ్బె పట్టు శిల్వెయల్లి జడియల్పడబిద్దరూ, అవరు తమ్మ తిరు దేహదల్లి అనుభవిసిద బాధెగళెల్లా నిమ్మ మనదల్లి నీవు అనుభవిసిదిరే.

౧ నేదు. అవరు నందవనదల్లి నమ్మ పాపగళిగాగి

ಅತ್ಯಂತ ದುಃಖವಂಗೈಯ್ಯುವದಕೊಳ್ಳು ತಂಮ ತಿರು ದೇಹವೆಲ್ಲಾ ರಕ್ತ ಬೆವರು ಬೆವರ್ತದ್ದಂನು ನೆನಸಿ, ನೀವು ಕೋರಳವಾಗಿ ಬಿಟ್ಟ ಕಣ್ಣೀರುಗಳಿಂದ ನೆಲ ನೆನದು, ಕೋಳ ಕೂಡದ ದುಃಖ ಸಾಗರದಲ್ಲಿ ಮುಹಿಗಿದಿರೀ. ಅಂಥ ದುಃಖವಂನು ನೋಡಿ, ಪಾಪಿಗಳಾಗಿರುವ ನಾವು ಮಾಡಿದ ಪಾಪಗಳಿಗಾಗಿ ಅತ್ತು ಕೊಂಡು ಮನಸ್ತಾಪ ಪಟ್ಟು ಪಾಪ ವಿಮೋಚನೆಯಂನು ಪಡೆಯುವ ಹಾಗೆ, ನಿಂಮ ದಿವ್ಯ ಕುಮಾರಂನ ಬೇಡಿ ಕೊಳ್ಳಿ, ತಾಯೇ. (೧೦ ನಮೋ ದೇವ.)

೨ ನೇದು. ಮಹಾ ಕನಿಕರವುಳ್ಳ ಅಚ್ಯರ್ಶಿಷ್ಟ ದೇವ ಮಾತೆಯೇ, ದೇವ ಸ್ವಭಾವ ಕೊಂಡಿರುವ ನಿಂಮ ದಿವ್ಯ ಕುಮಾರನಾದ ಜೇಸುನಾಥರು ನಿಷ್ಟೂರದೊಂಡಿಗೆ ಕಲ್ಲಿನ ಕಂಭಕ್ಕೆ ಬಿಗಿಯಾಗಿ ಕಟ್ಟಲ್ಪಟ್ಟದ್ದರಿಂದ, ಅವರ ತಿರು ಶರೀರವು ತುಂಬಾ ಶೀಳಿ ಹೋಗಿ ಸರ್ವಾಂಗಗಳು ಘಾಯವಾಗಿರುವದಂನೂ, ನೀಚ ಬಂಟರ ಅಶುದ್ಧ ಉಗುಳಿನಿಂದ ತಿರು ಮುಖವೆಲ್ಲಾ ಮಸ್ಟಾಗಿರುವದಂನೂ ಕಂಡು, ದುಃಖ ಸಮುದ್ರದಲ್ಲಿ ಮುಹಿಗಿ ಇದ್ದಿರೀ. ಅಂಥ ದುಃಖವಂನು ನೋಡಿ, ನಂಮ ಪಾಪಗಳಿಂದ ಬರುವ ಕಠಿನವಾದ ಆಜ್ಞೆಗಳಂನೆಲ್ಲಾ ಸರ್ವೇಶ್ವರನು ನಮಗೆ ಮಂನಿಸುವ ಹಾಗೆ, ನಿಂಮ ತಿರು ಕುಮಾರಂನ ಜೇಡಿ ಕೊಳ್ಳಿ, ತಾಯೇ. (೧೦ ನಮೋ ದೇವ.)

3 ನೇದು. ತಾಳ್ಮೆ ಪ್ರವಾಹಕ್ಕೆ ಊಟೆಯಾದ ಅಚ್ಯರ್

ಷ್ಟ ದೇವ ಮಾತೆಯೇ, ಪರಲೋಕದ ರಾಯರಾಗಿರುವ ನಿಮ್ಮ ತಿರು ಕೊಮಾರನಾದ ಜೇಸುನಾಥರಂನು ಜೂದರುಗಳು ಪರಿಹಾಸ್ಯ ರಾಯನ ಹಾಗೆ ಸ್ಥಾಪಿಸಿ, ಅವರ ತಿರು ಶಿರಸ್ಸಿನ ಮೇಲೆ ಮುಳ್ಳಿನ ಕಿರೀಟ ಮಡಗಿ ಕೊಂಡದ್ದರಿಂದ, ಮುಳ್ಳುಗಳು ಕಠಾದು ಅವರ ದಿವ್ಯ ಮುಖದ ಮೇಲೆ ಸುರಿಯುವ ರಕ್ತವಂನು ನೀವು ಕಂಡು, ಅಂಥ ಮುಳ್ಳುಗಳೆಲ್ಲಾ ನಿಮ್ಮ ಹೃದಯದಲ್ಲಿ ತಾಕಿ ಇರುವಾಗ, ಕ್ಲೇಶ ಬಹುಳವಾಗಿ ಪಟ್ಟಿರೇ. ಆ ದುಃಖವಂನು ನೋಡಿ; ಪಾಪಿಗಳಾಗಿರುವ ನಾವು ನಂಮ ಹೃದಯದಲ್ಲಿರುವ ಪಾಪಗಳೆಂಬ ಮುಳ್ಳುಗಳಂನು ಉತ್ತಮ ಮನಸ್ತಾಪದಿಂದ ಕಿತ್ತುಹಾಕುವ ಹಾಗೆ, ನಿಂಮ ದಿವ್ಯ ಕೊಮಾರಂನ ಬೇಡಿ ಕೊಳ್ಳಿ, ತಾಯೇ.
(೧೦ ನಮೋ ದೇವ.)

೪ ನೇದು. ಭೂಲೋಕಕ್ಕೆ ಒಡತಿಯಾದ ಅತ್ಯರ್ಕಶಿಷ್ಟ ದೇವ ಮಾತೆಯೇ, ನಿಮ್ಮ ದಿವ್ಯ ಕೊಮಾರನಂನ್ನು ಜೂದರುಗಳು ಕುತ ಮಾಡ ಬೇಕೆಂದು ನಿರ್ಣಯಿಸಿ, ಅವರ ತಿರು ಭುಜದ ಮೇಲೆ ಭಾರವಾದ ಶಿಲ್ವೇ ಮರವಂನು ಹೊರಿಸಿ, ಕಪಾಲ ಬೆಟ್ಟದ ಪರಿಯಂತರ ಅವರಂನು ನೂಕಿ ಕೊಂಡು ಹೋಗುವಾಗ, ನೀವೂ ಕೂಡ ದುಃಖ ಪಟ್ಟು ಅತ್ತು ಕೊಂಡು ಹೋದಿರೇ. ಅಂಥ ದುಃಖವಂನು ನೋಡಿ, ಪಾಪಿಗಳಾಗಿರುವ ನಮಗೆ ಬರುವ ಆಪತ್ತು ಆಜ್ಞೆಯಾದ ಶಿಲ್ವೆಯಂನು ಒಳ್ಳೇ ಮನಸ್ಸೊಂದಿಗೆ ನಾವೂ ಹೊತ್ತು ಕೊಂಡು ಅವರ ತಿರು ಹೆಜ್ಜೆಗಳಿಗೆ ಹಿಂಬಾಲಿಸಿ

ನಡೆಯುವ ಹಾಗೆ, ನಿಂಮ ದಿವ್ಯ ಕೊಮಾರಂನ ಬೇಡಿಕೊಳ್ಳಿ, ತಾಯೇ. (೧೦ ನಮೋ ದೇವ.)

೫ ನೇದು. ಪಾಪಿಗಳಿಗೆ ಶರಣಾಗತಿಯಾದ ಪರಮ ತಾಯೇ, ನಿಂಮ ದಿವ್ಯ ಕೊಮಾರಂನ ಯೂದರುಗಳು ಶಿಲ್ವೆಯ ಮರದೊಂದಿಗೆ ಸೇರಿಸಿ, ಮನೋವಾಕ್ಕಿಗೆಟ್ಟದ ಕ್ರೂರದೊಂದಿಗೆ ಅವರ ತಿರು ಕೈಯಿಗಳಂನೂ ತಿರು ಪಾದಗಳಂನೂ ದೊಡ್ಡ ಕಬ್ಬಿಣದ ಮೊಳೆಗಳಿಂದ ಜಡಿದು ಇಬ್ಬರ ಕಳ್ಳರ ಮಧ್ಯದಲ್ಲಿ ಎತ್ತಿ ನೆಟ್ಟಿದ ಮೇಲೆ ಮಹಾ ಅವಮಾನದೊಂದಿಗೆ ಅವರು ತೂಗಾಡಿಕೊಂಡಿರುವದಂನು ಕಂಡದ್ದರೊಳಗೆ, ಅಳವಡಿಸ ಕೂಡದ ದುಃಖ ವ್ಯಾಕುಲವನ್ನು ಗೊಂಡಿರೇ. ನೀವು ಆತ್ಮದಲ್ಲಿ ಅನುಭವಿಸಿದ ಜೇಸುವಿನ ಪೀಡೆಯಂನೂ ಶಿಲ್ವೆಯಂನೂ ನೋಡಿ, ಪಾಪಿಗಳಾಗಿರುವ ಅಡಿಮೆಯವರು ಅಂಥ ದಿವ್ಯ ಮಾದ್ರಿಯಂನು ಕೈಕೊಂಡು ಸನ್ಮಾರ್ಗದಲ್ಲಿ ನಡೆದು ಪಾಪ ವಿಮೋಚನೆಯಂನು ಪಡೆಯುವ ಹಾಗೆ, ನಿಂಮ ದಿವ್ಯ ಕೊಮಾರಂನ ಬೇಡಿಕೊಳ್ಳಿ, ತಾಯೇ. (೧೦ ನಮೋ ದೇವ.)

ಮಹಿಮೆಯ ರಹಸ್ಯಗಳು.

(ಆದಿತ್ಯ, ಸೋಮ ವಾರಗಳಲ್ಲಿ.)

---

೧ ನೇದು. ವರ್ಷಕಾಲವೂ ಛಳಿಕಾಲವೂ ನಿಂತು ಹೋಗಿ ವಸಂತಕಾಲ ಬರುವ ಮೇರೆಗೆ ಪ್ರಸಂನವಾಗಿರುವ

ಶ್ರೇಷ್ಠದ ರಾಣಿಯಾದವಳೇ, ನಿಂಮ ತಿರು ಕೊಮಾರನಾದ ಜೇಸುನಾಥರು ಪಾಡುಪಟ್ಟು ಮೃತವಾದ ದುಃಖ ಕಾಲದ ಮೇಲೆ ಮೂರನೇ ದಿನ ಸಮಾಧಿಯಂ ಬಿಟ್ಟು, ವಿಜಯವಂತರಾಗಿ, ಸೂರ್ಯನಿಗಿಂತ ಕಾಂತಿಯಾದ ಶುಭ ಸೌಂದರ್ಯ ಮಿಂಚಾಗಿ ಜೀವಿಸಿ ಎದ್ದ ಅವರಂನು ನೀವು ಕಾಣುವದಕೊಳಗೆ, ನಿಮಗೆ ಅತ್ಯಂತ ಮಹಿಮೆಯುಳ್ಳ ಸಂತೋಷ ಕಾಲ ಉದಯವಾಯಿತೇ. ಅಂಥ ಮಹಿಮೆಯುಂನು ನೋಡಿ, ಪಾಪವೆಂಬ ಮರಣವಂನು ನಾವು ಬಿಟ್ಟು ಜ್ಞಾನವಿಧವಾಗಿ ಜೀವಿಸಿ ಎದ್ದಿರುವ ಹಾಗೆ, ನಿಂಮ ದಿವ್ಯ ಕೊಮಾರನಂನು ಬೇಡಿ ಕೊಳ್ಳಿ, ತಾಯೇ. (೧೦ ನಮೋ ದೇವ.)

೩ ನೇದು. ಅತಿಶಯವೂ ಪರಿಶುದ್ಧವೂ ಆಗಿರುವ ಅಚ್ಯರ್ಶಿಷ್ಟ ದೇವ ಮಾತೆಯೇ, ಮಟ್ಟಿಲ್ಲದ ಮಹಿಮೆಯಂನೂ ಅದ್ಭುತವಾದ ಜಯವಂನೂ ಹೊಂದಿದ ನಿಂಮ ತಿರು ಕೊಮಾರನಾಗಿರುವ ಜೇಸುನಾಥರು ಉತ್ಥಾನವಾದ ನಾಲ್ವತ್ತನೇ ದಿವಸ ಜ್ಯೋತಿರ್ಮಂಡಲಗಳು ಪರಿವಾರವಾಗಿ, ಸುತ್ತಲು ಆದಿ ಪಿತೃಗಳಿಂದಿಗೆ ಒಡ್ಡೋಲಗವಾಗಿ ಪರಲೋಕಗಳಿಗೆ ಆರೋಹಣವಾದದ್ದಂನು ಕಂಡದರೊಳಗೆ, ಮನೋಹರವಾದ ಮಹಿಮೆಯುಂನು ಹೊಂದಿದಿರೇ. ಅಂಥ ಮಹಿಮೆಯುಂನು ನೋಡಿ, ಈ ಭೂಲೋಕದಲ್ಲಿ ಪರದೇಶಿಗಳಾಗಿರುವ ನಾವು ಪರಲೋಕವಂನೇ ಹಿಂಣಗಾಡಿ ಆಶಿಸಿಕೊಂಡು, ಪರಲೋಕದ

ಭಾಗ್ಯವಾದ ಮೋಕ್ಷಾನಂದವಂನು ಪಡೆಯುವ ಹಾಗೆ, ನಿಂಮ ತಿರು ಕುಮಾರಂನ ಬೇಡಿಕೊಳ್ಳಿ, ತಾಯೇ.
(೧೦ ನಮೋ ದೇವ.)

೩ ನೇದು. ದೇವ ಪ್ರಸಾದಗಳಿಂದ ಪೂರ್ತಿಯಾದವಳಾಗಿಯೂ ಮೋಕ್ಷವಾಸಿಗಳಿಗೆ ಒಡತಿಯಾಗಿಯೂ ಇರುವ ಅಚ್ಯರ್ಶಿಷ್ಟ ದೇವ ಮಾತೆಯೇ. ನಿಂಮ ದಿವ್ಯ ಕುಮಾರನಾದ ಜೇಸುನಾಥರ ಶಿಷ್ಯರುಗಳ ಸಂಗಡ ನೀವು ಧ್ಯಾನದಲ್ಲಿ ಇರುತ್ತಿರುವಾಗ, ಅಗ್ನಿ ನಾಲಿಗೇ ರೂಪವಾಗಿ ಸ್ಪಿರಿತು ಸಾಂಕ್ತು ಇಳಿದು ಚಿತ್ತೈಸಿ ನಿಂಮ ಹೃದಯವಂನೂ ಶಿಷ್ಯರ ಹೃದಯಗಳಂನೂ ದೇವಿಷ್ಟ ಪ್ರಸಾದಗಳಿಂದ ತುಂಬಿಸಿದ್ದರಿಂದ, ಅತ್ಯಂತ ಸಂತೋಷ ಮಹಿಮೆಯಂನು ಪಡೆದಿರೇ. ಅಂಥಾ ಮಹಿಮೆಯಂನು ನೋಡಿ, ಸ್ಪಿರಿತು ಸಾಂಕ್ತುವಿನ ವರಪ್ರಸಾದಗಳಂನು ನಾವೂ ಸಹ ಪಡೆದು ದೇವರ ಚಿತ್ತಕ್ಕೆ ಸರಿಯಾಗಿ ನಡೆಯುವ ಹಾಗೆ, ನಿಂಮ ದಿವ್ಯ ಕುಮಾರಂನ ಬೇಡಿಕೊಳ್ಳಿ, ತಾಯೇ.
(೧೦ ನಮೋ ದೇವ.)

೪ ನೇದು. ಪೂಜಿಸಲ್ಪಡತಕ್ಕ ಯೋಗ್ಯವೂ ಪುಣ್ಯಮಾರ್ಗಕ್ಕೆ ಮಾತೃಕೆಯೂ ಆಗಿರುವ ಅರ್ಚ್ಯಶಿಷ್ಟ ದೇವ ಮಾತೆಯೇ, ನಿಂಮ ತಿರು ಆತ್ಮವು ನಿಂಮ ತಿರು ಶರೀರವಂನು ಅಗಲಿ ಬಿಟ್ಟು, ನಿಮ್ಮ ದಿವ್ಯ ಕುಮಾರನಾದ ಜೇಸುನಾಥರ ತಿರು ಸಂನಿಧಾನಕ್ಕೆ ಸೇರಿದ ಮೂರನೇ ದಿವಸ, ಸುಗಂಧ ಪರಿಮಳವಾದ ವಾಸನೆಯಂನೂ ಮಹಾ ಕಾಂತಿ

ಯಂನೂ ಹೊಂದಿದ ನಿಂಮ ದೇಹದೊಂದಿಗೆ ಸಮಾಧಿಯಂನು ಬಿಟ್ಟು, ಪರಲೋಕದ ವಾಸಿಗಳ ಪರಿವಾರ ಸುತ್ತಿಕೊಂಡು ಮಧುರವಾದ ಗಾನಸಂಗೀತಗಳಂನು ಧ್ವನಿಸಲಾಗಿ, ಮೋಕ್ಷರಾಜ್ಯಕ್ಕೆ ಚಿತ್ತೈಸಿ ಹೋಗಿ, ಅತಿಶಯವಾದ ಸಂತೋಷ ಮಹಿಮೆಯಂನು ಪಡೆದಿರೇ. ಅಂಥಾ ಮಹಿಮೆಯಂನು ನೋಡಿ, ಭೂಲೋಕವೆಂಬ ದುಃಖ ಸಾಗರದಲ್ಲಿ ಕಷ್ಟದ ಆಪತ್ತುಗಳೊಳಗೆ ಇರುವ ನಂಮಂನು ನಿಂಮ ಕೃಪಾಕಟಾಕ್ಷದಿಂದ ದೃಷ್ಟಿಸಿ, ಪಾಪಿಗಳಾಗಿರುವ ನಾವು ಮೋಕ್ಷಕಕೆ ಏರುವರಾಗಿ, ನಿಂಮ ದಿವ್ಯ ಕುಮಾರಂನ ಬೇಡಿಕೊಳ್ಳಿ, ತಾಯೇ. (೧೦ ನಮೋ ದೇವ.)

೫ ನೇದು. ಕರುಣಾ ಸಮುದ್ರವೂ ನಂಬಿದವರಿಗೆ ಆಧಾರವೂ ಆಗಿರುವ ದೇವ ಮಾತೆಯೇ, ಸೃಷ್ಟಿಸಲ್ಪಟ್ಟ ಸಕಲ ವಸ್ತುಗಳಿಗಿಂತ ಸಮಸ್ತ ಸುಕೃತಗಳಿಂದ ತುಂಬಿ ಅಲಂಕರಿಸಲ್ಪಟ್ಟವಳಾಗಿರೋಣದಿಂದ, ನೀವು ಪರಲೋಕಗಳಿಗೆ ಚಿತ್ತೈಸುವದರಲ್ಲಿಯೇ ಎಲ್ಲಾ ಅರ್ಚ್ಯಶಿಷ್ಟವರಿಗಿಂತ ಹೆಚ್ಚಾದ ಮೋಕ್ಷ ಸಂಭಾವನೆಯಂನು ಹೊಂದಿ, ಅರ್ಚ್ಯಶಿಷ್ಠ ತ್ರಿತ್ವದಿಂದ ಜೋತಿರ್ಮಂಡಲದ ವಾಸಿಗಳೆಲ್ಲರಿಗೂ ರಾಣಿ ಎಂದು ಕಿರೀಟ ಧರಿಸಲ್ಪಟ್ಟು, ಸಂಮನಸ್ಸುಗಳ ಮೇಲೆಯೂ ಮೋಕ್ಷವಾಸಿಗಳ ಮೇಲೆಯೂ ಕರ್ತ್ರಿ ಸ್ಥಾಪಿಸಲ್ಪಟ್ಟು, ಸತ್ಯಮನೋಹರಗಳಿಂದ ತುಂಬಿದ ಮಹಿಮೆಯಂನು ಪಡೆದಿರೇ. ಅಂಥಾ ಮಹಿಮೆಯಂನು ನೋಡಿ, ನೀವು ಅನುಭವಿಸುವ ಮೋಕ್ಷ ಭಾಗ್ಯದಲ್ಲಿ ಒಂದು ಸ್ವಲ್ಪ ಪಾಲು ಪಾಪಿ

ಗಳಾಗಿರುವ ಅಡಿಮೆಯವರು ಪಡೆಯುವ ಹಾಗೆ, ನಿಂಮ ದಿವ್ಯ ಕುಮಾರಂನ ಬೇಡಿ ಕೊಳ್ಳಿ, ತಾಯೇ. (೧೦ ನಮೋ ದೇವ.)

(ದೇವರ ತಾಯಿಯ ಪ್ರಾರ್ಥನೆ ತೀರಿದ ಮೇಲೆ, ನಮೋ ರಾಣಿಯೇ ಮಂತ್ರ, ಆ ಮೇಲೆ ಬೇಡುದಲೆಗಳಂನು ಹೇಳುವದು.)

ಸಾಯಂಕಾಲದ ಜಪ ಇಲ್ಲಿಯೇ
ಸಮಾಪ್ತ.

ಶಯನ ಆರಾಧನೆ.

ತೀರ್ಥ ತೆಗದು ಹಾಸಿಕೆಯ ಮೇಲೆಯೂ
ತಂನ ಮೇಲೆಯೂ ಪ್ರೋಕ್ಷಿಸಿ ಕೊಂಡು,
ಶಿಲ್ವೆಯ ಗುರುತು ಮಾಡಿ
ಹೇಳಿ ಕೊಳ್ಳುವದು.

ಸರ್ವೇಶ್ವರಾ ಸ್ವಾಮಿ, ಮನುಷ್ಯರು ಶಯನದಿಂದ ಬಳಲಿಕೆಯಂನು ತೀರಿಸಿಕೊಳ್ಳುವ ಹಾಗೆ ರಾತ್ರಿಕಾಲ ಕಟ್ಟಳೆ ಇಡ ಕರುಣಿಸಿದಿರೇ:

ನಿಮಗೆ ಸ್ತೋತ್ರ ಉಂಟಾಗಲಿ!

ಇಂದು ನನಗೆ ಮಾಡಿದ ಸಕಲ ಉಪಕಾರಗಳಿಗಾಗಿ ನಿಮಗೆ ಸ್ತೋತ್ರ ಮಾಡಿ, ನಂನಿಂದಲಾದ ಪಾಪಗಳಂನೆಲ್ಲಾ ತಾಳಿ

ಕೊಳ್ಳ ಬೇಕೆಂದು ದೇವರವರಂನು ಬೇಡಿ ಕೊಳ್ಳುತ್ತೇನೆ. ಅವುಗಳು ದೇವರವರು ಅಳವಡಿಸ ಕೂಡದ ಮಹಿಂಮೆಗೂ ಮೇಲುತನಕ್ಕೂ ವಿರೋಧವಾಗಿರುವದರಿಂದ ತುಂಬ ಮನದೊಂದಿಗೆ ಹೇಸಿ ಬಿಡುತ್ತೇನೆ.

ಈ ರಾತ್ರಿಯಲ್ಲಿ ಅಕಸ್ಮಿಕ ಮರಣದಿಂದಲೂ ದುಸ್ವಪ್ನ ಇವು ಮೊದಲಾದ ಪಿಶಾಚಿ ಶೋಧನೆಗಳಿಂದಲೂ ನಿಂಮ ಗುಲಾಮನಿಗೆ ಮೋಸ ಬರಲೀಸದೆ ಕಾದು ಕೊಳ್ಳಿ, ಸ್ವಾಮೀ.

ಪಿತನನ್ನೂ ಸುತನನ್ನೂ ಪೀರಿತು ಸಾಂಕ್ತುವಿನನ್ನೂ ಹೆಸರಿನಲ್ಲಿ. ಆಮೆನ್ ಜೇಸು.

(ನೀನು ನಿದ್ರೆ ಮಾಡುವದಕ್ಕೆ ಹೋಗಲಾಗಿ, ನಿಂನ ಹಾಸಿಕೆ ನಿಂನ ಸಮಾಧಿ ಎಂದು ಎಣಿಸಿ ಕೊಂಡು, ನಿದ್ರೆಗೆ ಹೋಲ್ವಿಕೆಯಾದ ಮರಣವು ಎಷ್ಟು ತೀವ್ರವಾಗಿ ಬರ ಬಹುದೆಂದು ನೆನಸಿ ಕೊಳ್ಳುವಿ ಆಗಲಿ.

ಮತ್ತು ರಾತ್ರಿಯೊಳು ನಿದ್ರೆ ತಪ್ಪಿ ಎಚ್ಚರವಾದರೆ, ದುರ್ವಿಚಾರಗಳ ನೆನಸದೆ, ಪರಲೋಕದಲ್ಲಿ ಸಂಮನಸ್ಸುಗಳೂ ಮೋಕ್ಷವಾಸಿಗಳೂ ನಿದ್ರಿಸದೆ ಎಡೆಬಿಡದೆ ಸ್ತೋತ್ರಗಳ ಸ್ವಾಮಿಗೆ ಮಾಡಿ ಕೊಂಡಿರುತ್ತಾರೆಂದು ಸ್ಮರಿಸಿ, ನೀನೂ ಕೂಡ ಸ್ವಾಮಿಯ ಮೇಲೆ ಭಕ್ತಿ ವಿಚಾರಗಳ ವಿಚಾರಿಸ ಬೇಕು.)

ದಿವ್ಯ ಪೂಜೇ ಬಲಿಯ ಮೇಲೆ ಅರಿಯ ತರ್ಕ ವಿವರಗಳು.

ಪರಲೋಕ ಭೂಲೋಕಗಳಂನು ಸೃಷ್ಟಿಸಿ ಆಳುವಂಥ ಏಕ ಪರಂಜ್ಯೋತಿಯಾದ ಸರ್ವೇಶ್ವರನು ತಮಗೆ ಸ್ತೋತ್ರ ಮಾಡುವದಕ್ಕೋಸ್ಕರ ಮನುಷ್ಯನಿಗೆ ಬುದ್ಧಿ ಜ್ಞಾನ ಜೀವವೆಂಬಂಥ ವರಗಳಂನು ಪಾಲಿಸಿದ ಕಾರಣದಿಂದ, ಅವರ ಕರ್ತೃತ್ವಕ್ಕೆ ಯೋಗ್ಯವಾದ ಆರಾಧನೆ ನಮಸ್ಕಾರಗಳಂನು ಮಾಡಿಕೊಂಡು ಬರುವದಲ್ಲದೆ, ಪೂಜೇ ಬಲಿಯಂನು ಒಪ್ಪಿಸ ಬೇಕೆಂದು ಸಮಸ್ತರ ಮೇಲೆ ಸಾಲವುಂಟಾಗಿರುತ್ತದೆ. ಆದರೆ ಅವರ ಮಹಿಮೆ ಪ್ರತಾಪಕ್ಕೆ ಯೋಗ್ಯವಾದ ಬಲಿಯಂನು ಸಮರ್ಪಿಸೋಣವಾದದ್ದು ಮನುಷ್ಯರಿಂದ ತೀರದು. ಮೃಗಾದಿಗಳ ಕಡಿದು ಒಪ್ಪಿಸುವ ಬಲಿಯೂ ಭೂಮಿಯಲ್ಲಿ ಬೆಳೆಯುವಂಥ ಫಲಾದಿಗಳೂ ಇವು ಮೊದಲಾದ ಕಾಣಿಕೆಗಳೂ ರಾಜಾಧಿ ರಾಯರಾದಂಥ ಪರಮ ಕರ್ತರ ಉಂನತವಾದ ಮಹಿಮೆ ಪ್ರತಾಪಕ್ಕೆ ಯೋಗ್ಯವಾಗಿರಲಾರವು. ಪರಲೋಕ ಭೂಲೋಕಗಳಲ್ಲಿರುವ ವಸ್ತುಗಳೆಲ್ಲವಂನು ಒಪ್ಪಿಸಿದಾಗ್ಯೂ, ಇವೆಲ್ಲಾ ಅವರ ಅನಂತ ಮಹಿಮೆ ಶೋಭನಕ್ಕೆ ಯೋಗ್ಯವಲ್ಲ. ಸರ್ವೇಶ್ವರನಾದವರು ಸಕಲ ಮೇಲು ಸ್ವರೂಪಿಯಾಗಿರುವದರಿಂದ, ಮಿತಿ ಇಲ್ಲದ

ಬಲಿ ಅವರಿಗೆ ಯೋಗ್ಯವೇ ಹೊರ್ತಾಗಿ, ಮತ್ತೊಂದಲ್ಲ. ಪರಮ ಕರ್ತರಾದವರಿಗೆ ಯೋಗ್ಯವಾದ ಬಲಿಯ ಸಮರ್ಪಕವಾದದ್ದು ಮನುಷ್ಯರ ಮುಖಾಂತ್ರವಾಗಿ ತೀರದಕಾರಣ, ನಂಮ ಮಧ್ಯಸ್ಥರಾದ ಜೇಸುನಾಥರು ಪರಲೋಕದಲ್ಲಿ ಇದ್ದು ಭೂಲೋಕಕ್ಕೆ ಚಿತ್ತೈಸಿ, ಮನುಷ್ಯಾವತಾರವಾಗಿ ಬಂದು, ತಾವೇ ತಮ್ಮನ್ನು ಅನಾದಿ ಪಿತನಿಗೆ ಬಲಿಯಾಗಿ ಒಪ್ಪಿಸ ಬೇಕೆಂದು ಚಿತ್ತವಾದರು. ಅದು ಯಾಕಂದರೆ, ಮನುಷ್ಯರ ಪಾಪಗಳಿಗೆ ಪ್ರಾಯಶ್ಚಿತ್ತವಾಗಿಯೂ, ಸರ್ವೇಶ್ವರನಿಗೆ ಯೋಗ್ಯವಾದ ಮಹಿಮೆ ಬರಮಾಡುವದಕ್ಕೋಸ್ಕರವಾಗಿಯೂ, ಶಿಲ್ವೆಯಲ್ಲಿ ಜಡಿಯಲ್ಪಟ್ಟು, ಪ್ರಾಣವಂನು ಕೊಟ್ಟು ಕರುಣದಲ್ಲಿ ತಂಮಂನು ಪಿತನಾದ ಸರ್ವೇಶ್ವರನಿಗೆ ಬಲಿಯಾಗಿ ಒಪ್ಪಿಸಿದರು. ಇದೇ ಶ್ರೇಷ್ಠವಾದ ಬಲಿ; ಈ ಬಲಿಹೊರ್ತಾಗಿ ಪರಮ ಕರ್ತರಿಗೆ ಯೋಗ್ಯವಾದ ಬಲಿ ಯಾವದೂ ಇಲ್ಲ. ಆದರೆ ನಂಮ ರಕ್ಷಕರಾದ ಜೇಸು ಕ್ರೀಸ್ತುನಾಥರು ಶಿಲ್ವೆಯಲ್ಲಿ ಪ್ರಾಣವಂನು ಕೊಟ್ಟ ಸಮಯದಲ್ಲಿ ತಂಮನ್ನು ತಾವೇ ಒಪ್ಪಿಸಿದ್ದಲ್ಲದೆ, ಗುರುಪಟ್ಟವುಳ್ಳ ಮಂದಿಗಳ ಮುಖಾಂತ್ರದಿಂದ ತಂಮಂನು ಬಲಿಯಾಗಿ ಒಪ್ಪಿಸಿಕೊಂಡು ಬರಬೇಕೆಂದು ಚಿತ್ತವಾದರು. ಇದು ಯಾಕಂದರೆ, ತಾವು ಪಾಡುಪಡುವದಕ್ಕಿಂತಾ ಮುಂಚೆ ಮೊದಲನೇ ದಿವಸದ ರಾತ್ರಿಯಲ್ಲಿ, ತಮ್ಮ ಶಿಷ್ಯರೊಂದಿಗೆ ಕೂಡ ಪಾಸ್ಖದ ಹಬ್ಬವಂನು ಆಚರಿಸಿದ್ದರಲ್ಲಿ, ಅಪ್ಪವಂನು ಕೈಯಲ್ಲಿ ಎತ್ತಿಕೊಂಡು ಆಶೀರ್ವದಿಸಿ: ಇದು ನಂಮ ಶರೀ

ರವೆಂದು, ಇದಂನು ಭೋಜಿಸಿರಿ ಎಂತಲೂ; ಮತ್ತು
ದ್ರಾಕ್ಷೀರಂಣಿನ ರಸವಿದ್ದಂಥ ಪಾತ್ರೆಯಂನು ತಮ್ಮ ತಿರು
ಕೈಯಲ್ಲಿ ಎತ್ತಿಕೊಂಡು ಆಶೀರ್ವದಿಸಿ: ಇದು ನಂಮ
ರಕ್ತವೆಂದು, ಇದಂನು ಪಾನಮಾಡಿರಿ ಎಂತಲೂ ಪಾಲಿಸಿ
ದರು. ಈ ತಿರು ವಾಕ್ಯಗಳ ಪಾಲಿಸೋಣದಲ್ಲಿಯೇ, ಅವರ
ಮಿತಿ ಇಲ್ಲದ ವಲ್ಲಭದಿಂದ, ಗೋಧಿವೇ ಅಪ್ಪವಾದದ್ದು
ಅವರ ತಿರು ಶರೀರವಾಯಿತು, ದ್ರಾಕ್ಷೀರಂಣಿನ ರಸ
ವಾದದ್ದು ಅವರ ತಿರು ರಕ್ತವಾಯಿತು. ಈ ರೀತಿಯಲ್ಲಿ
ನಿಜವಾದ ಸರ್ವೇಶ್ವರನೂ ನಿಜವಾದ ಮನುಷ್ಯನೂ
ಗೋಧಿವೇ ಅಪ್ಪದ ರೂಪದೊಳಗೆಯೂ ದ್ರಾಕ್ಷೀರಂ
ಣಿನ ರಸದ ರೂಪದೊಳಗೆಯೂ ಆತ್ಮದೊಂದಿಗೂ ಶರೀ
ರದೊಂದಿಗೂ ನಿಬದ್ಧಿಯಾಗಿ ವ್ಯಾಪಿಸಿಕೊಂಡು, ಇಂಥಾ
ದೇವ ದ್ರವ್ಯ ಅನುಮಾನದ ಮುಖಾಂತರದಿಂದ ತಂ
ಮಂನು ಜ್ಞಾನ ಭೋಜನವಾಗಿ ತಂಮ ಶಿಷ್ಯರಿಗೆ ಪಾಲಿಸಿ
ದಲ್ಲದೆ, ಮಧುರವಾದ ರಕ್ಷಕರು, ಶಿಲ್ವೆಯ ಮರದಲ್ಲಿ ತಂ
ಮಂನು ಬಲಿಯಾಗಿ ಒಪ್ಪಿಸಿದ್ದರ್ಕೆ ಸ್ಮರಣೆಯಾಗಿ ಬಲಿಪೂಜೆ
ಒಪ್ಪಿಸ ಬೇಕೆಂದು, ಅಪೋಸ್ತಲರಿಗೂ ಅವರ ಸ್ಥಾನದಲ್ಲಿ
ಬರುವಂಥ ಗುರುಪಟ್ಟವುಳ್ಳ ಮಂದಿಗಳಿಗೂ ಆಜ್ಞಾಪಿಸಿ
ಇದ್ದಾರೆ. ಇದು ಹ್ಯಾಗಂದರೆ, ಗೋಧಿವೇ ಅಪ್ಪವಾದದ್ದನ್ನು
ತಂಮ ದಿವ್ಯ ಶರೀರವಾಗಲೂ, ದ್ರಾಕ್ಷೀರಂಣಿನ ರಸವಾ
ದದ್ದಂನು ತಂಮ ತಿರು ರಕ್ತವಾಗಲೂ ಮಾಡಿದ ಬಳಿಕ,
ತಂಮ ಶಿಷ್ಯರಂನು ನೋಡಿ ಪಾಲಿಸಿದ್ದೇನಂದರೆ: ನೀವು

ಇದೆಲ್ಲವನ್ನು ನಮ್ಮ ಸ್ಮರಣೆಯಾಗಿ ಮಾಡಿಕೊಳ್ಳಿರಿ, ಎಂದು ಅಪ್ಪಣೆಯಂ ಪಾಲಿಸಿದರು. ಅದಕ್ಕೆ ಅರ್ಥವೇನಂದರೆ: ಗೋಧಿಯ ಅಪ್ಪವನ್ನೂ ದ್ರಾಕ್ಷೇರಂಜಿನ ರಸವನ್ನೂ ಎತ್ತಿಕೊಂಡು, ನಾವು ಪಾಲಿಸಿದ ವಾಕ್ಯಗಳ ನಂಮ ಸ್ಮರಣೆಯಾಗಿ ನೀವು ಸದಾ ಉಚ್ಚರಿಸಿ, ಗೋಧಿಯ ಅಪ್ಪವಾದದ್ದನ್ನು ನಂಮ ಶರೀರವಾಗಲೂ, ದ್ರಾಕ್ಷೇರಂಜಿನ ರಸವಾದದ್ದನ್ನು ನಂಮ ರಕ್ತವಾಗಲೂ ಮಾಡಿಕೊಳ್ಳಿ, ಎಂಬುವದಕ್ಕೆ ಅರ್ಥವಾಗಿದೆ. ಈ ರೀತಿಯಲ್ಲಿ ನಿಜವಾದ ಸರ್ವೇಶ್ವರನೂ ನಿಜವಾದ ಮನುಷ್ಯನೂ ಒಬ್ಬರಾಗಿರುವ ಜೇಸುನಾಥರು ಶಿಲ್ವೆಯಲ್ಲಿ ತಂಮನ್ನು ಅನಾದಿ ಪಿತನಿಗೆ ಬಲಿಯಾಗಿ ಒಪ್ಪಿಸಿದಮೇರೆಗೆ, ಈಗಲೂ ದಿನಂಪ್ರತಿಯಲ್ಲಿ ಗುರುಪಟ್ಟವುಳ್ಳಂಥ ಮಂದಿಗಳ ಮುಖಾಂತ್ರವಾಗಿ ದಿವ್ಯಪೂಜೆಯೊಳು ತಂಮನ್ನು ಒಪ್ಪಿಸುತ್ತಾ ಇದ್ದಾರೆ. ಇದಕ್ಕೂ ಅದಕ್ಕೂ ವ್ಯತ್ಯಾಸ ಯಾವದೆಂದರೆ: ಶಿಲ್ವೆಯ ಮರದಲ್ಲಿ ಒಪ್ಪಿಸಲ್ಪಟ್ಟಂಥಾದ್ದು ರಕ್ತಚೆಲ್ಲಿದ ಬಲಿ, ದಿವ್ಯ ಪೂಜೆಯ ಮುಖಾಂತ್ರವಾಗಿ ಒಪ್ಪಿಸಲ್ಪಡುವಂಥದ್ದು ರಕ್ತಚೆಲ್ಲದ ಬಲಿ.

ಈ ಪೂಜ್ಯವಾದ ರೀತಿಯಲ್ಲಿ ತಂಮನ್ನು ಬಲಿಯಾಗಿ ಒಪ್ಪಿಸುವದಲ್ಲದೆ, ದೇವ ಪ್ರಸಾದವನ್ನು ತೆಕ್ಕೊಳ್ಳುವವರಿಗೆ ತಂಮನ್ನು ಜ್ಞಾನ ಭೋಜನವಾಗಿ ಪ್ರಸಾದಿಸಿಕೊಂಡು ಬರುತ್ತಿದ್ದಾರೆ. ಸಕಲ ಪ್ರಸಾದಗಳೊಳಗೆ ಇದೇ ಮೇಲಾದ ಪ್ರಸಾದವು; ಸಕಲ ಪೂಜೆಗಳೊಳಗೆ ಇದೇ ಶ್ರೇಷ್ಠವಾದ ಪೂಜೆ ನೈವೇದ್ಯವು. ಸರ್ವೇಶ್ವರನಿಗೆ ಪ್ರಿಯವಾದ ಇಂಥಾ

ನೈವೇದ್ಯಕ್ಕೆ ಸರಿಯಾದ ಯಾವದೊಂದು ನೈವೇದ್ಯ ವಿಲ್ಲಾ. ಈ ಪೂಜೇ ಬಲಿಯಾದದ್ದು ಉಂನತವಾದ ಮಹಿಂಮೆಯಿಂದಲೂ ಮಿತಿಯಿಲ್ಲದ ಫಲಾದಿಗಳಿಂದಲೂ ಸರಲವಾದ ಪೂಜೆಗಳ ಅತಿಜೈಸುವ ಕಾರಣದಿಂದ ಇಂಥಾ ಪೂಜೆಗೆ ಸರಿಯಾದ ಪೂಜೆ ದೊರಕದು. ಇದರ ನಿಮಿತ್ತ ಈ ದಿವ್ಯ ಪೂಜೆ ನೋಡುವದಕ್ಕಾಗಿ ಅತ್ಯಂತ ಅಭಿಲಾಷೆಯಾಗಿದ್ದುಕೊಂಡಿರಬೇಕು. ಪರಮ ಬಲಿಯಂನು ನೋಡುವದಕ್ಕೋಸ್ಕರ ದೂರಕ್ಕೆ ಹೋಗಬೇಕಾದರೂ, ಹುರುಕಾಗಿ ಹೋಗುವದಲ್ಲದೆ, ಇಂಥಾ ದಿವ್ಯ ಪೂಜೆ ಸಿಕ್ಕುವಾಗ ನಿಮಗೆ ಎಣಿಸ ಕೂಡದ ಭಾಗ್ಯ ಸಿಕ್ಕಿತೆಂದು ನಿಶ್ಚೈಸಿಕೊಳ್ಳಿ. ದೇವಾಲಯದ ಸಮೀಪದಲ್ಲಿ ಇದ್ದರೆ, ದಿನಂಪ್ರತಿ ಪೂಜೆಯಂನು ನೋಡದೆ ಇರಬೇಡಿರಿ. ಆದಿತ್ಯವಾರದಲ್ಲಿಯೂ ಹಬ್ಬದಿವಸಗಳಲ್ಲಿಯೂ ದಿವ್ಯ ಪೂಜೆಯಂನು ನೋಡುವದಕ್ಕೆ ಘನವಾದ ಸಾಲವುಂಟಾಗಿರುವದು. ಪೂಜೇಬಲಿ ನೋಡುವದಕ್ಕೆ ಅವಕಾಶವಿಲ್ಲದೆ ಇರುವಾಗ, ಅಂತಾಂತಾ ಸ್ಥಳದಲ್ಲಿ ಪೂಜೆ ಆಗುವದೆಂದು ಜ್ಞಾಪಕ ಮಾಡಿಕೊಂಡು, ಅದನ್ನು ನೋಡಬೇಕೆಂಬ ಅತ್ಯಂತ ಅಭಿಲಾಷೆಯಿಂದ ಅಪೇಕ್ಷಿಸುವದಲ್ಲದೆ, ಅಂಥಾಂಥಾ ಸ್ಥಳದಲ್ಲಿ ಒಪ್ಪಿಸಲ್ಪಡುವ ದಿವ್ಯ ಪೂಜೆ ನೋಡುವವರಿಗೆ ಬರುವ ಫಲಗಳಲ್ಲಿ ನಮಗೊಂದು ಪಾಲು ಬರಬೇಕೆಂದು, ಪೂಜೇ ಮಂತ್ರವಂನಾದರೂ ಬೇರೆ ಜಪವಂನಾದರೂ ಭಕ್ತಿ ವಿನಯದೊಡನೆ ಪ್ರಾರ್ಥಿಸಿ ಕೊಳ್ಳುವೆನಾಗಲಿ.

ಪೂಜೆಯನ್ನು ನೋಡುವದಕ್ಕೆ ಬಂದಿರುವಾಗ ಧ್ಯಾನಿಸ ತಕ್ಕದ್ದು.

ದಿವ್ಯ ರಕ್ಷಕರು ಪಾಡುಪಟ್ಟದ್ದನ್ನು ಸ್ಮರಣೆ ಮಾಡಲೂ, ಸೃಷ್ಟಿಕರ್ತರ ಮಹಿಮೇ ಪ್ರತಾಪಕ್ಕೆ ಮಾಡ ತಕ್ಕ ಆರಾಧನೆ ನಮಸ್ಕಾರಗಳನ್ನು ಸಲ್ಲಿಸಲೂ, ದಯಾಪರರಾದ ಕರ್ತರು ಮನುಷ್ಯಜಾತಿಗೆ ಪಾಲಿಸಿದ ಎಣಿಸ ಕೂಡದ ಉಪಕಾರಗಳಿಗಾಗಿ ಮಾಡತಕ್ಕ ಸ್ತುತಿ ಸ್ತೋತ್ರವನ್ನು ಮಾಡಲೂ, ನಮ್ಮ ಪಾಪಗಳನ್ನೂ ಮತ್ತುಂಟಾದವರ ಪಾಪಗಳನ್ನೂ ಉತ್ತರಿಸುವ ಸ್ಥಳದಲ್ಲಿರುವ ಆತ್ಮಗಳ ಪಾಪಗಳನ್ನೂ ಪರಿಹರಿಸಲೂ. ಮನುಷ್ಯಜಾತಿಗೆ ಬೇಕಾದ ವರಪ್ರಸಾದಗಳ ಕರುಣಿಸಲೂ. ಇಂಥಾ ಮೇಲುಗಳನ್ನು ಪ್ರಸಾದಿಸಲು ಪೂಜೇ ಬಲಿಯಾದದ್ದು ವಲ್ಲಭವಾಗಿರುವದು.

ಸರ್ವ ಶಕ್ತಿಯುಳ್ಳ ರಕ್ಷಕರು ದಿವ್ಯ ಪೂಜೇ ಮುಖಾಂತ್ರವಾಗಿ ಪಿತನಾದ ಸರ್ವೇಶ್ವರನಿಗೆ ತಾವೇ ತಮ್ಮನ್ನು ಬಲಿಯಾಗಿ ಒಪ್ಪಿಸುವ ಕಾರಣದಿಂದಲೂ, ನಮಗೆ ಬೇಕಾದ ಉಪಕಾರಗಳನ್ನು ಕರುಣಿಸ ಬೇಕೆಂಬ ಚಿತ್ತ ಸಂಕಲ್ಪನೆಯಾಗಿ ಈ ಪೀಠದ ಮೇಲೆ ಚಿತ್ತೈಸಿ ಬರುವದರಿಂದಲೂ, ಈ ದಿವ್ಯ ಪೂಜೆಯನ್ನು ಯೋಗ್ಯವಾಗಿ ನೋಡುವವರಿಗೆ ಮಿತಿಯಿಲ್ಲದ ಫಲ ಸಿಕ್ಕುವದೆಂಬುವದಕ್ಕೆ ಸಂದೇಹವಿಲ್ಲ. ಈ ದಿವ್ಯ ಪೂಜೆಯನ್ನು ಯೋಗ್ಯವಾಗಿ ನೋಡುವದಾಗಿ ಮಾಡ ತಕ್ಕದ್ದೇನಂದರೆ: ನಿಮ್ಮ ಜ್ಞಾನವು ಬಗೆ

ಬಗೆ ಕಾರ್ಯಗಳ ವಿಚಾರಿಸಿ ತಿರುಗಾಡದದಾಗೆ, ನಿಂಮ ಚಿಂತೆ ಆಸೆಗಳಂನು ಪರಮ ಬಲಿಯ ಮೇಲೆ ನೆಲೆಯಾಗಿ ನಿಲ್ಲಿಸಿಕೊಂಡು, ದೇವಾಲಯದೊಳಗೆ ಸರ್ವೇಶ್ವರನ ತಿರು ಸಂನಿಧಾನದಲ್ಲಿ ಇದ್ಧೇವೆಂದು ನಿಶ್ಚಯಿಸಿಕೊಳ್ಳುವದಲ್ಲದೆ, ಮೊಣಕಾಲಿನಲ್ಲಿ ಇದ್ದು ಅತ್ಯಂತ ಭಕ್ತಿ ವಿನಯದೊಡನೆ ಪ್ರಾರ್ಥಿಸಿಕೊಂಡು, ಗುರುಪಟ್ಟವುಳ್ಳಂಥವರು ಮಾಡುವ ಜಪ ಸ್ತೋತ್ರಗಳೊಂದಿಗೆ ನಿಂಮ ಪ್ರಾರ್ಥನೆಗಳ ಕೂಡಿಸಿ. ಈ ದಿವ್ಯ ಪೂಜೆಯಲ್ಲಿ ದೇವ ಪ್ರಸಾದವಂನು ಹೊಂದುಕೊಳ್ಳ ಬೇಕೆಂಬದಾಗಿ, ಮಹಾ ಅಭಿಲಾಷೆಯಿಂದ ಅಪೇಕ್ಷಿಸ ಬೇಕಾಗಿರುತ್ತದೆ.

ಪಾಪಿಯಾದವನೇ. ಮಧುರವಾದ ರಕ್ಷಕರ ತಿರು ಪಾದುಗಳಂನೂ ತಿರು ಮರಣವಂನೂ ಕಣ್ಣಿನಿಂದ ನೋಡಿದಂಥ ದೇವ ಮಾತೆಯೊಂದಿಗೂ ಪುತ್ತುಂಬಾದ ಸ್ತ್ರೀಯರುಗಳೊಂದಿಗೂ ಕಪಾಲ ಬೆಟ್ಟಕ್ಕೆ ಬಂದಿದ್ಧೇನೆಂತ ನೀನು ಧ್ಯಾನಿಸಿಕೋ.

ಇಗೋ ಘೋರದ ರಕ್ಷಕರು ಶಿಲ್ವೆಯಂನು ಹೊತ್ತುಕೊಂಡು ನಿನಗೆ ಮುಂದಾಗಿ ಚಿತ್ತೈಸುತ್ತಿದ್ಧಾರೆಂಬುವದಂನೂ. ಅವರ ತಿರು ಪಾಡುಗಳಿಗೆ ನಿಂನ ಪಾಪಗಳೇ ಕಾರಣವೆಂಬುವದಂನೂ ನಿಂನ ಆತ್ಮದ ರಕ್ಷಣ್ಯಕ್ಕಾಗಿ ಕಠಿನವಾದ ಮರಣ ಹೊಂದುವರೆಂಬುವದಂನೂ ಜ್ಞಾನದಿಂದ ಭಾವಿಸಿಕೊಂಡು, ನಿಂನ ಪಾಪಗಳಿಗಾಗಿ ದುಃಖವಂಗೈದು. ಅಧಿಕ ವಿನಯಾಚಾರದೊಡನೆಯೂ ದೃಢವಾದ

ವಿಶ್ವಾಸ ನಂಬಿಕೆಯೊಡನೆಯೂ ದಯಾಪರರಾದ ರಕ್ಷಕರಂನು ಆರಾಧಿಸುವದಾಗಿ ಪ್ರಾರ್ಥಿಸಿರೋ.

ದೇವ ಮಾತೆಯ ಸಹಾಯವಂನು ಕೇಳಿಕೊಂಬುವದು.

ಅಪ್ಪಾ, (ಅಂಮಾ,) ಎಷ್ಟುಸಾರಿ ನಿಂನ ಪಾಪಗಳಿಂದ ಮೋಕ್ಷವಂನು ಹೋಗಲಾಡಿಸಿ ನರಕದಲ್ಲಿ ಬೀಳುವದಕ್ಕೆ ಪಾತ್ರನಾದಿಯೋ ! ನರಕದಲ್ಲಿ ಬಿದ್ದರೆ ಎಂದೆಂದಿಗೂ ಆರದ ಬೆಂಕಿಯೊಳಗೆ ಬೇಯುವಿಯಲ್ಲ ? ಈಗಲಾದರೂ ಅದಕ್ಕೆ ಅಂಜಿಕೊಂಡು, ನಿಂನ ಪಾಪಗಳಿಗಾಗಿ ಬಹು ಮನಸ್ತಾಪವಾಗಿದ್ದೀಯೋ ? ಇಂನು ಮುಂದೆ ಬದುಕಿದರೆ ಇಂಥಾ ಮೋಸಬಾರದಹಾಗೆ ಪಾಪವ ಮಾಡುವದಿಲ್ಲವೆಂದು ಘಟ್ಟಿ ಮನಸ್ಸಾಗಿ ಪ್ರತಿಜ್ಞೇ ಮಾಡುತ್ತೀಯೋ ? ಇದಲ್ಲದೆ ನಿಂನಂನುಂಟುಮಾಡಿದಂಥಾ ಸಕಲ ಮೇಲು ಸ್ವರೂಪಿಯಾದ ನಿಂನ ಕರ್ತರಂನು ಸಡ್ಡೆ ಮಾಡದೆ ಅವರಿಗೆ ಹೊಂದದ ದ್ರೋಹಗಳ ಮಾಡಿದಿಯಲ್ಲ ? ನಿಂನ ಪಾಪಗಳಿಂದ ಜೇಸುನಾಥರಂನು ಶಿಲ್ವೆಯಲ್ಲಿ ತಿರಿಗಿಹಾಕಿ, ಅವರ ತಿರು ಘಾಯಗಳಂನು ನೋಯಿಸಿದಿಯಲ್ಲ ? ಇದರಿಂದ ಈಗಲು ಎಲ್ಲಕ್ಕಿಂತಲೂ ಸ್ವಾಮಿಯಮೇಲೆ ಭಕ್ತಿಯಾಗಿದ್ದು ಬಹು ದುಃಖವಾಗಿದ್ದೀಯೋ ? ಇಂನುಮೇಲೆ ಬದುಕಿದರೆ ನಿಂನ ಕರ್ತರಿಗೆ ಹೊಂದದ ಪಾಪಗಳಂನು ಮಾಡುವದಿಲ್ಲವೆಂತ ಪ್ರತಿಜ್ಞೇ ಮಾಡುತ್ತೀಯೋ? ಈ ಪ್ರಕಾರ ಮನಸ್ತಾಪಪಟ್ಟು ಪಾಪಸಂಕೀರ್ತನವ ಮಾಡಿದರೆ, ಸರ್ವೇಶ್ವರನು ತಂಮ ಮಿತಿಯಿಲ್ಲದ ದಯವಂನೂ ಜೇಸುನಾಥರ ಪಾಡುಗಳ ಪುಣ್ಯ ಫಲಗ

ళంనూ నోడి నింన పాపగళంనెల్లా తాళికొండు మోక్షభాగ్యవంను పాలిసువరెందు స్థిరవాగి నంబి యిద్దీయో? మత్తూ సర్వేశ్వరను ఉంటెందూ, సర్వేశ్వరను పితను సుతను స్పిరితు సాంక్తువెంబ మూరు మందిగళాగిద్దరూ ఒబ్బ సర్వేశ్వరనే ఆగి ఇద్దారెందూ, సుతనాద సర్వేశ్వరను నంమ పాప గళిగాగి మనుష్యనాగి హుట్టి పాడుపట్టరెందూ, అవనవను సత్తబళిక పాపిగళ ఆత్మగళంను నరకదల్లి తళ్ళి పుణ్యాత్మర ఆత్మగళంను మోక్షదల్లి ఇరిసువద ల్లదే, సాధారణ తీర్పియల్లి పాపిగళ ఆత్మ శరీరగళంను నరకదల్లి తళ్ళి పుణ్యాత్మరుగళ ఆత్మ శరీరగళంను మోక్షానందదల్లి నిత్యకాలక్కె మడుగువరెందూ, తిరు సభె విశ్వాసిసి నమగె బోధిసువదెల్లా తప్పిల్లదె సత్య వంతరాగిరువ సర్వేశ్వరను పాలిసిద్దరింద నీను ఘట్టియాగి విశ్వాసిసుత్తీయో?

నంనకూడ బాయిందలాదరూ మనస్సినల్లియా దరూ ఉత్తమ మనస్తాపద మంత్రవంను హేళు.

ఎల్లక్కింతలూ ననగె ప్రియవాద కర్తరే, అనంత మేలు స్వరూపవాగిరువ నిమగె నంన లెక్కవిల్లద పాప గళింద దొడ్డ అన్యాయగళంను నాను మాడిదె నెందు మహా దుఃఖవాగిద్దీనె, స్వామీ. ఇంను మేలె ఘోర శరీరద సంమంధవాదద్దెల్లా హోసికొండు,

ದೇವರವರ ಮೇಲೆ ಮಹಾ ಭಕ್ತಿಯಾಗಿದ್ದು, ಯಾವ ಪಾಪವಾಗಲಿ ಮಾಡುವದಿಲ್ಲವೆಂದು ಘಟ್ಟಿ ಪ್ರತಿಜ್ಞೇ ಮಾಡುತ್ತಿದ್ಧೇನೆ, ಸ್ವಾಮೀ. ಇಂದಿನ ವರಿಗೆ ನಾನು ಮಾಡಿದ ದ್ರೋಹಗಳೆಲ್ಲಾ ನಿಂಮ ದಯದಿಂದಲಾ ಜೇಸುನಾಥರ ಧರ್ಮದಿಂದಲಾ ತಾಳುವಿರಿ ಎಂದು ನಂಬಿಯಿದ್ಧೇನೆ. ಆಮೆನ್ ಜೇಸು.

ವ್ಯಾಧಿಕಾರನು ದೇವ ಪ್ರಸಾದವಂನು ತೆಕ್ಕೊಂಬುವದಕ್ಕೆ ಇರುವಾಗ ಅವನಿಗೆ ಕೇಳತಕ್ಕ ಅಯಿತ್ತವು.

ಅಪ್ಪಾ, (ಅಮ್ಮಾ,) ದಿವ್ಯ ಸತ್ ಪ್ರಸಾದವಂನು ತೆಕ್ಕೊಂಬುವದಕ್ಕೆ ಆಸೆಯಾಗಿದ್ಧೇಯೋ? ಈ ಭೂಲೋಕದಲ್ಲಿ ಮನುಷ್ಯರೊಳಗೆ ಸಂಚರಿಸುತ್ತಿರುವಾಗ, ಒಂದೇ ವಾಕ್ಯದಿಂದ ಅನೇಕ ರೋಗಗಳಂನು ಪರಿಹರಿಸಿ, ಗರೀಬರಿಗೆ ಉಪಶಮನವಂನು ಕರುಣಿಸಿಕೊಂಡು ಬಂದ ದಿವ್ಯ ಜೇಸುನಾಥರು ದಿವ್ಯ ಸತ್ ಪ್ರಸಾದದಲ್ಲಿ ತಂಮ ಆತ್ಮ ಶರೀರದೊಂದಿಗೂ ದೇವ ಸ್ವಭಾವದೊಂದಿಗೂ ಚಿತ್ತೈಸುತ್ತಿದ್ಧಾರೆ. ನೀನು ಇದಂನು, ತಪ್ಪಿಲ್ಲದ ಸತ್ಯವಂತರಾಗಿರುವ ಸರ್ವೇಶ್ವರನು ಪಾಲಿಸಿದ್ದರಿಂದ, ಘಟ್ಟಿಯಾಗಿ ವಿಶ್ವಾಸಿಸುತ್ತೀಯೋ? ನೀನು ಸುಖವಾಗಿ ಇದ್ದಾಗ, ಅನೇಕ ಸಾರಿ ದೇವ ಪ್ರಸಾದವಂನು ತೆಕ್ಕೊಂಡಿಯೋ? ಕಾದೇ

ನೋ? ಇಷ್ಟು ಸಾರಿ ನಿಂನಲ್ಲಿ ಚಿತ್ತೈಸಿದ ಕರ್ತರು, ಈ ಸಮಯದಲ್ಲಿ ತಂಮ ಮಿತಿಯಿಲ್ಲದ ಕೃಪೆಯಿಂದ ದೇವ ಪ್ರಸಾದದಲ್ಲಿ ನಿಂನೊಳಗೆ ಬರ ಚಿತ್ತವಾಗಿದ್ದಾರೆ. ನೀನು ಸಾಯುವ ಹೊತ್ತಿಗೆ ದೂರ ಪ್ರೈಣ ಮಾಡುವವನ ಹಾಗೆ ಇರುತ್ತೀಯೇ. ಹಾದಿ ಪ್ರೈಣದಲ್ಲಿ ಕಂಗೆಟ್ಟು ಬೀಳದಹಾಗೆ ಬೇಕಾದ ಸಾರಣೆಯಂನು ಮಾಡ ಬೇಕು. ಈ ಭೂಲೋಕವಂ ಬಿಟ್ಟು ಮರು ಲೋಕಕ್ಕೆ ಪ್ರೈಣದಲ್ಲಿ ಮೋಸ ಬಾರದ ಹಾಗೆ ದೇವರ ವಿಷಯದಲ್ಲಿ ವಿಶ್ವಾಸ ನಂಬಿಕೆ ದೇವ ಭಕ್ತಿ ಮೊದಲಾದ ಪುಣ್ಯಗಳ ಭದ್ರಮಾಡ ಬೇಕು. ಇಗೋ! ದಿವ್ಯ ಜೇಸುನಾಥರು ನಿಂನ ಸಾವಿನ ಅವಸ್ತೆಯಲ್ಲಿ ನಿನಗೆ ಮೋಸ ವಾಗದ ಹಾಗೆ ದೇವ ಪ್ರಸಾದದಲ್ಲಿ ದಿವ್ಯ ಭೋಜನವಾಗಿ ತಂಮ ತಿರು ಶರೀರವಂನು ಪಾಲಿಸುವರು. ಅವರ ಕಾರುಣ್ಯಗಳಿಗೆ ಸಮಾನವುಂಟೋ? ನೀನು ಇಂಥಾ ದಯವಂನರಿತು, ಇಂಥಾ ದೇವ ಪ್ರಸಾದವಂನು ಕೈಕೊಂಬುವದಕ್ಕೆ ಉತ್ತಮವಾದ ಆಯಿತ್ತ ಮಾಡಬೇಕು.

ಹೀಗೆ ಗುರು ಸ್ವಾಮಿಯವರು ದೇವ ಪ್ರಸಾದವಂನು ತರುವ ಪರಿಯಂತರ ವ್ಯಾಧಿಷ್ಟಂನ ಬಿಡದೆ ವೇಳೆ ವೇಳೆಗೆ ಅವಂನ ಎಚ್ಚರಿಸುವ ಹಾಗೆ ಹೇಳತಕ್ಕದ್ದು:

ಇಗೋ! ಒಂದಿಷ್ಟೊತ್ತಿಗೆ ಜೇಸುನಾಥರು ನಿಂನ ರಕ್ಷಿಣ್ಯಕರಾಗಿ ನಿಂನೊಳಗೆ ಚಿತ್ತೈಸಿ ಬರುತ್ತಾರೆ: ಅವರಂನು ನಿರೀಕ್ಷಿಸಿಕೋ.

ಇದಲ್ಲದೆ ವ್ಯಾಧಿಯಿಂದ ಶರೀರದಲ್ಲಿ ರಾಹಿಸುವ ಕಷ್ಟ

ನೋವುಗಳನ್ನು ವ್ಯಾಧಿಕಾರನು ಕರ್ತರಿಗೆ ಒಪ್ಪಿಸುವ ಹಾಗೆ ಆಗಾಗ್ಯೆ ಹೇಳತಕ್ಕದ್ದು :

ಮಧುರವಾದ ಕರ್ತರೇ, ನಿಂಮ ಚಿತ್ತವಾಗಲಿ! ನಾನು ದೇವರವರಿಗೆ ಮಾಡಿದ ದ್ರೋಹಕ್ಕೆ ಇಂಥಾ ಬಾಧೆ ಸಾಲದು. ಇದು ನಿಂಮ ಪಾದವಲ್ಲಿ ಒಪ್ಪಿಸುತ್ತಿದ್ದೇನೆ; ಈ ಕಷ್ಟದಿಂದ ನಿಮಗೆ ಸ್ತೋತ್ರವುಂಟಾಗುವಹಾಗ್ಯೂ, ನನಗೆ ಪುಣ್ಯ ಬರುವಹಾಗ್ಯೂ, ತಾಳುವದಕ್ಕೆ ನನಗೆ ತ್ರಾಣ ಧೈರ್ಯವಂನು ಪಾಲಿಸಿರಿ, ಸ್ವಾಮೀ.

ಗುರು ಸ್ವಾಮಿಯವರು ದಿವ್ಯ ಸತ್ ಪ್ರಸಾದವಂನು ತಂದ ಸಮಯದಲ್ಲಿ, ವ್ಯಾಧಿಷ್ಟನ ನೋಡಿ, ಹೇಳತಕ್ಕದ್ದು :

ಅಪ್ಪಾ, (ಅಂಮಾ,) ಗುರು ಸ್ವಾಮಿಯವರು ದೇವ ಪ್ರಸಾದವಂನು ತಂದಿದ್ದಾರೆ. ನಿಂನ ಆತ್ಮವಂನು ಬದುಕಿಸುವದಕ್ಕೆ ದಿವ್ಯ ವೈದ್ಯರಾದ ಜೇಸುನಾಥರು ಚಿತ್ತೈಸಿದ್ದಾರೆ. ದೇವ ಪ್ರಸಾದವ ಮಹಾ ಭಕ್ತಿ ವಿನಯದೊಂದಿಗೆ ತೆಕ್ಕೊಳ್ಳಬೇಕು. ನಂನೊಂದಿಗೆ ಕೂಡ ನಿಂನ ಮನಸ್ಸಿನಲ್ಲಿ ಧ್ಯಾನಿಸುವ ಹಾಗೆ ಹೇಳು.

ನಂನ ಜೇಸುವೇ, ಪಾಪದಿಂದ ಮಹಾ ಕೊಳಕಾಗಿರುವ ನಂನ ಆತ್ಮದ ಗುಡಿಸಲು ನಿಮಗೆ ಬಿಡುದಿ ಆಗುವದಕ್ಕೆ ಪಾತ್ರವಾದದ್ದಲ್ಲ. ನಂನ ಆತ್ಮಕ್ಕೆ ಆರೋಗ್ಯವಾಗಲಿಯೆಂತ ಒಂದು ವಾಕ್ಯವಂನು ಮಾತ್ರ ಪಾಲಿಸಿದರೆ ಸಾಕು. ಮಧುರವಾದ ರಕ್ಷಕರೇ, ನೀವೇ ನಂನಲ್ಲಿ ಬರ ಚಿತ್ತವಾಗಿದ್ದೀರಿಯಲ್ಲ? ಹಾಗಾದರೆ ದಯಾ ಮಾಡಿ, ಸ್ವಾಮೀ. ದೇವ

ರವರು ನಂನಲ್ಲಿ ದಯಾ ಮಾಡಬೇಕೆಂಬ ಆಶೆಗಿಂತಾ ನನಗೆ ಅಧಿಕವಾದ ಆಸೆ ಯಾವದೂ ಇಲ್ಲ.

ವ್ಯಾಧಿಕಾರನು ದೇವ ಪ್ರಸಾದವಂನು ತೆಕ್ಕೊಂಡ ಬಳಿಕ, ಅವಂನ ನೋಡಿ ಕೇಳತಕ್ಕದ್ದು:

ಅಪ್ಪಾ, (ಅಮ್ಮಾ,) ನಮ್ಮ ಜೇಸುನಾಥರು ನಿಂನಲ್ಲಿ ಚಿತ್ತೈಸಿ ಬಂದಿದ್ದಾರೆ. ಇವರು ತಾನೇ, ನಿನಗೆ ಸಾವು ಆದ ಬಳಿಕ, ಮೋಕ್ಷವಂನಾದರೂ ನರಕವಂನಾದರೂ ನೇಮಿಸಿ ಕೊಡುವರು. ನಿನಗೆ ದಯಾ ಮಾಡಿ ಮೋಕ್ಷವಂನು ಕರುಣಿಸುವ ಹಾಗೆ, ಈಗಲೇ ಅವರಂನು ಬಹು ದೈನ್ಯವಾಗಿ ಬೇಡಿಕೊಳ್ಳಬೇಕು. ಈಗಲು ನಂನೊಂದಿಗೆ ನಿಂನ ಮನಸ್ಸಿನಲ್ಲಿ ಧ್ಯಾನಿಸಿ ಕೊಂಡು ಕೇಳು.

ನನ್ನ ಜೇಸುನಾಥರೇ, ನನ್ನೊಳಗೆ ಚಿತ್ತೈಸಿದಿರಿಯಲ್ಲ? ಇದಂನು ನಾನು ತುಂಬ ಮನಸ್ಸಾಗಿ ವಿಶ್ವಾಸಿಸಿಕೊಂಡು, ದೇವರವರಿಗೆ ಆರಾಧನೇ ಸ್ತೋತ್ರವಂನು ಮಾಡುತ್ತಿದ್ದೇನೆ. ದೇವರವರು ನಂನ ಆತ್ಮ ಶರೀರವಂನ ಉಂಟುಮಾಡಿ ಇಂದಿನ ವರಿಗೆ ಸಂರಕ್ಷಿಸಿ ಕೊಂಡು ಬಂದಿರಿಯಲ್ಲ? ನಿಮಗೆ ಸ್ತೋತ್ರವುಂಟಾಗಲಿ! ದೇವರವರು ನನಗೋಸ್ಕರ ಪಾಡು ಪಟ್ಟು ಶಿಲ್ವೆಯಲ್ಲಿ ಕಠಿಣವಾದ ಮರಣವಂನು ಕೊಂದಿದಿರಿಯಲ್ಲ? ನಿಮಗೆ ಸ್ತೋತ್ರವುಂಟಾಗಲಿ! ದೇವರವರು ನಂನಂನು ನರಕದಲ್ಲಿ ದೊಬ್ಬದೆ, ಅನೇಕ ಸಾರಿ ನಂನ ಪಾಪಗಳಂನು ತಾಳಿದಿರಿ, ಸ್ವಾಮೀ; ನಿಮಗೆ ಸ್ತೋತ್ರ

ಉಂಟಾಗಲಿ! ದೇವರವರು ನಂನ ಆತ್ಮವಂನು ಬದುಕಿಸುವದಕ್ಕೆ ಮೊದಲೇ ನನಗೆ ಅನೇಕ ಸಾರಿ ದಿವ್ಯ ಭೋಜನವಾಗಿ ಪಾಲಿಸಿದ ನಿಮ್ಮ ತಿರು ಶರೀರವಂನು ಈಗಲೂ ತಿರಿಗಿ ನನಗೆ ಉಪಶಮನ ಆಧಾರವಾಗಿ ಪ್ರಸಾದಿಸುತ್ತೀರೇ; ನಿಮಗೆ ಸ್ತೋತ್ರ ಉಂಟಾಗಲಿ! ದೇವರವರು ಲೆಖ್ಖವಿಲ್ಲದ ಬೇರೆ ಬೇರೆ ಸಹಾಯಗಳ ನನಗೆ ಮಾಡಿ ಕೊಂಡು ಬಂದಿರಿ, ಸ್ವಾಮಿ; ನಿಮಗೆ ಸ್ತೋತ್ರ ಉಂಟಾಗಲಿ! ನಾನಿಷ್ಟು ಉಪಕಾರಗಳಂನರಿಯದೆ ದೇವರವರಿಗೆ ಲೆಖ್ಖವಿಲ್ಲದ ದ್ರೋಹಂಗಳ ಮಾಡಿ ಕೊಂಡು ಬಂದಿದ್ಧೇನೆ, ಸ್ವಾಮಿ. ಅರಿಯದೆ ಮಾಡಿದೆನು, ನಂನ ಪಾಪಗಳ ತಾಳಿ ಕೊಳ್ಳಿ, ಸ್ವಾಮಿ. ನಾನೀಗಲೇ ದೇವರವರ ಮೇಲೆ ಭಕ್ತಿಯಾಗಿದ್ದು, ನಿಮಗೆ ಕೋಪಾಂದದ ಪಾಪಗಳ ಮಾಡಿದೆನೆಂದು ಬಹು ಮನಸ್ತಾಪವಾಗಿದ್ಧೇನೆ, ಸ್ವಾಮಿ. ಇಂನು ಮೇಲೆ ನಾನು ಬದುಕಿದರೆ, ಯಾವ ಪಾಪವಂನಾದರೂ ಮಾಡುವದಿಲ್ಲವೆಂದು ಘಟ್ಟಿ ಮನಸ್ಸಾಗಿ ಪ್ರತಿಜ್ಞೆಯಂನು ಮಾಡುತಿದ್ಧೇನೆ. ದೇವರವರು ದೇವ ಪ್ರಸಾದದಲ್ಲಿ ನಿಂಮಂನು ಪೂರ್ತಿಯಾಗಿ ನನಗೆ ಈಗಲೇ ಕರುಣಿಸಿ ಕೊಟ್ಟಿರಿಯಲ್ಲ? ನಾನೇನು ಬದಲಾಗಿ ನಿಮಗೆ ಕೊಟ್ಟೇನು? ನಂನ ಆತ್ಮ ಶರೀರ ಸಮಸ್ತವಂನು ದೇವರ ಪಾದದಲ್ಲಿ ಕಾಣಿಕೆಯಾಗಿ ಒಪ್ಪಿಸುತ್ತಿದ್ಧೇನೆ. ನಿಂಮ ಪಾಡುಗಳ ಉದ್ದೇಶವಾಗಿಯೂ, ನಂನ ಪಾಪಗಳಿಗಾಗಿ ಉತ್ತರಿಸುವ ಹಾಗೂ, ನಂನ ವ್ಯಾಧಿ, ನಂನ ಕಸ್ತಿ, ನಂನ ನೋವುಗಳೆಲ್ಲಾ ದೇವರವರಿಗೆ ಒಪ್ಪಿಸುತ್ತಿದ್ಧೇನೆ. ಈಗಲೂ

ನಂನಂನು ಕರೆಯುವದಕ್ಕೆ ಚಿತ್ತವಾಗಿದ್ದರೆ ನಿಂಮ ದಿವ್ಯ ಚಿತ್ತವಾಗಲಿ, ಸ್ವಾಮಿ. ಜೀವದ ಮೇಲೆ ನಂನಲ್ಲಿ ಆಸೆಯು ಇಲ್ಲ. ಅದಂನು ತೆಗದು ಕೊಳ್ಳಿ, ಕರ್ತರೇ; ಆದರೆ ಇಂದಿನ ವರಿಗೆ ದೇವರವರು ನಂನಂನು ರಕ್ಷಿಸಿದ ಮೇರೆಗೆ ಈಗಲೂ ರಕ್ಷಿಸಿರಿ, ಸ್ವಾಮಿ. ಒಳ್ಳೇ ಮರಣವಂನು ಪಾಲಿಸಿ, ತಂಮ ಸಂನಿಧಿಗೆ ನಾನು ನೀತಿವಂತನಾಗುವ ಹಾಗೆ ದಯಾ ಮಾಡಿ, ನಿಂಮ ಪಂಚ ಘಾಯಗಳಂನೂ ನಿಂಮ ಅಚ್ಯರ್ಶಿಷ್ಟ ಮಾತೆಯಾದವಳ ಸುಕೃತ ಪುಣ್ಯಗಳಂನೂ ನೋಡಿ, ನಾನೀಗ ಬೇಡಿ ಕೊಂಡದ್ದೆಲ್ಲಾ ಪಾಲಿಸಿರಿ, ಸ್ವಾಮಿ. ನಿಂಮ ಆಶೀರ್ವಾದವಂನು ಪರಿಪೂರ್ಣವಾಗಿ ಕರುಣಿಸಿರಿ, ಸ್ವಾಮಿ.

ಅವಧೀ ಅಭ್ಯಂಗಕ್ಕೆ ಆಯಿತ್ತವು.

ಅವಧೀ ಅಭ್ಯಂಗ ಕೊಡಿಸುವದಕ್ಕೆ ಗುರುಗಳಂನು ಕರೆಯುವ ಹಾಗೆ ನಾಡಿಬಿದ್ದು ಬದುಕುವದಕ್ಕೆ ನಂಬಿಕೆಯಿಲ್ಲಾ ತಪ್ಪಿದ ಪರಿಯಂತ್ರಕ್ಕೂ ಜಾಲ ಮಾಡಬಾರದು. ಆ ವ್ಯಾಧಿಯಿಂದ ಸಾವು ಬರ ಬರುದೆಂದು ಕಂಡರೆ, ಬೇಗ ಸ್ವಾಮಿಗೆ ತಿಳಿಯ ಪಡಿಸಬೇಕು.

ಅವಧೀ ಅಭ್ಯಂಗವೆಂಬ ದೇವ ದ್ರವ್ಯ ಅನುಮಾನವಂನು ಭಕ್ತಿಯಾಗಿ ವ್ಯಾಧಿಷ್ಟನು ತೆಕ್ಕೊಳ್ಳುವ ಹಾಗೆ ಹೇಳ ಬೇಕಾದ್ದು.

ಅಪ್ಪಾ, (ಅಮ್ಮಾ,) ಅವಧೀ ಅಭ್ಯಂಗವಂನು ತೆಕ್ಕೊಳ್ಳ ಬೇಕಲ್ಲ ? ಶರೀರಕ್ಕೆ ಒಳ್ಳೇ ತೈಲವ ಲೇಪಿಸಿದರೆ, ಸುಖವೂ ತ್ರಾಣವೂ ಆರೋಗ್ಯವೂ ಹುಟ್ಟುವವು. ಜ್ಞಾನ ವೈದ್ಯರಾಗಿರುವ ಜೇಸುನಾಥರು ಆಪತ್ತು ಕಾಲದಲ್ಲಿ ನಿಂನ ಆತ್ಮದ ಪ್ರಯೋಜನಕ್ಕಾಗಿ ಅವಧೀ ಅಭ್ಯಂಗವೆಂಬ ತೈಲದ ಮುಖಾಂತರವಾಗಿ ಆತ್ಮದ ವ್ಯಾಧಿಯೆಂಬ ಪಾಪಗಳಂನು ಶುದ್ಧವಾಗಿ ಪರಿಹಾರ ಮಾಡುವರು. ವ್ಯಾಧೀ ಉಗ್ರದಿಂದ ಆತ್ಮವು ಕಂಗೆಡದೆ, ಪುಣ್ಯಗಳ ಮಾಡುವದಕ್ಕೂ ಪಿಶಾಚಿಯ ತಂತ್ರ ಶೋಧನೆಗಳ ಜಯಿಸುವದಕ್ಕೂ ತ್ರಾಣವೂ ಧೈರ್ಯವೂ ಹುಟ್ಟುವವು. ಕಷ್ಟ ನೋವುಗಳ ಸೈರಿಸುವಹಾಗೆ ಉಪಶಮನವಾಗುತ್ತದೆ. ಮತ್ತೂ ಶರೀರದಾರೋಗ್ಯವು ಆತ್ಮಕ್ಕೆ ಪ್ರಯೋಜಕವಾಗಿದ್ದರೆ, ಶರೀರಕ್ಕೂ ಸ್ವಸ್ತವಾಗ ಬಹುದು. ಕಡೇ ಸಾರಿ, ಮರಣವಾದ ಮೇಲೆ ಉತ್ತರಿಸುವ ಸ್ಥಳಕ್ಕೆ ಹೋಗ ಬೇಕಾದರೆ, ಅವಧೀ ಅಭ್ಯಂಗವಂನು ತೆಕ್ಕೊಳ್ಳಲ್ಪಟ್ಟಿದ್ದ ಭಕ್ತಿಗೆ ತಕ್ಕ ಹಾಗೆ, ಉತ್ತರಿಸುವ ಬಾಧೆಗಳು ತಗ್ಗಿ ಹೋಗುವವು. ಇದಲ್ಲದೆ ಇಂಥಾ ದೇವ ದ್ರವ್ಯ ಅನುಮಾನವಂನು ಉತ್ತಮವಾದ ಭಕ್ತಿಯೊಂದಿಗೆ ತೆಕ್ಕೊಂಡವನು ಉತ್ತರಿಸುವ ಸ್ಥಳಕ್ಕೆ ಹೋಗದೆ, ನೆಟ್ಟಗೆ ಮೋಕ್ಷಕ್ಕೆ ಹೋಗ ಬಹುದು. ಹಾಗಾದರೆ, ನೀನೀಗಲೇ ಕೂಡಿ

దష్టు ఆసె భక్తి విశ్వాసదొందిగె అవధీ అభ్యంగ తెక్కొళ్ళ బేకు. ఆదరె, పాప బరువదక్కె ప్రధాన కారణగళాగిరువ కణ్ణిగూ, కివిగూ, మూగిగూ, బాయిగూ, కైయిగూ, కాలుగళిగూ, సొంటక్కూ, అచ్య్ఞశిష్ట ఎంబ ఇక్కువవరొళు ఒందొందు మంత్ర గురుగళు హేళుత్తారల్ల? ఆగలూ ఒందొందంగదింద బంద పాపగళంను జేసునాథరు తంమ అవయవగళల్లి అనుభవిసిద విశేషవాద ఘాయుగళ నోడి సర్వేశ్వరను నినగె తాళువ హాగె, నీను బేడికొళ్ళ బేకు.

అవధీ అభ్యంగవంను కొడువాగలూ వ్యాధిష్టన మనెగె గురుగళు బంద మేలె అవంన నోడి హేళ తక్కద్దు:

అప్పా, (అంమా,) గురుస్వామియవరు చిత్తైసి బందరు. అవధీ అభ్యంగదింద బరువ ప్రయోజనగళ హేళిదెనల్ల? అవుగళ నెనదు కొండు, మహా విశ్వాస భక్తియొడనె ఈ దేవ ద్రవ్య అనుమానవంను తెక్కో. అచ్య్ఞశిష్ట ఎంబ గురుగళిక్కువాగ, నాను హేళువ వచనగళంను నింన మనస్సినల్లి కూడ హేళు.

కంణుగళ లేపనక్కె హేళువదు.

నంన జేసునాథరే, కంణుగళల్లి నీవు పాడు

ಪಟ್ಟದ್ದಂನೂ ನಿಂಮ ದಯವಂನೂ ನೋಡಿ, ನಾನು ಕಣ್ಣಿನಿಂದ ಮಾಡಿದ ಪಾಪಗಳೆಲ್ಲಾ ನನಗೆ ತಾಳಿ ಕೊಳ್ಳಿ, ಸ್ವಾಮಿ.

ಕಿವಿಗಳ ಲೇಪನಕ್ಕೆ.

ನಂನ ಜೇಸುನಾಥರೇ, ಕಿವಿಗಳಲ್ಲಿ ನೀವು ಪಾಡು ಪಟ್ಟದ್ದಂನೂ ನಿಮ್ಮ ದಯವಂನೂ ನೋಡಿ, ನಾನು ಕಿವಿಯಿಂದ ಮಾಡಿದ ಪಾಪಗಳೆಲ್ಲಾ ನನಗೆ ತಾಳಿ ಕೊಳ್ಳಿ, ಸ್ವಾಮಿ.

ಮೂಗಿನ ಲೇಪನಕ್ಕೆ.

ನಂನ ಜೇಸುನಾಥರೇ, ಮೂಗಿನಲ್ಲಿ ನೀವು ಪಾಡು ಪಟ್ಟದ್ದಂನೂ ನಿಂಮ ದಯವಂನೂ ನೋಡಿ, ನಾನು ಮೂಗಿನಿಂದ ಮಾಡಿದ ಪಾಪಗಳೆಲ್ಲಾ ನನಗೆ ತಾಳಿ ಕೊಳ್ಳಿ, ಸ್ವಾಮಿ.

ಬಾಯ್ಯ ಲೇಪನಕ್ಕೆ.

ನಂನ ಜೇಸುನಾಥರೇ, ವದನದಲ್ಲಿ ನೀವು ಪಾಡು ಪಟ್ಟದ್ದಂನೂ ನಿಮ್ಮ ದಯವಂನೂ ನೋಡಿ, ನಾನು ಬಾಯಿಂದ ಮಾಡಿದ ಪಾಪಗಳೆಲ್ಲಾ ನನಗೆ ತಾಳಿ ಕೊಳ್ಳಿ, ಸ್ವಾಮಿ.

ಸೊಂಟ ಲೇಪನಕ್ಕೆ.

ನಂನ ಜೇಸುನಾಥರೇ, ನೀವು ಎಲ್ಲಾ ಶರೀರದಲ್ಲಿ ಪಾಡು ಪಟ್ಟದ್ದಂನೂ ನಿಮ್ಮ ದಯವಂನೂ ನೋಡಿ, ನಾನು ಎಲ್ಲಾ ಶರೀರದಲ್ಲಿ ಮಾಡಿದ ಪಾಪಗಳೆಲ್ಲಾ ನನಗೆ ತಾಳಿ ಕೊಳ್ಳಿ, ಸ್ವಾಮಿ.

(ಕೆಂಂಗಸರಿಗೆ ಸೊಂಟ ಲೇಪನ ಮಾಡಲ್ಪಡುವದಿಲ್ಲ.)

ಆ ಮೇಲೆ ಕೇಳತಕ್ಕದ್ದು:

ಅಪ್ಪಾ, (ಅಂಮಾ,) ನಿಂನ ದಿವ್ಯ ರಕ್ಷಕರು ನಿಂನ

ಮೇಲೆ ಇರಿಸಿದ ದಯವಂನು ನೋಡು; ನಿಂನ ಅವಸಾನ ಕಾಲದಲ್ಲಿ ನಿನಗೆ ಕರುಣಿಸಿದ ಉಪಕಾರಗಳ ಒತ್ತಾಸೆಗಳಂನು ಎಣಿಸಿಕೋ; ಪಾಪಸಂಕೀರ್ತನದಿಂದ ಪಾಪ ಪರಿಹಾರ ವಾಯಿತು. ದೇವ ಪ್ರಸಾದದಿಂದ ದಾರಿಗೆ ಆತ್ಮಕ್ಕೆ ಆಧಾರ ವಾಯಿತು. ಅವಧೀ ಅಭ್ಯಂಗದಿಂದ ಅಧಿಕ ಪವಿತ್ರತ ನವೂ ಧೈರ್ಯ ತ್ರಾಣವೂ ಆಯಿತು. ಎಷ್ಟು ಮಂದಿಗಳಿಗೆ ಇಷ್ಟು ಒತ್ತಾಸೆ ಸಿಕ್ಕುವದಿಲ್ಲಾ! ಇಷ್ಟು ದಯಾ ಕರ್ತರು ನಿನಗೆ ಮಾಡಿದ ಮೇಲೆ ಇಂನೂ ಮೋಕ್ಷವಂನು ಪ್ರಸಾದಿ ಸುವರೆಂದು ನಂಬಬರುದು; ಭಯ ಪಡಬೇಡ, ಧೈರ್ಯ ವಾಗಿರು, ಮೋಕ್ಷ ಹತ್ತಿರವಾಯಿತು.

ಗುರು ಸ್ವಾಮಿಯವರು ಇಲ್ಲದ ಊರುಗಳಲ್ಲಿ ವ್ಯಾಧಿ ಷ್ಠರಿಗೆ ಮಾಡಿಸ ತಕ್ಕ ಆಯಿತ್ತವು.

ಮೊದಲು ಮೊದಲೇ ಉತ್ತಮ ಮನಸ್ತಾಪವಂನು ಪ್ರೇರೇ ಪಿಸ ಬೇಕು. ವ್ಯಾಧಿಷ್ಟನಿಗೆ ಹೇಳ ತಕ್ಕ ವಚನಗಳು:

ಅಪ್ಪಾ, (ಅಮ್ಮಾ,) ಈ ಸಮಯದಲ್ಲಿ ಪಾಪಸಂಕೀರ್ತ ನವ ಮಾಡುವದಕ್ಕೆ ಅವಕಾಶವಿಲ್ಲ, ಕಂಡ ಕಾರ್ಯವೇ. ಅವಕಾ ಶವಿದ್ದರೆ, ಮಾಡಲಾಸೆಯಾಗಿದ್ದೀ ಅಲ್ಲವೇ? ಆದರೆ ಅಪ ನಂಬಿಕೆ ಪಡ ಬೇಡ; ಯಾಕಂದರೆ ಎಲ್ಲರಂನು ರಕ್ಷಿಸುವ ದಕ್ಕೆ ಜೇಸುನಾಥರು ಮನುಷ್ಯನಾಗಿ ಹುಟ್ಟಿ, ಶಿಲ್ವೆಯ ಮೇಲೆ ಪ್ರಾಣವಂ ಕೊಟ್ಟರು. ಯಾರಾದರೂ ನರಕದಲ್ಲಿ

ಬಿದ್ದರೆ, ತಾನು ಮಾಡಿದ ಪಾಪಗಳ ಬಿಡದೆ ಅವುಗಳ ಮೇಲೆ ನಿಜವಾದ ದುಃಖ ಮನಸ್ತಾಪ ಪಡದೆ ಇದ್ದದ್ದರಿಂದ ಕೊರ್ತಾಗಿ, ಸ್ವಾಮಿಯಿಂದ ಒಂದು ಕೇಡೂ ಒಂದು ನಷ್ಟವೂ ಬರುವದಿಲ್ಲ. ಇಂಥಾ ಸ್ವಾಮಿಗೆ ನೀನು ಲೆಖ್ಖವಿಲ್ಲದ ದ್ರೋಹಗಳಂನು ಮಾಡಿದ ಕಾರಣ ಮನಸ್ತಾಪವಾಗಿದ್ಧೀಯೋ? ಉತ್ತಮ ಮನಸ್ತಾಪವು ನಿಂನಲ್ಲಿ ಇದ್ದರೆ, ಪಾಪಸಂಕೀರ್ತನವ ಮಾಡುವದಕ್ಕೆ ಅವಕಾಶವಿಲ್ಲದೆ ಇದ್ದರೂ, ದಯಾಪರರಾದ ಕರ್ತರು ನಿಂನ ಪಾಪಗಳ ತಾಳಿ ಕೊಂಬುವರು. ತಾಳಿ ಕೊಳ್ಳುವ ಹಾಗೆ ನಿನ್ನಿಂದ ದ್ರೋಹಂ ಪಟ್ಟ ಪಿತನಂನೂ ಸುತನಂನೂ ಸ್ಪಿರಿತು ಸಾಂಕ್ತುವಂನೂ ಕುರಿತು ನಂನೊಂದಿಗೆ ಉತ್ತಮ ಮನಸ್ತಾಪದ ಮಂತ್ರವಂನು ಮೂರು ಸಾರಿ ಬೇಡಿಕೋ. ಸರ್ವೇಶ್ವರಾ ಸಾಮೀ.....

(೫೧ ನೇ ಪಕ್ರ.)

ಆ ಮೇಲೆ :

ಸ್ವಾಮಿ, ನನಗಾಗಿ ಇಷ್ಟು ಪಾಡು ಪಟ್ಟಿರಿ. ನಾನು ಇಂಥ ಉಪಕಾರವಂನು ನೋಡದೆ ಲೆಖ್ಖವಿಲ್ಲದ ಪಾಪಗಳ ಮಾಡಿ, ಅಷ್ಟು ಸಾರಿ ಕೆಂನೆಯ ಮೇಲೆ ಬಡಿದ ಹಾಗಾಯಿತು. ಮಹಾ ಪಾಪಿಯಾಗಿದ್ಧೇನೆ, ಸ್ವಾಮಿ. ಆದಾಗ್ಯೂ ನನಗೆ ಮೋಕ್ಷವ ಕೊಡ ಸಿದ್ಧವಾಗಿದ್ಧೀರಿ; ನಿಮಗೆ ಸ್ತೋತ್ರವಾಗಲಿ, ಸ್ವಾಮಿ. ನಂನಲ್ಲಿ ಏನು ಪುಣ್ಯವದೆ? ನಂನ ಮೇಲೆ ಇಷ್ಟು ದಯವಾಗಿರುವದಕ್ಕೆ ಕಾರಣವೇನು? ನಾನು ನರಕದ ಪಾತಾಳದಲ್ಲಿ ಬೀಳುವದು ನ್ಯಾಯವೇ ಸರಿ. ಅದರೆ ನಂನ

ಪಾಪಗಳ ನೋಡದೆ, ನಿಂಮ ದಯವಂನು ಮಾತ್ರ ನೋಡಿ ಕೊಳ್ಳಿ, ಸ್ವಾಮೀ. ನಂನಂನು ನರಕದಲ್ಲಿ ಹಾಕಿ ಬಿಟ್ಟರೂ, ಮೋಕ್ಷವ ಕೊಡದೆ ಹೋದರೂ ನನಗೆ ಅದು ಮನಸ್ತಾಪವೂ ದುಃಖವೂ ಅಲ್ಲ. ನಿಮಗೆ ದ್ರೋಹಂಗಳಂನು ಮಾಡಿದ್ದರಿಂದ ಮಾತ್ರವೇ ಬಹು ದುಃಖವಾಗಿದ್ದೇನೆ; ಕೇವಲ ಮನಸ್ತಾಪವಾಗಿದ್ದೇನೆ, ಸ್ವಾಮೀ. ಇಂನು ಮೇಲೆ ನಾನು ಬದುಕಿದರೆ, ನಿಮಗೆ ದ್ರೋಹ ಮಾಡುವದಿಲ್ಲವೆಂದೂ ಒಳ್ಳೇ ಪಾಪಸಂಕೀರ್ತನವಂನು ಮಾಡುವೆನೆಂದೂ ಘಟ್ಟಿ ಪ್ರತಿಜ್ಞೇ ಮಾಡುತ್ತೇನೆ, ಸ್ವಾಮೀ.

ಈ ವಚನಗಳಂನು ವ್ಯಾಧಿಷ್ಠನಿಗೆ ಹುತ್ತು ಹುತ್ತಾಗಿ ಹೇಳುವದು ಒಳ್ಳೇದು.

ದೇವ ಪ್ರಸಾದವಂನು ತೆಗದು ಕೊಳ್ಳುವದಕ್ಕೆ ಅವಕಾಶವಿಲ್ಲದಿದ್ದರೆ, ವ್ಯಾಧಿಕಾರನಿಗೆ ಆಸೆಯಂನಾದರೂ ಹುಟ್ಟಿಸುವ ಹಾಗೆ ಕೆಲವು ಬುದ್ಧಿ ಮತಿಗಳ ಹೇಳ ಬೇಕು. ಯಾಕಂದರೆ, ಉತ್ತಮ ಮನಸ್ತಾಪ ಮಾಡಿ ಕೊಂಡ ವ್ಯಾಧಿಕಾರನು ಇಂಥ ಅಪೇಕ್ಷೆ ಪಟ್ಟರೆ, ದೇವ ಪ್ರಸಾದವಂನು ತೆಗೆದು ಕೊಂಡದ್ದಕ್ಕೆ ಸರಿಯಾದ ಫಲವ ಗ್ರಹಿಸ ಬಹುದು. ಇದರ ನಿಮಿತ್ತ ಅವಂನ ನೋಡಿ ಹೇಳ ತಕ್ಕದ್ದು:

ಅಪ್ಪಾ, (ಅಂಮಾ,) ಈ ಸಮಯದಲ್ಲಿ ದೇವ ಪ್ರಸಾದವ ತೆಗದು ಕೊಳ್ಳುವದಕ್ಕೆ ಅವಕಾಶವಿಲ್ಲವಲ್ಲಾ. ತಕ್ಕೊಂಡರೆ, ಈ ಆಪತ್ತು ಕಾಲದಲ್ಲಿ ನಿನಗೆ ಮಹಾ ಪ್ರಯೋಜಕವಾಗಿರು

ವದು. ಅವಕಾಶವಾದರೆ ಅದಂನು ಒಳ್ಳೇ ಮನಸ್ಸಿನಿಂದ ತೆಗದುಕೊಂಬುವಿರೋ? ಅದರ ಮೇಲೆ ನಿನಗೀಗಲೇ ಬಹು ಆಸೆಯುಂಟೋ? ಆಸೆ ಉಂಟಾದರೆ ಸಂತೋಷವಾಗಿರು, ಯಾಕಂದರೆ ದೇವ ಪ್ರಸಾದದಿಂದ ಬರುವ ಫಲವೆಲ್ಲಾ ಇಂಥ ಅಪೇಕ್ಷೆಯಿಂದಲೂ ಪಡೆದ ಹಾಗಾಗುತ್ತದೆ: ಅದು ಕರ್ತರ ಸಂನಿಧಿಯಲ್ಲಿ ಮಹಾ ಪ್ರಿಯವಾಗಿರುವದು. (ಸಮಯವಿದ್ದರೆ ಸತ್ ಪ್ರಸಾದಕ್ಕೆ ಆಯಿತ್ತವಾದ ಮಂತ್ರಗಳಂನು ಓದ ಬಹುದು. ೨೫೩ ನೇ ಪಕ್ಕ.)

ಅವಧೀ ಅಭ್ಯಂಗವಂನು ತೆಗದು ಕೊಂಬುವದಕ್ಕೆ ಅವಕಾಶವಿಲ್ಲದಾಗ ವ್ಯಾಧಿಕಾರನಿಗೆ ಹೇಳ ತಕ್ಕದ್ದು.

ಅಪ್ಪಾ, (ಅಂಮ್ಮಾ,) ಅವಧೀ ಅಭ್ಯಂಗವ ತೆಗದು ಕೊಳ್ಳುವದಕ್ಕೆ ಅವಕಾಶವಿಲ್ಲವಲ್ಲಾ; ಅದರ ಚಿಂತೆ ಪಡಬೇಡ. ಆದಾಗ್ಯೂ ಅದರಿಂದ ಬರುವ ಫಲಗಳ ಜ್ಞಾಪಕ ಮಾಡಿಕೋ. ಯಾವದಂದರೆ ಪಂಚೇಂದ್ರಿಯಗಳಿಂದ ಮಾಡಿದ ಪಾಪಗಳು ಪರಿಹಾರವಾಗುವದಲ್ಲದೆ, ಆಪತ್ತಿನಲ್ಲಿ ಆತ್ಮಕ್ಕೆ ಬಲವೂ ಉಪಶಮನವೂ ಅವಧೀ ಅಭ್ಯಂಗದ ಮುಖಾಂತರದಿಂದ ಬರುವವು. ಆದರೆ ಈ ಸಮಯದಲ್ಲಿ ಕೂಡಿದಷ್ಟು ಇಂಥ ಫಲಗಳಂನು ಗ್ರಹಿಸುವದಕ್ಕೆ ಬಹು ವಿಶ್ವಾಸ ನಂಬಿಕೆ ಭಕ್ತಿಯೊಂದಿಗೆ ನಂನೊಡನೆ ಮನಸ್ಸಿನಲ್ಲಿಯಾದರೂ ಹೇಳು.

ನಂನ ಜೇಸುನಾಥರೇ, ನಿಂಮ ಕಂಣುಗಳಲ್ಲಿ ಪಾಡು

ಪಟ್ಟದ್ದಂನೂ ನಿಂಮ ದಯವಂನೂ ನೋಡಿ... (ಹೀಗೆ ಮೇಲೆ ಹೇಳಿ ಇರುವ ಪರ್ಗ ೪೦೭.)

ಜೀವಸಂಕಟ ಸಮೀಪಿಸುತ್ತದೆಯೆಂದು ಕಾಣುವಾಗ, ವ್ಯಾಧಿಷ್ಟನಂನು ಸಂತವಿಸುವರಾಗೂ, ಆಯಾಸ ಮೊಕೆ ಪಡುವವರಿಂದಲೂ ಪಿಶಾಚೀ ತಂತ್ರ ಶೋಧನೆಗಳಿಂದಲೂ ತಪ್ಪು ಮಾಡದವರಾಗೂ, ಉಪದೇಶಿಯಾದರೂ ಬೇರೆ ಧರ್ಮ ಕ್ರೀಸ್ತುವನಾದರೂ ಅವನ ಬಳಿಗೆ ಬಂದು ಈ ಪ್ರಕಾರ ಹೇಳ ಬಹುದು.

ಅಪ್ಪಾ, (ಅಂಮಾ,) ಇದೇನು? ನಿನಗೆ ಬಂದ ಕಷ್ಟ ವ್ಯಾಧಿಯು ಪರಿಹಾರವಾಗುವದಿಲ್ಲವೇ? ಸ್ವಾಮಿ ಚಿತ್ತಾ. ಈ ಭೂಲೋಕದ ಫಲ ಹುಟ್ಟುವದೂ ಸತ್ತು ಹೋಗುವದೂ ಹೊರ್ತಾಗಿ, ಮತ್ತೊಂದಿಲ್ಲ. ಹೀಗಿರುವದರಿಂದ ಒಳ್ಳೇ ಮರಣ ಸಿಕ್ಕುವಹಾಗೆ, ಘಟ್ಟಿಮನಸ್ಸಾಗಿಯೂ ಭಕ್ತಿಯಾಗಿಯೂ ಸ್ವಾಮಿಯುಂನು ಬೇಡಿಕೊಳ್ಳಬೇಕು. ಇಂಥಾ ಸಮಯದಲ್ಲಿ ಸ್ವಾಮಿಯ ಮೇಲೆ ದೇವ ವಿಶ್ವಾಸ, ದೇವ ನಂಬಿಕೆ, ದೇವ ಭಕ್ತಿ ಮನಸ್ಸಿನಲ್ಲಿ ಹೆಚ್ಚುಹೆಚ್ಚಾಗಿ ಭದ್ರ ಮಾಡಬೇಕು. ಹಾಗಾದರೆ ನಂನೊಂದಿಗೆ ಮೆಲ್ಲಮೆಲ್ಲಗೆ ಹೃದಯದಲ್ಲಿ ಹೇಳು:

ಸ್ವಾಮಿ, ನಿಂಮ ಸತ್ಯ ವೇದದಲ್ಲಿ ಹೊರ್ತಾಗಿ, ಬೇರೆ ಮತಾಚಾರದಲ್ಲಿ ಮೋಕ್ಷ ಸಿಕ್ಕುವದಿಲ್ಲವೆಂದು ವಿಶ್ವಾಸಿಸುತ್ತಿದ್ದೇನೆ. ಪರಲೋಕವಂನೂ ಭೂಲೋಕವಂನೂ

ಉಂಟುಮಾಡಿದವರು ನೀವೇ, ದೇವ ಸ್ವಭಾವದಲ್ಲಿ ಒಬ್ಬರಾಗಿದ್ದು, ಮಂದಿತ್ವದಲ್ಲಿ ಪಿತನು ಸುತನು ಸ್ಪೀರಿತುಸಾಂಕ್ತುವೆಂಬ ಮೂರು ಮಂದಿಗಳು ಇದ್ದೀರಿಯೆಂದು ವಿಶ್ವಾಸಿಸುತ್ತಿದ್ದೇನೆ. ಈ ಮೂರು ಮಂದಿಗಳೊಳಗೆ, ಸುತನಾದ ಸರ್ವೇಶ್ವರನು ನಮ್ಮ ಪಾಪಕ್ಕಾಗಿ ಮನುಷ್ಯಾವತಾರವಂನು ಮಾಡಿ ಶಿಲ್ವೆಯಲ್ಲಿ ಪ್ರಾಣವಂನು ಕೊಟ್ಟರೆಂದು ವಿಶ್ವಾಸಿಸುತ್ತಿದ್ದೇನೆ.

ವ್ಯಾಧಿಕಾರನಿಗೆ ಪಾಡುಪಟ್ಟ ಸ್ವರೂಪವಂನು
ತೋರಿಸಿ ಹೇಳತಕ್ಕದ್ದು:

ಅಪ್ಪಾ, (ಅಮ್ಮಾ,) ಇಂಥಾ ಸ್ವಾಮಿಯ ಸ್ವರೂಪವೂ ಶಿಲ್ವೆಯೂ ಇಲ್ಲಿ ಇವೇ; ಅವರ ಪಾದಕ್ಕೆ ನಮಸ್ಕರಿಸಿ, ಮುದ್ದಂನಿಕ್ಕಿ, ನಾನು ಹೇಳುವ ವಚನಗಳ ಕೇಳು.

ನಂನ ಜೇಸುವೇ, ನಂನ ದಿವ್ಯ ಗುರುವಾದವರೇ, ನಿಮ್ಮ ದಿವ್ಯ ಪಾದಗಳ ತಬ್ಬಿಕೊಂಡು ಮುದ್ದಂನಿಕ್ಕುತ್ತೇನೆ. ಇಂಥಾ ಪಾದಗಳಮೇಲೆ ಅತ್ತುಕೊಂಡು ನಾನು ಮಾಡಿದ ಪಾಪಕ್ಕಾಗಿ ಮನಸ್ತಾಪ ಪಟ್ಟು, ನಂಬಿಕೆಯಾಗಿಯೂ ಭಕ್ತಿಯಾಗಿಯೂ ಆಶೀರ್ವಾದವಂನು ಕೇಳಿ ಕೊಳ್ಳುತ್ತೇನೆ. ಕಷ್ಟ ನಷ್ಟ ಉಪದ್ರಗಳಂನು ನಂನಂನು ಪಡಿಸಿ, ನಂನ ಮನಸ್ಸು ನೋಯಿಸಿದ ನೆಂಟರು ಪರರು ಯಾರಾದರೂ ಉಂಟೋ? ಎಲ್ಲರಿಗೂ ಒಳ್ಳೇ ಮನಸ್ಸಾಗಿ ತಾಳಿಕೊಳ್ಳುತ್ತೇನೆ. ನಾನೂ ಯಾರಿಗಾದರೂ ನಷ್ಟ ಅನ್ಯಾಯ ಪಡಿಸಿ ತಿಳಿದು ತಿಳಿಯದೆ ಮನಸ್ಸು ನೋಯಿಸಿ ಇದ್ದರೆ, ಸ್ವಾಮಿಯ ಮುಖ ನೋಡಿ,

ಅವರೂ ನನಗೆ ತಾಳಿ ಕೊಳ್ಳಲಿ. ಓ ಅತ್ಯಂತ ಕೃಪೆಯುಳ್ಳ ಸರ್ವೇಶ್ವರಾ, ಅವರಿಗೂ ನನಗೂ ದಯಾ ಮಾಡಿ. ಸರ್ವೇಶ್ವರಾ, ನಂನ ಜೀವಕ್ಕೆ ದೇವರವರೇ ಹೊರ್ತಾಗಿ, ಯಾರು ಬೇರೆ ಕರ್ತರು ಇಲ್ಲ. ನಂನ ಜೀವವಂನು ತಡೆದೀರೋ, ನಿಮ್ಮ ಚಿತ್ತ; ಇಂದು ತಾನೇ ತೆಗೆದೀರೋ, ನಿಂಮ ಚಿತ್ತ. ಇಗೋ, ಸರ್ವೇಶ್ವರಾ, ನಿಂಮ ದಾಸ ನಿಮ್ಮ ಗುಲಾಮು ನಾನು, ಬದುಕಿದರೂ, ಸತ್ತರೂ, ಎಂದೆಂದಿಗೂ ದೇವರವರ ಮೇಲೆ ಭರ್ತನಾಗಿರುವಹಾಗೆ ಪಾಲಿಸಿರಿ, ಸ್ವಾಮಿ. ನಂನ ಜೀವವಿರುವ ತನಕ, ಆತ್ಮ ಶರೀರದಲ್ಲಿ ನಾನು ಅನುಭವಿಸುವ ಕಸ್ತಿ ನೋವು ತಾಪತ್ರಯವೆಲ್ಲಾ ನಂನ ಜೇಸುನಾಥರು ಪಾಡು ಪಟ್ಟ ಕಸ್ತಿ ನೋವುಗಳ ಕೂಡ ದೇವರವರ ಪಾದದಲ್ಲಿ ಒಪ್ಪಿಸುತ್ತೇನೆ. ಅವುಗಳಿಂದ ನನಗೆ ಪುಣ್ಯ ಉಂಟಾಗುವ ಹಾಗೆ, ಎಲ್ಲಾ ಕಸ್ತಿಗಳಂನು ತಾಳ್ಮೆಯಾಗಿ ಅನುಭವಿಸುವದಕ್ಕೆ ನನಗೆ ಸಹಾಯ ಅನುಗ್ರಹಿಸಿರಿ, ಸ್ವಾಮಿ.

ಮತ್ತೂ ಕಷ್ಟವಂನೂ ಪಾಪವಂನೂ ಮಾತ್ರ ಬೆಳೆಯುವ ಈ ಭೂಮಿಯ ಮೇಲೆ ಬದುಕುವದಕ್ಕೆ ನನಗೆ ಮನಸ್ಸು ಇಲ್ಲವೇ ಇಲ್ಲ. ಸರ್ವೇಶ್ವರಾ, ದೇವರವರ ದರ್ಶನವಂನು ಮೋಕ್ಷದಲ್ಲಿ ಮಾಡುವದಕ್ಕೆ ಒಂದೇ ಆಸೆ ಹೊರ್ತಾಗಿ, ನನಗೆ ಬೇರೆ ಆಸೆಯು ಇಲ್ಲ. ನಂನ ಜೇಸುನಾಥರೇ, ದೇವರವರ ಆತ್ಮ ಶರೀರವಂ ಬಿಟ್ಟು ಅಗಲಿದ ಸಮಯದಲ್ಲಿ ತಾವು ಪಟ್ಟಂಥಾ ಸಂಕಟಗಳಂನು ನೋಡಿ, ಈ ತರುಣದಲ್ಲಿ

ಅಗಲಿ ಹೋಗುವ ನಂನ ಆತ್ಮವೂ ಕಡೇ ಶೇರುವ ಹಾಗೆ ಪಾಲಿಸಿರಿ, ಸ್ವಾಮೀ.

ದೇವರ ತಾಯಾದವಳೇ, ಪಾಪಿಗಳಿಗೆ ಶರಣಾಗತಿಯಾದ ತಾಯೇ, ನನಗೆ ಕಾವಲಾದ ದೇವ ದೂತನೇ, ನಂನ ಪರಿಪಾಲಕರಾದ ಅರ್ಚ್ಯಶಿಷ್ಟವರುಗಳಿರಾ, ಯಾವಾಗಲೂ ನಿಂಮಂನು ನಂಬಿದವನಾದ ನಾನು ಈಗಲೂ ನಿಂಮಂನು ನಂಬಿಕೊಂಡಿದ್ದೇನೆ. ಇಂದಿನ ವರಿಗೆ ನಿಂಮ ಬೇಡುದಲೆಗಳಿಂದ ಅನೇಕ ಉಪಕಾರಗಳ ಸರ್ವೇಶ್ವರನು ನನಗೆ ಪಾಲಿಸಿದ ಹಾಗಾಯಿತು. ಅದಕ್ಕಾಗಿ ನಿಮ್ಮೊಡನೆ ಮೋಕ್ಷ ರಾಜ್ಯದಲ್ಲಿ ಸರ್ವೇಶ್ವರನ ಎಂದೆಂದಿಗೂ ಸ್ತೋತ್ರ ಮಾಡುವೆನೆಂದು ಮಹಾ ತಾತ್ಪರ್ಯವಾಗಿದ್ದೇನೆ. ನಂನ ಆಸೆ ಸಿದ್ಧಿಸುವ ಹಾಗೆ, ನಿಂಮ ಬೇಡುದಲೆಯಿಂದ ಸರ್ವೇಶ್ವರನ ಅನುಗ್ರಹವ ಪಡೆದು, ಒಳ್ಳೇ ಮರಣವಂನು ಹೊಂದ ಬೇಕು. ಅರ್ಚ್ಯಶಿಷ್ಟ ತಾಯೇ, ನನಗೆ ಪ್ರಸಂನರಾಗಿರಿ; ನಂನ ಕಾವಲಾದವರೇ, ನಂನಂನು ಕಾದು ಕೊಳ್ಳಿ.

ಪ್ರಾಣ ಸಂಕಟ ತೊಡಗುವಾಗ ಮನೇ ಜನರೆಲ್ಲರು ಮೊಣಕಾಲಿನಲ್ಲಿ ಇದ್ದು ಹೇಳ ತಕ್ಕ ಪ್ರಾರ್ಥನೆ.

ಸ್ವಾಮೀ, ಕೃಪೆಯಂನು ಮಾಡಿ;

ಕ್ರೀಸ್ತುವೇ, ಕೃಪೆಯುಂನು ಮಾಡಿ;
ಸ್ವಾಮಿ, ಕೃಪೆಯುಂನು ಮಾಡಿ;
ಅಚ್ಯರ್ಶಿಷ್ಟ ಮರಿಯೇ,
ಅಚ್ಯರ್. ದೂತರಾ ಅತಿ ಸಂಮನಸ್ಸುಗಳಾ
ಆಗಿರುವ ಸರಕಲ ಸಂಮನಸ್ಸುಗಳಿರಾ,
ಅಚ್ಯರ್. ಅಬೇಲೇ,
ನೀತಿವಂತರ ಸಮೂಹರುವೆಲ್ಲಾ,
ಅಚ್ಯರ್. ಅಬ್ರಹಮೇ,
ಸ್ನಾಪಕರಾದ ಅರ್ಚ್ಯ. ಜೊವಾನಿಯೆಂಬವರೇ,
ಅಚ್ಯರ್. ಜೋಸೇಫರೇ,
ಪಿತೃಗಳಾ ದೀರ್ಘದರ್ಶಿಗಳಾ ಆದಂಥಾ
ಸರಕಲ ಅಚ್ಯರ್ಶಿಷ್ಟವರುಗಳಿರಾ,
ಅಚ್ಯರ್. ಪೇದ್ರುವೆಂಬವರೇ,
ಅಚ್ಯರ್. ಪೌಲುವೆಂಬವರೇ,
ಅಚ್ಯರ್. ಅಂದ್ರೇಯಾಸೆಂಬವರೇ,
ಅಚ್ಯರ್. ಜೊವಾನಿಯೆಂಬವರೇ,
ಅಪೋಸ್ತಲರಾ ಸುವಿಶೇಷಕರಾ ಆದಂಥಾ
ಸರಕಲ ಅಚ್ಯರ್ಶಿಷ್ಟವರುಗಳಿರಾ,
ಸ್ವಾಮಿಯ ಸಮಸ್ತ ಅರ್ಚ್ಯಶಿಷ್ಟ ಶಿಷ್ಯರುಗಳಿರಾ,
ಕಳಂಕವಿಲ್ಲದ ಸರಕಲ ಶಿಶುವುಗಳಿರಾ,
ಅಚ್ಯರ್. ಕಿರೀಟಪ್ಪನೆಂಬವರೇ,
ಅಚ್ಯರ್. ಲಾರೇಂಸಿಯುಸೆಂಬವರೇ,

ಬೇಡಿಕೊ (ಬೇಡಿಕೊಳ್ಳಿ) ...

ಸರಲ ಅರ್ಚ್ಯರ್. ವೇದಸಾಕ್ಷಿಗಳಿರಾ,
ಅರ್ಚ್ಯರ್. ಶಿಲೇಸ್ತ್ರಿಯೆಂಬವರೇ,
ಅರ್ಚ್ಯರ್. ಗ್ರೆಗೋರಿಯೆಂಬವರೇ,
ಅರ್ಚ್ಯರ್. ಆಗುಸ್ತೀನೆಂಬವರೇ,
ಸರಲ ಮೇತ್ರಾಣಿಯವರೂ ಸ್ತುತಿಯರೂ ಆದಂಥಾ ಅರ್ಚ್ಯರ್ಶಿಷ್ಟವರುಗಳಿರಾ,
ಅರ್ಚ್ಯರ್. ಜೆನೆದೀಕ್ತೆಂಬವರೇ,
ಅರ್ಚ್ಯರ್. ಫ್ರಾಂಸೀಸ್ಕೆಂಬವರೇ,
ಸರಲ ಸನ್ಯಾಸಿಗಳೂ ವನವಾಸಿಗಳೂ ಆದಂಥಾ ಅರ್ಚ್ಯರ್ಶಿಷ್ಟವರುಗಳಿರಾ,
ಅರ್ಚ್ಯರ್. ಮರಿಯ ಮಗ್ದಲೇನೆಂಬವಳೇ,
ಅರ್ಚ್ಯರ್. ಲೂಸಿಯವೆಂಬವಳೇ,
ಸರಲ ಕನ್ಯಾಸ್ತ್ರೀಯರುಗಳೂ ವಿಧವೆಗಳೂ ಆದಂಥಾ ಅರ್ಚ್ಯರ್ಶಿಷ್ಟವರುಗಳಿರಾ,
ಪುಣ್ಯಾತ್ಮರೂ ಪುಣ್ಯಾಸ್ತ್ರೀಯರುಗಳೂ ಆದಂಥಾ ಸಮಸ್ತ ಅರ್ಚ್ಯರ್ಶಿಷ್ಟವರುಗಳಿರಾ,

ಇವನಿಗಾಗಿ (ಇವಳಿಗಾಗಿ) ಬೇಡಿಕೊಳ್ಳಿ.

ದಯಾಪರರಾಗಿದ್ದು, — ಇವನ (ಇವಳ) ಪಾಪಗಳ ತಾಳಿಕೊಳ್ಳಿ, ಸ್ವಾಮಿ.

ದಯಾಪರರಾಗಿದ್ದು, — ಇವಂನ (ಇವಳಂನ) ರಕ್ಷಿಸಿಕೊಳ್ಳಿ, ಸ್ವಾಮಿ.

ದೇವರವರ ಕೋಪಕ್ಕೆ ಒಳಗಾಗದ ಹಾಗೆ, ಇವಂನ (ಇವಳಂನ) ರಕ್ಷಿಸಿ ಕೊಳ್ಳಿ.

ಮರಣದ ಮೋಸದಿಂದ,
ದುರ್ಮರಣಕ್ಕೆ ಒಳಗಾಗದಹಾಗೆ,
ನರಕದ ವೇಧನೆಗಳಿಗೆ ಒಳಗಾಗದ ಹಾಗೆ,
ಸಕಲ ಕೇಡುಗಳಿಗೆ ಒಳಗಾಗದಹಾಗೆ,
ಪಿಶಾಚಿಯ ಬಲೆಗೆ ಒಳಗಾಗದಹಾಗೆ,
ದೇವರವರು ಅವತಾರಿಸಿ ಜನಿಸಿದ್ದಂನು ನೋಡಿ,
ದೇವರವರ ಶಿಲ್ವೆಯಂನೂ ಪೀಡೆಯಂನೂ ನೋಡಿ,
ದೇವರವರ ಮರಣವಂನೂ ಸಮಾಧಿಯಲ್ಲಿ ಸ್ಥಾಪನೆಯಂನೂ ನೋಡಿ,
ದೇವರವರ ಮಹಿಮೆಯಾದ ಪುನರುತ್ಥಾನವಂನು ನೋಡಿ,
ದೇವರವರ ಆಶ್ಚರ್ಯವಾದ ಆರೋಹಣವಂನು ನೋಡಿ,
ಸಂತೈಸುವವರಾಗಿರುವ ಸ್ಪಿರಿತುಸಾಂತುವಿನ ಪ್ರಸಾದವಂನು ನೋಡಿ,
ನ್ಯಾಯ ನಿರ್ಣಯದ ದಿನದಲ್ಲಿ,

ಇವಂನ (ಇವಳಂನ) ರಕ್ಷಿಸಿಕೊಳ್ಳಿ.

ಪಾಪಿಗಳಾಗಿರುವ ನಾವು, — ದೇವರವರಂನು ಬೇಡಿಕೊಳ್ಳುತ್ತೇವೆ,
ಇವನ (ಇವಳ) ಪಾಪಗಳ ಕರುಣಿಸ ಬೇಕೆಂದು,— ದೇವರವರಂನು ಬೇಡಿಕೊಳ್ಳುತ್ತೇವೆ.
ಸ್ವಾಮೀ, ಕೃಪೆಯಂನು ಮಾಡಿ;

ಕ್ರೀಸ್ತುವೇ, ಕೃಪೆಯುಂನು ಮಾಡಿ;
ಸ್ವಾಮಿ, ಕೃಪೆಯುಂನು ಮಾಡಿ;
(೧ ಪರಲೋಕದ ಮಂತ್ರ.)

ಆ ಮೇಲೆ ಅಗಲಿ ಹೋಗುವದಕ್ಕೆ ಆತ್ಮ ಆಗಾಟ ಸಂಕಟ ಪಡುವವರೊಳು ಹೇಳತಕ್ಕದು:

ಕ್ರೀಸ್ತುವನಾಗಿದ್ದಂಥಾ ಆತ್ಮವೇ, ನಿಂನಂನುಂಟುಮಾಡಿದ ಸರ್ವವಲ್ಲಭರಾದ ಪಿತನಾದವರ ನಾಮದಲ್ಲಿಯೂ, ಜೀವಿಯಾದ ಸರ್ವೇಶ್ವರನ ಸುತನಾಗಿದ್ದು, ನಿನಗಾಗಿ ಪಾಡುಪಟ್ಟ ಜೇಸುಕ್ರೀಸ್ತುವಿನ ನಾಮದಲ್ಲಿಯೂ, ನಿಂನಲ್ಲಿ ಚಿತ್ತೈಸಿವ ಸ್ಪಿರಿತುಸಾಂಕ್ತುವಿನ ನಾಮದಲ್ಲಿಯೂ, ದೇವ ದೂತರುಗಳ ಪ್ರಧಾನ ದೂತರುಗಳ ನಾಮದಲ್ಲಿಯೂ, ಭದ್ರಾಸನರೂ ಕರ್ತೃತ್ವಗಳೂ ಎಂಬವರ ನಾಮದಲ್ಲಿಯೂ, ಪ್ರಭುಗಳೂ ಸತ್ವಗಳೂ ಬಲಗಳೂ ಎಂಬವರ ನಾಮದಲ್ಲಿಯೂ, ಜ್ಞಾನಾಧಿಕರೂ ಭಕ್ತೀ ಜ್ವಾಲಿಕರೂ ಎಂಬವರ ನಾಮದಲ್ಲಿಯೂ, ಒಂಭತ್ತು ವಿಲಾಸಗಳ ಮತ್ತುಂಟಾದ ಸಮ್ಮನಸ್ಸುಗಳ ನಾಮದಲ್ಲಿಯೂ, ಪಿತಾಪಿತೃಗಳ ದೀರ್ಘದರ್ಶಿಗಳ ನಾಮದಲ್ಲಿಯೂ, ಅಚ್ಯರ್ಕಶಿಷ್ಟ ಅಪೋಸ್ತಲರುಗಳ ಸುವಿಶೇಷಕರರ ನಾಮದಲ್ಲಿಯೂ, ಅಚ್ಯರ್ಕಶಿಷ್ಟ ತಪಸ್ವಿಗಳ ವನಸ್ತರುಗಳ ನಾಮದಲ್ಲಿಯೂ, ಪರಿಶುದ್ಧ ಕನ್ಯಾಸ್ತ್ರೀಯರುಗಳ ಸರ್ವೇಶ್ವರನ ಸಮಸ್ತ ಅಚ್ಯರ್ಕಶಿಷ್ಟವರುಗಳ ನಾಮದಲ್ಲಿಯೂ, ಈ ಭೂಲೋಕವಂನು ಬಿಟ್ಟು ಹೋಗ್ವಾರ

ಡುವಿಯಾಗಲಿ. ಇಂದು ಸಮಾಧಾನದಲ್ಲಿ ನಿನಗೆ ಠಾವು ತಿರು ಸಿಯೋನೆಂಬ ಮೋಕ್ಷದಲ್ಲಿ ನಿನಗೆ ಸ್ಥಿರವಾಸ ಉಂಟಾಗಲಿ. ನಂಮ ಆಳಿದವರಾಗಿರುವ ದಿವ್ಯ ಜೇಸುನಾಥರ ಮುಖಾಂತರವಾಗಿ ಆಗಲಿ.

ಇಂನು ಜೀವನಿಂತರೆ ಅವನ ಕಿವಿಯಲ್ಲಿ ಹೇಳುವದು:

ಜೇಸು, ಮರಿಯೇ, ಜೋಸೇಫ್, ನಂನಂನು ರಕ್ಷಿಸಿ ಕೊಳ್ಳಿ. ಜೇಸು, ಮರಿಯೇ, ಜೋಸೇಫ್, ನಿಮ್ಮಂನು ನಂಬಿ ಇದ್ಧೇನೆ. ಜೇಸು, ಮರಿಯೇ, ಜೋಸೇಫ್, ನಿಂಮ ಕೈಯ್ಯಲ್ಲಿ ನಂನ ಆತ್ಮವಂನು ಒಪ್ಪಿಸುತ್ತಿದ್ಧೇನೆ. ಅಚ್ಯರ್. ಮರಿಯೇ, ನನಗಾಗಿ ಈಗಲೂ ನಂನ ಮರಣದ ಸಮಯದಲ್ಲಿಯೂ ಬೇಡಿ ಕೊಳ್ಳಿ. ಕಾವಲಾದ ಸಮ್ಮನಸ್ಸಾದವರೇ, ಈ ಸಮಯದಲ್ಲಿ ನಂನಂನು ಕಾದು ಕೊಂಡಿರಿ. ಸ್ವಾಮಿ, ನಿಂಮಂನು ವಿಶ್ವಾಸಿಸುತ್ತೇನೆ; ಸ್ವಾಮಿ, ನಿಂಮಂನು ನಂಬಿ ಇದ್ಧೇನೆ; ಸ್ವಾಮಿ, ನಿಂಮ ಮೇಲೆ ಮಹಾ ಭಕ್ತಿಯಾಗಿದ್ಧೇನೆ. ನಂನ ಪಾಪಗಳ ತಾಳಿ ಕೊಳ್ಳಿ, ನಿಂಮ ಪಂಚ ಘಾಯಗಳ ನೋಡಿ ನಂನಂನು ರಕ್ಷಿಸಿ ಕೊಳ್ಳಿ.

ಈ ವಚನಗಳ ಮುಂತಾದ ಒಳ್ಳೇ ವಚನಗಳಂನು, ವ್ಯಾಧಿಕಾರನ ಮನಸ್ಸು ಕರಗಿ ಕುಂಗದ ಹಾಗೆ, ಆಗಿಂದಾಗ್ಗೆ ಮೆಲ್ಲಗೆ ಹೇಳುತ್ತಾ ಇರುವದು ಬಹು ಪ್ರಯೋಜನವಾಗಿ ಇರುತ್ತದೆ.

ಆತ್ಮ ಶರೀರವಂನಗಲಿ ಬಿಟ್ಟು ಹೋದ ಕ್ಷಣವೇ
ಹೇಳ ತಕ್ಕದ್ದು:

ಸರ್ವೇಶ್ವರನ ಅರ್ಚ್ಯಶಿಷ್ಟವರುಗಳಿರಾ, ಇವನಿಗೆ (ಇವಳಿಗೆ) ಸಹಾಯವಾಗಿ ಬಂನಿ. ಇವನ (ಇವಳ) ಆತ್ಮವಂನು ಕೈಗೊಂಡು, ಮಹಾ ಉಂನತವಾದವರ ಸಂನಿಧಿಯಲ್ಲಿ ಒಪ್ಪಿಸಿರಿ. ಕರ್ತರ ದೂತರುಗಳಿರಾ, ಎದುರಾಗಿ ಬಂನಿ.

ನಿಂನಂನು ಕರೆದಂಥಾ ಜೇಸು ಕ್ರೀಸ್ತುನಾಥರು ನಿಂನಂನು ಅಂಗೀಕರಿಸಲಿ; ಅಬ್ರಹಾಮೆಂಬವರ ಮಡಲಿನಲ್ಲಿ ಸಂಮನಸ್ಸುಗಳು ನಿಂನಂನು ಕರೆಕೊಂಡು ಹೋಗುವದಾಗಲಿ! ಸರ್ವೇಶ್ವರಾ, ನಿತ್ಯ ವಿಶ್ರಮವಂನು ಇವನಿಗೆ (ಇವಳಿಗೆ) ಪಾಲಿಸ ಕರುಣಿಸಿರಿ; ನಿತ್ಯ ಪ್ರಕಾಶವು ಇವನಿಗೆ (ಇವಳಿಗೆ) ಪ್ರಕಾಶಿಸಲಿ!

ಸ್ವಾಮೀ, ಕೃಪೆಯಂನು ಮಾಡಿ;
ಕ್ರೀಸ್ತುವೇ, ಕೃಪೆಯಂನು ಮಾಡಿ;
ಸ್ವಾಮೀ, ಕೃಪೆಯಂನು ಮಾಡಿ. (೧ ಪರಲೋಕದ.)

(ಉಪದೇಶಿ.) ನಮಂನು ಶೋಧನೆಯಲ್ಲಿ ಬೀಳಲೀಸದೆ,

(ಜನರು.) ಕೇಡಿನೊಳಗಿಂದ ನಮಂನು ರಕ್ಷಿಸಿಕೊಳ್ಳಿ.

(ಉ.) ಕರ್ತರೇ, ಇವನಿಗೆ (ಇವಳಿಗೆ) ನಿತ್ಯ ವಿಶ್ರಮವಂನು ಪಾಲಿಸ ಕರುಣಿಸಿರಿ;

(ಜ.) ನಿತ್ಯ ಪ್ರಕಾಶವು ಇವನಿಗೆ (ಇವಳಿಗೆ) ಪ್ರಕಾಶಿಸಲಿ.

(ಉ.) ನರಕದ ಬಾಗಲಿನಿಂದ,

(జ.) ఇవన (ఇవళ) ఆత్మవంను రక్షిసి కొళ్ళి, స్వామీ.

(ఉ.) సమాధానదల్లి ఇవను (ఇవళు) విశ్రమిసువదాగలి.

(జ.) ఆమేన్ జేసు.

(ఉ.) కర్తరే, నమ్మ ప్రార్థనెయంను ఆలైసిరి;

(జ.) నావు కూగువ శబ్ద దేవరవర సంనిధానద పరియంతరక్కూ బరువదాగలి.

ప్రార్థిసికొంబువదు.

సర్వేశ్వరా స్వామీ, దేవరవర అడిమెయాగిరువ (హెసరు) ఎంబవన ఆత్మదల్లి పాపద అశుద్ధవంను తొళదు బిట్టు, భూలోకక్కివను సత్తవనాగిద్దరూ, పరగతియల్లి నిమగె జీవిసువవనాగిరువ హాగూ, శరీర దుర్బలదింద తాను మాడిద పాపగళు నిమ్మ మట్టిల్లద కృపా కటాక్షదింద క్షమిసల్పడువ హాగూ, అనుగ్రహ మాడ బేకెందు దేవరవరంను బేడికొళ్ళుత్తేవె. ఇంథా బింనహగళెల్లా నంమ ఆళిదవరాద జేసు క్రీస్తునాథర తిరు ముఖవంను నోడి పాలిస కరుణిసిరి, స్వామీ. ఆమేన్ జేసు.

(ఈ జపగళు తీరిద బళిక తీర్థవంను ప్రేతద మేలె ప్రోక్షిసువదు.)

ಪ್ರೇತದ ಅಡಕವಂನು ಕುರಿತು ಅರಿಯತಕ್ಕ ಕೆಲವು ವಿಶೇಷಗಳು.

೧ ನೇದು. ಕೆಲವು ಆಕಸ್ಮಿಕವಾದ ವಾಯುವಿನಿಂದಲಾದರೂ ಕೆಲವು ದೀರ್ಘಜಾಡ್ಯದಿಂದಲಾದರೂ, ಸತ್ತವನ ಮರ್‍ಯಾದೆಯಲ್ಲಿ ಧಾತು ಬೀಳಲೂ, ಅಂಗಗಳ ಸೆಕೆ ಆರಲೂ, ಗುಂಡಿಗೇ ಬಡಿತ ನಿಲ್ಲಲೂ, ನರಗಳು ಸೇದಿಕೊಳ್ಳಲೂ, ದೇಹವೆಲ್ಲಾ ನಿಗರಿ ಹೋಗುತ್ತದೆ; ಕೊಳಕು ಮಾತ್ರ ನಾರುವದಿಲ್ಲಾ. ಹೀಗೆ ಅನೇಕರು ಸತ್ತವರಪ್ಪಂದ ೩೦ ಘಳಿಗೆ ಪರಿಯಂತ್ರ ಬಿದ್ದಿದ್ದ ಬಳಿಕ, ಅಡಕ ಮಾಡುವದರೊಳಗೆ ತಿರಿಗಿ ಜೀವದ ಕಳೇ ತೋರಿಸಿದರು; ಮತ್ತೂ ಕೆಲಬರು ಸಮಾಧಿಯಲ್ಲಿ ಇದ್ದು ದೇವಾಧೀನದಿಂದ ಮೇಲಕ್ಕೆ ಬಂದರು. ಇಂಥ ದೃಷ್ಟಾಂತಗಳು ಅನೇಕವು ಎಲ್ಲೆಲ್ಲಿಯೂ ಸಂಭವಿಸಿದ್ದರಿಂದ, ಎಲ್ಲಾ ಸೀಮೆಗಳಲ್ಲಿ ೨೪ ತಾಸುಗಳಾದರೂ ಸಾವು ಕಾಣಿಸಿದ ಬಳಿಕ ಮಾತ್ರ ಅಡಕ ಮಾಡುವರು. ಹೀಗಿದ್ದು ಮಧ್ಯಾಹ್ನದ ಮೂರನೇ ಜಾವದಲ್ಲಿ ಸತ್ತವನಿಗೆ ಸಾಯಂಕಾಲದಲ್ಲಿ ಹೂಳಿಕೇಮಾಡದೆ, ಮಾರಣೇ ದಿನದ ಹೊತ್ತಾರೆಯಲ್ಲಿ ಮಾಡುವರು; ಸತ್ತದಿನದಲ್ಲಿಯೇ ಮಾಡತೊಲ್ಲರು.

೨ ನೇದು. ತ್ರೈಯೇಕ ಸರ್ವೇಶ್ವರನಿಂದ ಅಲಂಕರಿಸಲ್ಪಟ್ಟ ಕ್ರೀಸ್ತುವನಾದವನ ಪ್ರೇತಕ್ಕೆ ಬರು ಮೇರೆ ಮರ್‍ಯಾದೆಯಾಗಿ ಅಡಕ ಮಾಡಬೇಕಾಗಿರುತ್ತದೆ. ಆದರೆ ಸರ್ವೇಶ್ವರನಾದವರ

ಮತಾಚಾರದ ಪದ್ಧತಿಗಳಿಗೆ ಅನುಸಾರವಾಗಿ ಕಿಯಾತುರ್ಕ, ಲೋಕದ ಮತಾಚಾರಗಳ ಪದ್ಧತಿಗಳಂನು ಕಂಡು ಭಾವಿಸಲಾಗದು. ಅವನವನು ಸತ್ತಕ್ಷಣವೇ, ಸರ್ವ ನೀತಿಯಾಧಿಪತಿಯಾದವರ ಸಂನಿಧಾನಕ್ಕೆ ಕರೆಯಲ್ಪಟ್ಟು, ಭಯಂಕರವಾದ ತೀರ್ಪಿಗೊಳಗಾಗಿ, ನಿತ್ಯ ನರಕದಾಜ್ಞೆಗಳಿಗಾದರೂ ಉತ್ತರಿಸುವ ಸ್ಥಳದ ಅನಿತ್ಯ ಬಾಧೆಗಳಿಗಾದರೂ ಅಥವಾ ನಿತ್ಯಾನಂದ ಮೋಕ್ಷಕ್ಕಾದರೂ ನೇಮಿಸಲ್ಪಡುವನೆಂಬುವದರಿಂದ, ಗತಿತಪ್ಪಿ ರಕ್ಷಣ್ಯವಿಲ್ಲದ ಅಜ್ಞಾನಿಗಳ್ವಂದ ಮಿತಿಮೀರುವ ದುಃಖಪಡದೆಯೂ ರೋದನ ಬೊಬ್ಬೆ ಇಡದೆಯೂ ಇರುವದಲ್ಲದೆ, ಮರುಲೋಕದಲ್ಲಿ ಆತ್ಮಕ್ಕೆ ಆಗುವ ಮಹಾ ಗುಪ್ತವೂ ಮಹಾ ಭಯಂಕರವೂ ಆದ ಗತಿ ವಿಚಾರಿಸದ ಅಜ್ಞಾನಿಗಳ್ವಂದ ಲೋಕದ ತಮಾಷೆ ಶೃಂಗಾರ ಶಬ್ದ ಮಾತ್ರ ಕ್ರೀಸ್ತುವನಾದವನ ಅಡರದಲ್ಲಿ ವಿಚಾರಿಸ ಬಾರದು.

ಹೀಗಿರಲಾಗಿ ಮೇಲೆ ಮರ್ಯಾದೆಯಿಂದ ಪ್ರೇತಕ್ಕೆ ಪ್ರಯತ್ನಗಳ ಮಾಡಿದ ಬಳಿಕ, ಸತ್ತವನ ಕೈಯಲ್ಲಿ ಪಾಡು ಪಟ್ಟ ಸ್ವರೂಪವಂನು ಮಡಗಿ, ಆತನ ಹಾಸಿಕೆ ಇತ್ತಲತ್ತಲಿನಲ್ಲಿ ಎರಡು ಮೇಣದ ಬತ್ತಿಗಳ ಕುತ್ತಿಸಿ, ಸಮೀಪಕ್ಕೆ ಒಂದು ಕಳಶದಲ್ಲಿ ತೀರ್ಥವಂನಿರಿಸಿ, ನೆಂಟರು ಮಿತ್ರರು ಬರುವಾಗ ಮೊದಲು ಮೊಣಕಾಲಿನಲ್ಲಿ ಇದ್ದು, ಇವನಾತ್ಮಕ್ಕಾಗಿ ೧ ಪರ ಲೋಕದ ಮಂತ್ರವಂನಾದರೂ ಬೇಡಿಕೊಳ್ಳುವರು. ಆ ಬಳಿಕ ಪ್ರೇತದ ಮೇಲೆ ತೀರ್ಥವಂನು ಎರಚುವರು.

೩ ನೇದು. ಜ್ಞಾನ ಸ್ನಾನದಿಂದ ಸ್ಪೀರಿತು ಸಾಂಕ್ತುವಿಗೆ

ಅಭಿಮಂತ್ರಿಸಲ್ಪಟ್ಟ ದೇವಾಲಯವೂ ದೇವ ಪ್ರಸಾದದಿಂದ ದಿವ್ಯ ಜೇಸುನಾಥರ ತಿರು ಶರೀರಕ್ಕೆ ಐಕ್ಯವೂ ಆಗಿದ್ದಂಥಾ ಪ್ರೇತವಂನು ಹೂಣಿಡುವ ಸ್ಥಳವು ತಿರು ಕ್ಷೇತ್ರವಿರ ತಕ್ಕದ್ದು. ಈ ನೀತಿಯಂ ನೋಡಿ, ಸತ್ಯ ರಾಜ್ಯಗಳಲ್ಲಿ ಒಂದೊಂದು ಪಟ್ಟಣ ಊರು ಗ್ರಾಮದ ಪ್ರೇತಗಳಂನು ಹೂಣಿಡುವದಕ್ಕೆ ಗೋಡೆಯಿಂದಲಾದರೂ ಅಖಂಡ ಬೇಲಿಯಿಂದಲಾದರೂ ಆಡಗಿಸಲ್ಪಟ್ಟು, ಬಾಗಲಿನಿಂದ ಮುಚ್ಚಲ್ಪಟ್ಟ ಒಂದು ಕ್ಷೇತ್ರವು ನೇಮಿಸಿ ಇರುತ್ತದೆ. ಸಭೆಗೆ ಹೊರಗಾಗಿ ತಳ್ಳಲ್ಪಟ್ಟವರಂನೂ ಜ್ಞಾನ ಸ್ನಾನವಿಲ್ಲದವರಂನೂ ತಾವೇ ತಂಮ ಜೀವ ತೆಗದು ಸತ್ತವರಂನೂ ಅದರಲ್ಲಿ ಹೂಣಿಡಕೂಡದು; ಮಂತ್ರಿಸಲ್ಪಡದ ಬೇರೆ ಭಾಗದಲ್ಲಿ ಅಡಕ ಮಾಡ ಬೇಕು. ಅದರಲ್ಲಿ ದನ ಕರ ಮೃಗ ಮೇಯ ತಿರುಗಾಡಲಾಗದು. ಮಧ್ಯದಲ್ಲಿ ಲೋಕದ ರಕ್ಷಣೆಗೆ ಉಪಕರಣವಾದಂಥಾ ದೊಡ್ಡ ಶಿಲ್ವೇ ಮರವು ಸ್ಥಾಪಿಸಿ ಇರುವದರಿಂದಲೂ ಅಂಥಾ ಭೂಮಿಗೆ ಗುರುಗಳು ಸಾಂಗ್ಯ ಪ್ರತಿಷ್ಠೇ ಮಾಡಿದ್ದರಿಂದಲೂ ತಿರು ಕ್ಷೇತ್ರವೆಂಬದಾಗಿ ಎಣಿಸಿ ಕೊಳ್ಳುತ್ತಾರೆ.

೪ ನೇದು. ಜ್ಞಾನ ಜೀವದ ಬಾಗಲಾಗಿರುವ ಜ್ಞಾನಸ್ನಾನವ ಗುರುಗಳು ಕೊಡುತ್ತಾರೆ. ಆತ್ಮದ ರೋಗವಾಗಿರುವ ಪಾಪದ ವಿಮೋಚನೆಗೆ ಗುರುಗಳಾಶೀರ್ವಾದವು ಬೇಕಾಗಿಥೆ. ಜ್ಞಾನ ಜೀವವಂನು ಪೋಷಿಸುವ ಸತ್ ಪ್ರಸಾದವಂನು ಗುರುಗಳೇ ಅಭಿಮಂತ್ರಿಸಿ ಪಾಲಿಸುತ್ತಾರೆ. ಕ್ರೀಸ್ತುವರುಗಳ ಲಗ್ನಗಳಿಗೆ ದೀವನೇ ಮಾಡುವವರು ಗುರುಗಳೇ. ಅವಸಾನ

ಕಾಲದಲ್ಲಿಯೂ ಕಡೇ ಆಶೀರ್ವಾದವಂನೂ ಅವಧೀ ಅಭ್ಯಂಗವಂನೂ ಪಾಲಿಸುವದಕ್ಕೆ ಗುರುಗಳು ಬರುತ್ತಾರೆ. ಇದೇ ಮೇರೆ ಸತ್ತ ಕ್ರೀಸ್ತುವನಾದವನ ಸಮಾಧಿಗೆ ಆಶೀರ್ವಾದವಂನೂ ಪ್ರೇತಕ್ಕೆ ಮಂಣೂ ಕೊಡುವದಕ್ಕೆ ಗುರುಗಳಿರುವದೇ ಯೋಗ್ಯವೂ ಮಹಾ ಪ್ರಯೋಜಕವೂ ಆಗಿರುತ್ತದೆ.

ಹೀಗಿರಲಾಗಿ ಸ್ವಾಮಿಗಳು ಊರಲ್ಲಿ ಇರುವಾಗ ಯಾವನೊಬ್ಬನು ಸತ್ತರೆ, ಕೂಡಿದಷ್ಟು ಅವರು ಚಿತ್ತೈಸಿ ಬರುವಹಾಗೆ ಬೇಡಿ ಕೊಳ್ಳ ಬೇಕು. ಇಲ್ಲದಿದ್ದರೆ ಉಪದೇಶಿ ಇಂಥಾ ಕರ್ಮಾಂತರಗಳಂನು ನಡಿಸಬೇಕಾಗಿರುತ್ತೆ.

ಪ್ರೇತಕ್ಕೆ ಹಯಾಳಿಕೆಯಂನು ಮಾಡತಕ್ಕ ಕ್ರಮವು.

ಶವ ಸಮಾಧಿಗೆ ತೆಕ್ಕೊಂಡು ಹೋಗತಕ್ಕ ತರುಣದಲ್ಲಿ ಮುಂದು ಮುಂದು ಸರ್ವರು ಮೊಣಕಾಲಿನಲ್ಲಿರಲಾಗಿ ಉಪದೇಶಿ ಹೇಳುವದು :

(ಉಪದೇಶಿ.) ಸ್ವಾಮೀ, ಇವನಿಗೆ (ಇವಳಿಗೆ) ಮುಗುವಿಲ್ಲದ ಕಾಲದಾನಂದ ಸುಖವಂನು ಕಟ್ಟಳೆ ಇಡ ಕರುಣಿಸಿರಿ.

(ಜನರು.) ನಿತ್ಯಕಾಲದ ಪ್ರಕಾಶವು ಇವನಿಗೆ (ಇವಳಿಗೆ) ಪ್ರಕಾಶಿಸುವದಾಗಲಿ. ಆಮೆನ್ ಜೇಸು.

ಸ್ವಾಮೀ, ಕೃಪೆಯಂನು ಮಾಡಿ;
ಕ್ರೀಸ್ತುವೇ, ಕೃಪೆಯಂನು ಮಾಡಿ;
ಸ್ವಾಮೀ, ಇವನ (ಇವಳ) ಮೇಲೆ ದಯವಾಗಿರಿ.

(೧ ಪರಲೋಕದ.)

(ಈ ಮಂತ್ರವಂನು ಹೇಳುವಾಗ, ಗುರುಗಳಿಲ್ಲದಿದ್ದರೆ, ಉಪದೇಶಿ ಶ್ರವದ ಮೇಲೆ ತೀರ್ಥ ಎರಚುವದು.)

(ಉಪದೇಶಿ.) ನಂಮಂನು ಶೋಧನೆಯಲ್ಲಿ ಬೀಳಲೀಸದೆ,

(ಜನರು.) ಕೇಡಿನೊಳಗಿಂದ ನಂಮಂನು ರಕ್ಷಿಸಿಕೊಳ್ಳಿ.

(ಉ.) ನರಕದ ಬಾಗಲೊಳಗಿಂದ.

(ಜ.) ಇವನ (ಇವಳ) ಆತ್ಮವಂನು ಬಿಡಿಸಿಕೊಳ್ಳಿ, ಸ್ವಾಮಿ.

(ಉ.) ಇವನಿಗೆ (ಇವಳಿಗೆ) ನಿತ್ಯವಾದ ವಿಶ್ರಮವಂನು ಕರುಣಿಸಿರಿ, ಸ್ವಾಮಿ.

(ಜ.)ಇವನು (ಇವಳು) ಸಮಾಧಾನದಲ್ಲಿ ವಿಶ್ರಮಿಸುವದಾಗಲಿ.

(ಉ.) ಕರ್ತರೇ, ನಂಮ ಪ್ರಾರ್ಥನೆಯಂನು ಆಲೈಸಿಕೊಳ್ಳಿ.

(ಜ.) ನಾವು ಕೂಗುವ ಶಬ್ದ ದೇವರವರ ಸಂನಿಧಾನದ ವರಿಯುಂತರಕ್ಕೂ ಬರುವದಾಗಲಿ.

ಪ್ರಾರ್ಥಿಸಿಕೊಂಬುವದು.

ಸರ್ವೇಶ್ವರಾ ಸ್ವಾಮಿ, ... (೪೨೩ ನೇ ಪರ್ಟ.)

ಹೀಗೆ ಮನೆಯಲ್ಲಿ ಜಪ ಮಾಡಿದ ತರುವಾಯ, ಶ್ರವಾ ಹೊತ್ತುಕೊಂಡು, ಉಪದೇಶಿ ಕೆಳಗಿರುವ ಬೇಡುದಲೆಗಳ ಹೇಳಿಕೊಳ್ಳ, ಹೋಗುವದು. ಸಮಾಧಿ ದಾರವಾಗಿ

ಇದ್ದರೆ, ಸಕಲ ಅರ್ಚ್ಯಶಿಷ್ಟವರುಗಳ ಪ್ರಾರ್ಥನೆಗಳ ಸಹಾ
ಕೇಳಬರುದು.

ಕರ್ತರಾದವರೇ, ದೇವರವರ ಉಚಿತವಾದ ಕನಿಕರ
ದಿಂದ ರಕ್ಷಣ್ಯವಂನು ನಂಬ ಬೇಕಾದ ಸ್ಥಳದಲ್ಲಿ ನಿಂಮ
ಅಡಿಮೆಯಾದವನಂನು (ಅವಳಂನು) ಅಂಗೀಕರಿಸಿರಿ,
ಸ್ವಾಮಿ. ಆಮೆನ್ ಜೇಸು.

ನರಕದ ಸಕಲ ನೋವು ಮೋಸ ಉಪದ್ರಗಳೊಳಗಿಂದ,
ನಿಂಮ ಅಡಿಮೆಯವನ (ಅವಳ) ಆತ್ಮವಂನು ರಕ್ಷಿಸಿ
ಕೊಳ್ಳಿ, ಸ್ವಾಮಿ.

ಸ್ವಾಮಿ, ಲೋಕದ ಸಾಧಾರಣವಾದ ಸಾವಿನೊಳಗಿಂದ
ದೇವರವರು ಹೆಂನೋಕ್ ಎಲಿಯಾಸ್ ಎಂಬವರಂನು
ರಕ್ಷಿಸಿದಹಾಗೆ,

ಇವನ (ಇವಳ) ಆತ್ಮವಂನು ರಕ್ಷಿಸಿಕೊಳ್ಳಿ, ಸ್ವಾಮಿ.

ಜಲಪ್ರಳಯದೊಳಗಿಂದ ನೋವೆಯೆಂಬವರಂನು ದೇವ
ರವರು ರಕ್ಷಿಸಿದಹಾಗೆ,

ಇವನ (ಇವಳ) ಆತ್ಮವಂನು ರಕ್ಷಿಸಿಕೊಳ್ಳಿ, ಸ್ವಾಮಿ.

ಊರೆಂಬ ಪಟ್ಟಣದ ಅಜ್ಞಾನದೊಳಗಿಂದ ಅಬ್ರಹಾ
ಮೆಂಬವರಂನು ದೇವರವರು ರಕ್ಷಿಸಿದ ಹಾಗೆ,

ಇವನ (ಇವಳ) ಆತ್ಮವಂನು ರಕ್ಷಿಸಿಕೊಳ್ಳಿ, ಸ್ವಾಮಿ.

ತಮ್ಮ ನಿರ್ಬಂಧ ಪೀಡೆಗಳೊಳಗಿಂದ ಜೋಬೆಂಬವರಂನು
ದೇವರವರು ರಕ್ಷಿಸಿದಹಾಗೆ, — ಇವನ....

ತಂಮ ತಂದೆಯ ಕೈಯಿಂದ ಬಲಿಯಾಗುವದೊಳಗಿಂದ ಇಸಾಕೆಂಬವರಂನು ದೇವರವರು ರಕ್ಷಿಸಿದಹಾಗೆ,

ಸೊದೋಮೆಂಬ ಪಟ್ಟಣದೊಳಗಿಂದಲೂ ಅಗ್ನಿಜ್ವಾಲೆಗಳೊಳಗಿಂದಲೂ ದೇವರವರು ಲೋಥೆಂಬವನಂನು ರಕ್ಷಿಸಿದಹಾಗೆ,

ಎಜಿಪ್ತ್ ಶೀಮೆಯ ರಾಯನಾದ ಫರಾವೋನೆಂಬವನ ಕೈಯ್ಯೊಳಗಿಂದ ಮೋಯಿಸೆಸನಂನು ದೇವರವರು ರಕ್ಷಿಸಿದಹಾಗೆ,

ಸಿಂಹಗಳ ಗವಿಯೊಳಗಿಂದ ದೇವರವರು ದಾನಿಯೇಲೆಂಬವರಂನು ರಕ್ಷಿಸಿದಹಾಗೆ,

ನಿಷ್ಠೂರ ರಾಯನ ಕೈಯೊಳಗಿಂದಲೂ ಅಗ್ನಿ ಆವಿಗೆಯೊಳಗಿಂದಲೂ ದೇವರವರು ಮೂರು ಬಾಲರಂನು ರಕ್ಷಿಸಿದಹಾಗೆ,

ಅಪದೂರಿನೊಳಗಿಂದ ದೇವರವರು ಪುಣ್ಯಸ್ತ್ರೀಯಾದ ಸುಸಾಂನಂಮನಂನು ರಕ್ಷಿಸಿದಹಾಗೆ,

ಗೊಲ್ಯಾಥೆಂಬ ರಾಕ್ಷಸನ ಕೈಯೊಳಗಿಂದಲೂ ಸೌಲೆಂಬವನ ಹಗೆಯೊಳಗಿಂದಲೂ ದೇವರವರು ದಾವಿದೆಂಬವರನು ರಕ್ಷಿಸಿದಹಾಗೆ,

ಶರೆ ಸಂಕೋಲೆಗಳಿಂದ ದೇವರವರು ರಾಯಪ್ಪನಂನೂ ಚಿಂನಪ್ಪನಂನೂ ರಕ್ಷಿಸಿದಹಾಗೆ,

ಮೂರು ಬಗೆಯಾದ ಮಹಾ ಅಘೋರ ಬಾಧೆ

ಇವನ (ಇವಳ) ಆತ್ಮವಂನು ರಕ್ಷಿಸಿಕೊಳ್ಳಿ, ಸ್ವಾಮಿಾ.

ಗಳೊಳಗಿಂದ, ರನ್ಯಾಸ್ತ್ರೀಯೂ ವೇದಸಾಕ್ಷಿಯೂ ಆಗಿ ದಂಥಾ ಅಜ್ಞರ್ಶಿಷ್ಟ ಥೇರ್ಲಾವೆಂಬವಳಂನು ದೇವರವದು ರಕ್ಷಿಸಿದ ಹಾಗೆ,

ಇವನ (ಇವಳ) ಆತ್ಮವಂನು ರಕ್ಷಿಸಿರೊಳ್ಳಿ, ಸ್ವಾಮಿ.

ದೇವರವರಿಗೆ ಅಡಿಮೆಯಾದ ಇವನ (ಇವಳ) ಆತ್ಮವಂನು ರಕ್ಷಿಸಿ, ನಿಂಮ ಮೋಕ್ಷ ರಾಜ್ಯದ ಚೆಲ್ವ ಭಾಗ್ಯಗಳಿಗೂ ನಿತ್ಯಾನಂದ ಸಂತೋಷಗಳಿಗೂ ಪಾಲುಗಾರನು (ಪಾಲುಗಾರ್ತಿ) ಆಗುವ ಹಾಗೆ ದಯಾ ರರುಣಿಸಿರಿ, ಸ್ವಾಮಿ. ಆಮೆನ್ ಜೇಸು.

ಸಮಾಧಿಗೆ ಶೇರುತ್ತಲೇ,
ಪ್ರೇತವ ಸಮಾಧಿಯ ಬಾಗಲ್ಲಿ ಇರಿಸಿ
ರೋಳತಗ್ರದು:

ಸ್ವಾಮಿ, ಕೃಪೆಯಂನು ಮಾಡಿ;
ಕ್ರೀಸ್ತುವೇ, ಕೃಪೆಯಂನು ಮಾಡಿ;
ಸ್ವಾಮಿ, ಕೃಪೆಯಂನು ಮಾಡಿ. (೧ ಪರಲೋರದ.)

(ಈ ಮಂತ್ರ ರೋಳುವದರೊಳು ತೀರ್ಥವಂನು ಶ್ರವದ ಮೇಲೆಯೂ ಸಮಾಧಿಯಲ್ಲಿಯೂ ಎರಚುವದು, ಧೂಪ ತೋರಿಸುವದು.) ಆ ಮೇಲೆ:

(ಉ.) ನಂಮಂನು ಶೋಧನೆಯಲ್ಲಿ ಬೀಳಲೀಸದೆ,
(ಜ.) ಕೇಡಿನೊಳಗಿಂದ ನಂಮಂನು ರಕ್ಷಿಸಿರೊಳ್ಳಿ.
(ಉ.) ನರರದ ಬಾಗಲೊಳಗಿಂದ,

(జ.) ఇవన (ఇవళ) ఆత్మవంను రక్షిసికొళ్ళి, స్వామీ.

(ఉ.) ఇవను (ఇవళు) సమాధానదల్లి విశ్రమిసువదాగలి.

(జ.) ఆమేన్ జేసు.

(ఉ.) స్వామీ, నమ్మ ప్రార్థనెయంను ఆలైసికొళ్ళి;

(జ.) నావు కూగువ శబ్ద దేవరవర సంనిధానద పరియంతరక్కూ బరువదాగలి.

ప్రార్థిసికొంబువదు.

సర్వేశ్వరా స్వామీ, ఎడెబిడదె మరుకవంను ప్రసాదిసలూ పాపద విమోచనే కరుణిసలూ దేవరవర స్వభావవే కాదు. ఆద్దరింద తావు ఈ భూలోకదొళగింద ఇందు కరెయ చిత్తవాద ఇవన (ఇవళ) ఆత్మవంను శత్రువిన వశదల్లి బిడదెయూ ముగువిన పరియంత అవనంను మరెయదెయూ ఇరువహాగె నింమంను ప్రార్థిసుత్తేవె.

దేవరవరంను విశ్వాసిసి నంబికొండు బందద్దరింద, ఇంథా ఆత్మవు నరకద బాధెగళంను పడదె నిత్య ఆనందవంను పడెయువహాగె, పరిశుద్ధ దూతరు అవనంను కరెకొండుహోగి, పరగతియాగిరువ నిత్య సంతృప్తియుళ్ళ రాజ్యదల్లి శేరిసబేకెందు

కట్టళెయిడ కరుణిసిరి, స్వామీ. ఈ బింనహంగళెల్లా జేసునాథర తిరు ముఖవంను నోడి పాలిసిరి, స్వామీ. ఆమెన్ జేసు.

సమాధియల్లి శ్రవవంను ఇళిసువదు.

మర్యాదెయాగి ఇరిసి, ఎదెమేలె కైయిగళంను అడ్డలాగి ముగిదు ముఖవంను ముగిచిబిట్టె మేలె హేళతక్కద్దు:

స్వామీ, కృపెయంను మాడి;
క్రీస్తువే, కృపెయంను మాడి;
స్వామీ, కృపెయంను మాడి. (౧ పరలోకద. తీర్థ శ్రవదమేలె ఎరచువదు.)

ప్రార్థిసికొంబువదు.

మితియిల్లద దయా స్వరూపవాదంథా స్వామీ, జీవక్కూ మరణక్కూ కర్తరాదవరు నీవే సరి. జీవిగళాదరూ నిర్జీవిగళాదరూ ఎల్లరు దేవరవర ఆధీనదల్లి అడగి ఇరుత్తారె. దేవరవరు కొట్ట జీవాత్మవంను తావే ఈగ తిరిగి కరెదదరింద, ఈ భూలోకద సంచార బిట్టు హోదనే. ఆపరె ఇవన ఉత్తరక్కె పిశాచిగళూ భూతాదిగళూ సేరద హాగూ, నింమ శత్రుగళు ఇవనిగె విఘ్న మాడద హాగూ, దేవరవర సంనిధియల్లి భాగ్యవాద స్థళక్కె

ಇವನ್ನ ಕರೆದುಕೊಂಡು ಹೋಗುವರಾಗೂ, ಸಂಮನಸ್ಸುಗಳಿಗೆ ಅಪ್ಪಣೆಯಂ ಪಾಲಿಸಿರಿ, ಸ್ವಾಮಿ. ಈತನು ದೇವರವರ ಕೃಪೆಯಿಂದಲೇ ನಿಮಗೆ ಮಗನಾದನು; ನಿಂಮಂನು ವಿಶ್ವಾಸಿಸಿ ಅಬದ್ಧವಾದ ದೇವರುಗಳಂನೆಲ್ಲಾ ಬಿಟ್ಟು, ಸತ್ಯವೇದದ ಜ್ಞಾನಸ್ನಾನವಂಗೊಂಡು, ದೇವರವರ ಮೇಲೆ ಮಾತ್ರ ಭಕ್ತಿ ನಂಬಿಕೆಯಲ್ಲಿ ನಡೆದುಕೊಂಡಿದ್ದನು. ಈಗ ಏನಾದರೂ ದೋಷ ಏನಾದರೂ ಅಪವಿತ್ರ ಉಂಟಾದರೆ, ತಂಮ ಕೃಪೆಯಿಂದ ಅದಂನು ತೊಳದುಬಿಟ್ಟು, ದೇವರವರ ಪಾದ ಬಳಿಯಾದ ಸ್ಥಳವಕೊಟ್ಟು, ನಿಂಮ ದಿವ್ಯದರ್ಶನವ ತೋರಿಸಿ, ಸರ್ವಕಾಲದಲ್ಲ್ಯೂ ನಿತ್ಯಸುಖವ ಪಾಲಿಸ ಕರುಣಿಸಿರಿ, ಸ್ವಾಮಿ. ಆಮೆನ್ ಜೇಸು.

(ಉ.) ನಿತ್ಯ ವಿಶ್ರಮವಂನು ಇವನಿಗೆ ಕರುಣಿಸಿರಿ, ಸ್ವಾಮಿ.

(ಜ.) ನಿತ್ಯವಾದ ಪ್ರಕಾಶವು ಇವನಿಗೆ ಪ್ರಕಾಶಿಸುವದಾಗಲಿ.

(ಉ.) ಈತನ ಆತ್ಮವೂ, ಸತ್ತವರ ಸಕಲ ವಿಶ್ವಾಸಿಗಳ ಆತ್ಮಗಳೂ ಸರ್ವೇಶ್ವರನಾದವರ ಅಂತಃಕಾರುಣ್ಯದಿಂದ ಸಮಾಧಾನದಲ್ಲಿ ವಿಶ್ರಮಿಸುವದಾಗಲಿ. ಆಮೆನ್ ಜೇಸು.

(ಆಗಲು ಉಪದೇಶಿ ಮೊದಲು ಶವದಮೇಲೆ ಮಂಣು ಹಾಕಿ ಬಿಡುವದು. ಆ ಮೇಲೆ, ನೆಂಟರೂ ಮಿತ್ರರೂ ತೀರಿದಬಳಿಕ ಮನೆಗೆ ಬರುವಾಗ, ಐದು ಪರಲೋಕದ ಮಂತ್ರ ಬೇಡಿಕೊಂಡು ಹೋಗುವದು.)

ಬಾಲರ ಅಡರವಂನು ಮಾಡತಕ್ಕ ಕ್ರಮವು.

ಜ್ಞಾನಸ್ನಾನದಿಂದ ಪವಿತ್ರವಾದ ಜ್ಞಾನ ಜನ್ಮವಂನು ಹೊಂದಿದ ಮಕ್ಕಳು ಬುದ್ಧಿಯ ವಿವರ ತಿಳಿಯುವದಕ್ಕಿಂತಾ ಮುಂಚೆ ಮೃತವಾದರೆ, ಪಾಪ ದೋಷವಿಲ್ಲದೆಯೂ ಜನ್ಮ ಪಾಪದ ಕಳಂಕಿಲ್ಲದೆಯೂ ಅವರ ಆತ್ಮವು ಮಹಾ ಪರಿಶುದ್ಧ ವಾಗಿರುವದರಿಂದ, ಆ ಕ್ಷಣವೇ ಮೋಕ್ಷ ರಾಜ್ಯಕ್ಕೆ ಹಾರಿ ಹೋಗಿ ಇರುವದೆಂಬುವದೇ ಯಥಾರ್ಥ. ಇದರ ನಿಮಿತ್ತ ಅಂಥವರಿಗಾಗಿ ಬೇಡಿಕೊಳ್ಳುವದು ಅಗತ್ಯವಿಲ್ಲ. ಮತ್ತಾ ಬಾಲರ ಪ್ರೇತಗಳಿಗೆ ಬಿಳಿ ಬಟ್ಟೆಗಳಂನು ಹೊದ್ದಿಸಿ, ತಲೆಯ ಮೇಲೆ ಹೂವಿನ ಕಿರೀಟ ಹಾಕಿ, ಸುವಾಸನೆಯುಳ್ಳ ಗಿಡ ಸೊಪ್ಪಿನ ಮಾಲೆಗಳ ಕೊರಳಿಗೆ ಹಾಕುವದುಂಟು.

ಮನೆಯಲ್ಲಿ ಇದ್ದು ಹೇಳತಕ್ಕದ್ದು.

ಈಗಲೂ ಎಂದೆಂದಿಗೂ ಸರ್ವೇಶ್ವರನ ತಿರು ನಾಮವು ಸ್ತುತಿಸಲ್ಪಡುವದಾಗಲಿ.

ಸ್ವಾಮಿ, ಕೃಪೆಯಂನು ಮಾಡಿ;
ಕ್ರೀಸ್ತುವೇ, ಕೃಪೆಯಂನು ಮಾಡಿ;
ಸ್ವಾಮಿ, ಕೃಪೆಯಂನು ಮಾಡಿ. (೧ ಪರಲೋಕದ.)

ತೀರ್ಥ ಎರಚಿ ಹೇಳುವದು :

(ಉ.) ನಂಮಂನು ಶೋಧನೆಯಲ್ಲಿ ಬೀಳಲೀಸದೆ,

(ಜ.) ಕೇಡಿನೊಳಗಿಂದ ನಂಮಂನು ರಕ್ಷಿಸಿಕೊಳ್ಳಿ. ಪ್ರಾರ್ಥಿಸಿ ಕೊಂಬುವದು.

ಸರ್ವಶಕ್ತಿ ಸರ್ವ ದಯಾಪರರಾದ ಸರ್ವೇಶ್ವರಾ, ಜ್ಞಾನಸ್ನಾನದಿಂದ ಮರುಜನ್ಮ ಹೊಂದಿ ಈ ಪರದೇಶವಂನು ಬಿಟ್ಟು ಹೋಗುವ ಬಾಲರೆಲ್ಲರಿಗೆ, ಸ್ವಂತ ಪುಣ್ಯದ ಪ್ರಾಪ್ತಿ ಹೊಂದಿಲ್ಲದಿದ್ದಾಗ್ಯೂ, ದೇವರವರು ಆ ಕ್ಷಣವೇ ನಿತ್ಯಜೀವವಂನು ಪಾಲಿಸುತ್ತೀರಿ. ಈ ಮೇರೆ ಈ ಚಿಕ್ಕವನ ಆತ್ಮಕ್ಕೆ ಇಂದು ಕರುಣಿಸಿದಿರಿ ಎಂತ ವಿಶ್ವಾಸಿಸುತ್ತೇವೆ. ಯಾವಾಗಲೂ ಪರಿಶುದ್ಧ ಕಂನಿಕೆಯಾಗಿರುವ ಅರ್ಬ್ಯ. ಮರಿಯಂಮನವರ ಪ್ರಾರ್ಥನೆಗಳಿಂದಲೂ ಸಕಲ ಅರ್ಚ್ಯಶಿಷ್ಟವರುಗಳ ಬೇಡುದಲೆಗಳಿಂದಲೂ, ನಾವೂ ಸಹ ಈ ಭೂವನದಲ್ಲಿ ಶುದ್ಧ ಹೃದಯದೊಂದಿಗೆ ಊಳಿಗ ಮಾಡುವ ಹಾಗೂ, ಪರಗತಿಯಲ್ಲ್ಯಾ ಮುಕ್ತಿಯಂಗೊಂಡ ಬಾಲರೊಂದಿಗೆ ದೇವರವರಂನು ಸದಾಕಾಲವೂ ದರ್ಶಿಸುವಹಾಗೂ ಮಾಡ ಕರುಣಿಸಿರಿ, ಸ್ವಾಮಿ. ಈ ಪ್ರಾರ್ಥನೆಯಂನು ಜೇಸುನಾಥರಂನು ನೋಡಿ ಪಾಲಿಸಿರಿ, ಸ್ವಾಮಿ. ಆಮೆನ್ ಜೇಸು.

ಆ ಮೇಲೆ ಪ್ರೇತವ ಹೊತ್ತುಕೊಂಡು, ದಾರಿಯಲ್ಲಿ ದೇವರ ತಾಯ ಪ್ರಾರ್ಥನೆ ಹೇಳುತ್ತಾ ಹೂಣುವ ಸ್ಥಳಕ್ಕೆ ಹೋಗುವದು.

ಸಮಾಧಿಯೊಳಗೆ ಹಾಕಿದಮೇಲೆ ಹೇಳುವಂಥಾದ್ದು:

ಬಾಲರೂ ಕಂನಿಯರೂ ಕೊಂಚ ಪ್ರಾಯದವರೊಂ

ಡಿಗೆ ವೃದ್ಧಾಪ್ಯದವರೂ ಸರ್ವೇಶ್ವರನ ನಾಮವಂನು ಸ್ತುತಿಸುವದಾಗಲಿ.

ಸ್ವಾಮೀ, ಕೃಪೆಯಂನು ಮಾಡಿ;
ಕ್ರೀಸ್ತುವೇ, ಕೃಪೆಯಂನು ಮಾಡಿ;
ಸ್ವಾಮೀ, ಕೃಪೆಯಂನು ಮಾಡಿ. (೧ ಪರಲೋಕದ.)

ಪ್ರೇತಕ್ಕೂ ಸಮಾಧಿಗೂ ತೀರ್ಥ ಎರಚಿ ಧೂಪ ತೋರಿಸುವದು. ಆ ಮೇಲೆ :

(ಉ.) ನಂಮಂನು ಶೋಧನೆಯಲ್ಲಿ ಬೀಳಲೀಸದೆ,
(ಜ.) ಕೇಡಿನೊಳಗಿಂದ ನಂಮಂನು ರಕ್ಷಿಸಿಕೊಳ್ಳಿ.
(ಉ.) ಬಾಲರು ನಂಮಬಳಿಗೆ ಬರಕೊಡಿರಿ;
(ಜ.) ಯಾಕೆಂದರೆ ಮೋಕ್ಷ ರಾಜ್ಯವು ಇಂಥವರದಾಗಿದೆ.

ಪ್ರಾರ್ಥಿಸಿಕೊಂಬುವದು.

ಅತ್ಯಂತ ಶಕ್ತಿಯುಳ್ಳವರೂ ನಿತ್ಯಜೀವಿಯೂ ನಿಷ್ಕಳಂಕರಾದ ವಿರಕ್ತದ ಮೇಲೆ ಪ್ರೀತಿಯುಳ್ಳವರೂ ಆಗಿರುಂಥಾ ಸರ್ವೇಶ್ವರಾ, ದೇವರವರು ಈ ಚಿಕ್ಕವನ ಆತ್ಮವಂನು ಇಂದು ಮೋಕ್ಷರಾಜ್ಯಕ್ಕೆ ಕರೆಯ ಚಿತ್ತವಾದಿರೇ; ಹೀಗೆಯೇ ಗುಲಾಮರಿಗೂ ಕೃಪೆಯಂಮಾಡಿ, ನಾವು ಪಾಪದ ದೋಷವಿಲ್ಲದೆ ಜೀವಿಸಿ, ನಿಂಮ ಮರಣಾ ತಿರು ಪೀಡೆಯು ಫಲಾದಿಗಳಿಂದಲೂ ಮುಕ್ತಿಕೊಂದಿದ ನಿತ್ಯ ಕಂನಿಕೆಯಾದ ಮರಿಯಂಮನವರ ಮುಂತಾದ ಅರ್ಚ್ಯಶಿಷ್ಟರುಗಳ ಪ್ರಾರ್ಥನೆಗಳಿಂದಲೂ, ದೇವರವರ ಸಕಲ ಪರಿಶುದ್ಧವ

ಕೊಂದಿಗೂ ನಿಂಮಿಂದ ತಿಳಿದುಕೊಳ್ಳಲ್ಪಟ್ಟ ಸಕಲವರೊಂದಿಗೂ ಅದೇ ರಾಜ್ಯದೊಳು ನಾವು ಸಂತೋಷಿಸುವ ಹಾಗೆ ಮಾಡಬೇಕೆಂದು ಬೇಡಿಕೊಳ್ಳುತ್ತೇವೆ, ಸ್ವಾಮಿ. ಸರ್ವೇಶ್ವರನಾಗಿರುವ ಪಿತನೊಂದಿಗೂ ಸ್ಪಿರಿತು ಸಾಂತ್ತುವಿನ ಏಕತ್ವದಲ್ಲಿಯೂ ದೇವರಾಗಿದ್ದು, ಸಮಸ್ತ ಯುಗ ಯುಗಾಂತರಗಳಲ್ಲಿ ಆಳಿ ಕೊಂಡು ಬರುವಂತವರೇ. ಆಮೆನ್ ಜೇಸು.

ಪಲ ಪಲ ಬೇಡುದಲೆಗಳು.

ಪ್ರಸೂತಿ ಆಗುವದಕ್ಕೆ ಸಂಕಟ ಪಡುವವಳಿಗಾಗಿ ಬೇಡುದಲೆಯು.

ನೀತಿಯೂ ದಯವೂ ಭರಿತರಾದ ಸರ್ವೇಶ್ವರಾ, ಆದಿ ತಾಯ್ಯಾದ ಏವೆಯೆಂಬವಳು ನಿಂಮ ಕಲ್ಪಣೆಯಂನು ಮೀರಿ ಮಾಡಿದ ಪಾಪಕ್ಕೋಸ್ಕರ, ಅವಳೂ ಅವಳಿಂದ ಉಂಟಾದ ಸಕಲ ಸ್ತ್ರೀ ಜನಗಳೂ ಪ್ರಸವಿಸುವ ತರುಣದೊಳು ಪ್ರಾಣ ಸಂಕಟ ಪಟ್ಟು ಮಕ್ಕಳಂನು ಹೆರುವರೆಂಬ ತೀರ್ವೆ ಇಟ್ಟಿರೇ, ಸ್ವಾಮಿ. ಅಂಥಾ ಆಜ್ಞೆ ಫಲಿಸಲಾಗಿ, ಈ ಸ್ತ್ರೀಯಾದವಳೂ ಇವಳ ಗರ್ಭದಲ್ಲಿ ನಿಂಮ ದಯದಿಂದ ಉದ್ಭವವಾದ ಶಿಶುವೂ ಮಹಾ ಸಂಕಟ ಪಡುವ ಕಾರಣ, ಕರುಣಾ ಸಮುದ್ರವಾದ ಪಿತನೇ, ದೇವರವರು ಕೃಪಾ

ಕಟಾಕ್ಷದೊಂದಿಗೆ ಇವಳಂನು ದೃಷ್ಟಿಸಿ, ನಿಂಮ ದಿವ್ಯ ಕುಮಾರನ ಪರಿಶುದ್ಧ ಮಾತೆಯಾದವಳು ಲವಲೇಶ ವೇಧನೆ ಇಲ್ಲದೆ ಅದ್ಭುತವಾಗಿ ಪ್ರಸವಿಸ ವರವನ್ನು ಕರುಣಿಸಿದ ಪ್ರಕಾರ, ಅಂಥ ಅಮಲೋದ್ಭವಿಯಾದ ಕನ್ಯೆ ಮರಿಯಂಮನವರ ಪುಣ್ಯ ಫಲಾದಿಗಳಂನೂ ಬೇಡುದಲೆಗಳಂನೂ ನೋಡಿ, ಈ ಸ್ತ್ರೀಯ ಮೇಲೆ ದಯವಿಟ್ಟು, ಈಕೆ ಪಡುವ ಕಠಿಣ ವೇಧನೆಯಂನು ನಿವಾರಿಸಿ ರಕ್ಷಿಸಿರಿ, ಸ್ವಾಮಿ. ಹಾಗೆಯೇ ದೇವರವರ ಕರುಣದಿಂದ ಈ ಸ್ತ್ರೀಯು ಸುಖವಾಗಿ ಮಗುವಂನು ಪಡೆದು ನಿಂಮಂನು ಸ್ತುತಿಸುವ ಹಾಗೆ ಗುಡಿಗೆ ಹೋಗಲೂ, ಪಡೆದ ಶಿಶುವಂನು ಜ್ಞಾನ ಸ್ನಾನದಿಂದ ದೇವರವರಿಗೆ ಮಗುವಾಗ ಮಾಡಿ, ಅದಂನು ನಿಂಮ ಶೇವೆಗೋಸ್ಕರ ಸಾಕಿ ಸಲಹಲೂ ಕೃಪೆ ಮಾಡ ಚಿತ್ತೈಸಿರಿ, ಸ್ವಾಮಿ. ಆಮೆನ್ ಜೇಸು. (೧ ಪರಲೋಕದ, ೧ ನಮೋ ದೇವ ಮಂತ್ರ.)

ಮಳೆಗೋಸ್ಕರ ಬೇಡುದಲೆ.

ತಪ್ಪಿಲ್ಲದ ಕ್ರಮದೊಂದಿಗೆ ಸಮಸ್ತವಂನು ಪರಿಪಾಲಿಸಿ ನಡಿಸುವಂಥ ಸರ್ವೇಶ್ವರಾ, ನಾವು ಜೀವ ಜೀವಿಸುವದಕ್ಕೂ ಬಾಳುವದಕ್ಕೂ ನಡಿಯುವದಕ್ಕೂ ನೆಲೆಗೊಳ್ಳುವದಕ್ಕೂ ಕಾರಣಕರ್ತರಾದವರೇ, ನಮಗೆ ಯಥೇಷ್ಟಕೆ ಕತೀ ಶೆಬ್ಬಿಯಾದ ಮಳೆ ವರ್ಷಿಸಲೂ, ದವಸ ಧಾನ್ಯ ಮೊದಲಾದ

ಸಂಪತ್ತುಗಳು ಹೆಚ್ಚಿ ಅಧಿಕರಿಸಲಾ, ಮಾಡ ಕರುಣಿಸಿರಿ, ಸ್ವಾಮಿ. ನಾವು ಅಧಿಕವಾದ ತಾತ್ಪರ್ಯದೊಡನೆ ಮೇಲರಿತವರಾಗಿದ್ದು, ಧರ್ಮ ದಾರಿಯಲ್ಲಿ ನಡೆದು ದೇವರವರಿಗೆ ತಿರು ಶೇವೆಯಂನು ಸಲ್ಲಿಸಿ, ಮೋಕ್ಷ ಸಂಪದವಂನು ಅರಸಿಕೊಂಡು ಪಡೆಯುವ ಹಾಗೆ ಅನುಗ್ರಹಿಸ ಬೇಕೆಂದು ಬೇಡಿ ಕೊಳ್ಳುತ್ತೇವೆ. ಈ ಬಿಂನಹಂಗಳೆಲ್ಲಾ ನಂಮ ಆಳಿದವರಾದ ಜೇಸು ಕ್ರೀಸ್ತುವಿನ ತಿರು ಮುಖವಂನು ನೋಡಿ, ನಮಗೆ ಪಾಲಿಸಿರಿ, ಸ್ವಾಮಿ. ಆಮೆನ್ ಜೇಸು. (೧ ಪರಲೋಕದ, ೧ ನಮೋ ದೇವ ಮಂತ್ರ.)

ದನಗಳ ರೋಗದಲ್ಲಿ ಮಾಡುವ ಬೇಡುದಲೆ.

ಆಳಿದವರೇ, ಗುಲಾಮರು ದೇವರವರಂನು ಮಹಾ ದೈನ್ಯದೊಂದಿಗೆ ಆರಾಧಿಸಿ ಭಜಿಸಿ ನಮಸ್ಕರಿಸಿ, ನಿಂಮ ಕನಿಕರದ ಹೇರಳತ್ವವಂನು ಬೇಡಿ ಕೊಳ್ಳುತ್ತೇವೆ. ಕಠಿಣ ರೋಗದಿಂದ ಹಿಡಿಯಲ್ಪಟ್ಟಿರುವ ಈ ಮೃಗಗಳು, ದೇವರವರ ಆಶೀರ್ವಾದದಿಂದ ರೋಗ ನಿಲ್ಲ, ಸುಖಪಡೆದು, ಇಂನು ಮೇಲೆ ಯಾವದೊಂದು ಜಾಡ್ಯದಲ್ಲಿ ಬೀಳದ ಹಾಗೆ ಪಿಶಾಚಿಯ ಸಕಲ ದೋಷ ಬಲಗಳು ಇವುಗಳಂನು ಬಿಟ್ಟು ತೊಲಗಿ ಹೋಗ ಮಾಡ ಕರುಣಿಸಿರಿ, ಸ್ವಾಮಿ. ಸರ್ವ ದಯಾಪರರಾದ ಸರ್ವೇಶ್ವರಾ, ಇಂಥಾ ಮೃಗ ಜೀವಿಗಳು ನರರ ಜೀವಿಗಳಿಗೆ ಉಪಶಮನವಾಗಿ ನಿಂಮಿಂದ

ಕೊಡಲ್ಪಟ್ಟದ್ದರಿಂದ, ನರಜಾತಿಯ ಜೀವನಕ್ಕೆ ಅಗತ್ಯವಾಗಿ ಇರುವ ಇವುಗಳು ನಂಮ ಬದುಕಿನ ಅಕ್ಕರೆಗಳಿಗೆ ತಪ್ಪಿ ಹೋಗಳಾಡಿಸ ಬೇಡಿರಿಯೆಂತ ಮಹಾ ವಿನಯದೊಂದಿಗೆ ದೇವರವರಂನು ಬೇಡಿಕೊಳ್ಳುತ್ತಿದ್ದೇವೆ. ಇಂಥಾ ಬಿಂನಹಂಗಳು ನಂಮ ಆಳಿದವರಾಗಿರುವ ಜೇಸು ಕ್ರೀಸ್ತುವಿನ ಹೆಸರಿನಲ್ಲಿ ದಯಾಮಾಡಿ, ಸ್ವಾಮೀ. ಆಮೆನ್ ಜೇಸು.
(ತೀರ್ಥ ದನಗಳ ಮೇಲೆ ಚೆಲ್ಲುವದು.)

ಹುಳಗಳಿಂದ ಕೆಟ್ಟು ಹೋಗುವದಕ್ಕಿರುವ ಪೈರುಗಳಿಗೆ
ತಿರು ಸಭೆಯಿಂದ ನೇಮಿಸಲ್ಪಟ್ಟ
ಬೇಡುದಳೆ.

(ಉಪದೇಶಿ.) ಗಗನವಂನೂ, ಭೂಮಿಯಂನೂ ಸೃಷ್ಟಿಸಿದ ಸರ್ವೇಶ್ವರನಾದವರ ನಾಮದಿಂದ,

(ಜನರು.) ನಮಗೆ ಸಹಾಯವೂ ಮೇಲೂ ಉಂಟಾಗಲಿ.

(ಉ.) ಸ್ವಾಮೀ, ನಂಮ ಪ್ರಾರ್ಥನೆಯಂನು ಆಲೈಸಿಕೊಳ್ಳಿ.

(ಜ.) ನಾವು ಕೂಗುವ ಶಬ್ದ ನಿಂಮ ಸಂನಿಧಾನದ ಪರಿಯಂತರಕ್ಕೂ ಬರುವದಾಗಲಿ.

ಆಳಿದವರೇ, ನಾವು ಮಾಡುವ ಬೇಡುದಳೆಯಂನು ದೇವರವರು ಶ್ರವಣ ಧರ್ಮದಿಂದ ಕೇಳ ಕರುಣಿಸಬೇಕೆಂದು

ಬೇಡಿಕೊಳ್ಳುತ್ತೇವೆ. ಅದು ಹಾಗ್ಯೆಂದರೆ, ನಂಮ ಪಾಪಗಳಿಗೆ ನೀತಿಯುಳ್ಳ ಆಜ್ಞೆಯಾಗಿ ಬಂದ ಈ ಕುಳಿಗಳ ಉಪದ್ರವಂನು ದೇವರವರು ಕೃಪಾಕಟಾಕ್ಷದಿಂದ ನೋಡಿ, ನಿಂಮ ತಿರು ನಾಮಕ್ಕೆ ಸ್ತುತಿಯುಂಟಾಗುವ ಹಾಗೆ, ಇವುಗಳ ತಳ್ಳಿಬಿಡ ಕರುಣಿಸಿರಿ. ಹಾಗೆಯೇ ಇಂಥಾ ದುಷ್ಟ ಕುಳಿಗಳು ದೇವರವರ ಕಟ್ಟಳೇ ಬಲದಿಂದ ದೂರ ಬಿಸಾಡಲ್ಪಟ್ಟು ಹೋಗುವ ಹಾಗೂ, ಇಂಥಾ ಪೈರುಗಳು ವಿಘ್ನವಿಲ್ಲದೆ ಚಂನಾಗಿ ಬೆಳೆದು ಇದರಲ್ಲಿ ಉಂಟಾಗುವ ಫಲವು ನಿಂಮ ಕೈಂಕರ್ಯಕ್ಕೂ ನಂಮ ಜೀವನಕ್ಕೂ ಉಪಯೋಗವಾಗುವ ಹಾಗೂ ದಯಾಮಾಡಿ, ಸ್ವಾಮಿ. ಇಂಥಾ ಬಿಂನಹಂಗಳೆಲ್ಲಾ ನಂಮ ಆಳಿದವರಾಗಿರುವ ಜೇಸುಕ್ರೀಸ್ತುವಿನ ಮುಖವಂನು ನೋಡಿ ಅಂಗೀಕರಿಸಿರಿ, ಸ್ವಾಮಿ. ಆಮೆನ್ ಜೇಸು.

(ಮಹಾ ವಿಶ್ವಾಸ ಭಕ್ತಿಯೊಂದಿಗೆ ಹೊಲಗಳ ಮೇಲೆ ತೀರ್ಥವಂನು ಚೆಲ್ಲುವದು.)

ಸಪ್ತ ತಪ ಸಂಗೀತಗಳು.

ದಾವಿದೆಂಬ ರಾಯನು ಹಾಡಿದ ೧೫೦ ಸಂಗೀತಗಳಲ್ಲಿ ಸಪ್ತ ಗೀತಗಳಂನು ತಿರು ಸಭೆಯು ತಿಳಿದಾರಿಸಿಕೊಂಡು ತಪ ಜಪಗಳಾಗಿ ನೇಮಿಸಿದ ಕಾರಣ, ಪಾಪದ

ಮೇಲೆ ದುಃಖ ಮನಸ್ತಾಪಾರ್ಥವಾಗಿ ಅವುಗಳಂನು ನುಡಿದು ಬೇಡಿಕೊಳ್ಳುವದು, ಪೂರ್ವಿಕರ ಮೊದಲ್ಗೊಂಡು ವರ್ತಿಸುವ ಉತ್ತಮವಾದ ಸಂಪ್ರದಾಯವು. ಅವುಗಳು ಯಾವವಂದರೆ :—

ಮೊದಲನೇದು.—೬ ನೇ ಸಂಗೀತವು.

[ವ್ಯಾಧಿಷ್ಟನು ವೈದ್ಯನಂನು ಪ್ರಾರ್ಥಿಸುವ ಮೇರೆಗೆ, ಪಾಪದಿಂದ ಶುಷ್ಕಿಸಿ ಕ್ಷೋಭಿಸುವ ಆತ್ಮವು ಸರ್ವೇಶ್ವರನಂನು ಪ್ರಾರ್ಥಿಸಿ ಅವರ ಸಂನಿಧಿಯಲ್ಲಿ ಪ್ರಲಾಪಿಸಲಂನುಕುರಿತು, ಆಳಿದವರು ಅಂಥ ಪ್ರಲಾಪವಂನಾಲೈಸಲಂನುಕುರಿತು, ಪಾಡಿ ಇರುವದು.]

ಸ್ವಾಮೀ, ದೇವರವರು ಕೋಪೋದ್ರೇಕವಾಗಿರುವಲ್ಲಿ ನಂನಂನು ದಂಡಿಸ ಬೇಡಿರಿ; ನಿಂಮ ಕೋಪಾಗ್ನಿಯ ವೇಳೆಯೊಳು ನಂನಂನು ಧಿಕ್ಕರಿಸ ಬೇಡಿರಿ.

ನಾನೋ ಬಹು ಬಲಹೀನನು, ನಂನ ಮೇಲೆ ಕನಿಕರವಾಗಿರಿ; ನಂನ ಅಸ್ಥಿಗಳೆಲ್ಲಾ ಸಡಿಲಿ ಕದಲುತ್ತಾ ಇರುವದರಿಂದ, ನನಗೆ ಆರೋಗ್ಯವ ದಯ ಮಾಡಿ, ಸ್ವಾಮೀ.

ನಂನ ಆತ್ಮವೋ ಕೇವಲ ಕಳವಳಗೊಂಡಿರುತ್ತದೆ, ತಾವಾದರೆ ಎಷ್ಟು ಪರಿಯಂತ ನಂನಂನ್ನಾದರಿಸದಿರುವಿರಿ?

ಸ್ವಾಮೀ, ನನಗಭಿಮುಖವಾಗಿ ತಿರುಗಿರಿ, ನಂನ ಆತ್ಮವಂನು ಕರೆ ಶೇರಿಸಿರಿ, ನಿಂಮ ಕೃಪೆಗೋಸ್ಕರ ನಂನಂನು ರಕ್ಷಿಸಿ ಕೊಳ್ಳಿ.

ಯಾಕಂದರೆ ಮರಣದಂತಸ್ತಿನಲ್ಲಿ ನಿಂಮಂನು ಸ್ಮರಿಸುವವನು ಯಾವನೂ ಇಲ್ಲ; ನರಕದೊಳಗೆ ನಿಂಮಂನು ಸ್ತುತಿಸುವವನು ಯಾರು?

ಪ್ರಲಾಪ ಮಾಡಿ ಕೇವಲ ಕಂಗೆಟ್ಟು ಕೊಂಡೆನು; ರಾತ್ರಿ ಕಾಲವೆಲ್ಲಾ ನಂನ ಕಂಣೀರಿನಿಂದ ನಂನಾಶಯುವ ತೊಳೆದು, ನಂನ ಬಾಷ್ಪಗಳಿಂದ ನಂನ ಹಾಸಿಕೆಯಂನು ತೋಯಿಸಿ ಕೊಳ್ಳುತ್ತಾ ಇದ್ದೇನೆ.

ಕೋಪಾಗ್ನಿಯಿಂದ ನಂನ ಕಂಣುಗಳು ಕಲಗಿ ಕೆಂಪು ಬಿದ್ದವು; ನಂನ ಸಕಲ ವೈರಿಗಳ ಮಧ್ಯದಲ್ಲಿ ಬರು ದಿನಗಳ ತಗಲಿ ಕೊಂಡು ನರೆದು ಮುಪ್ಪಾದೆನು.

ಆಳಿದವರು ನಂನ ರೋದನದ ಧ್ವನಿ ಆಲೈಸ ಚಿತ್ತೈಸಿದರು; ಆದಕಾರಣ, ದುಷ್ಕೃತ್ಯಗಳಲ್ಲಿ ಪ್ರವರ್ತಿಸುವವರುಗಳಿರಾ, ನೀವೆಲ್ಲರು ನಂನಂನು ಅಗಲಿ ತೊಲಗಿರಿ.

ಆಳಿದವರು ನಂನ ಮನವಿ ಆಲೈಸಿ, ನಂನ ವಿಜ್ಞಾಪನೆ ಅಂಗೀಕರಿಸಿದರು.

ನಂನ ಶತ್ರುಗಳೆಲ್ಲರು ಲಜ್ಜಿತರಾಗಿ ಬಹಳವಾಗಿ ಕಳವಳ ಪಡುವರಾಗಲಿ: ಅತಿವೇಗದಲ್ಲಿ ಖಿಂನರಾಗಿ ಹೀನತೆ ಪಟ್ಟು ಹಿಂತೆಗದು ಹೋಗುವರಾಗಲಿ.

ಪಿತನಿಗೂ ಸುತನಿಗೂ ಸ್ಪೀರಿತು ಸಾಂತುವಿಗೂ:

ಆದಿಯಲ್ಲಿ ಇದ್ದ ಹಾಗೆ ಈಗಲೂ ಸದಾ ಕಾಲವೂ ಸ್ತೋತ್ರ ಉಂಟಾಗಲಿ.

೨ ನೇದು. —. ೩೧ ನೇ ಸಂಗೀತವು.

[ಸುಮನಡೊಂದಿಗೆ ಪಾಪವ ವಿಸರ್ಜಿಸಿ ಸರ್ವೇಶ್ವರನ ಪಾದ ಶೇರುವಿಕೇ ಉದ್ದಿಶ್ಯವಾಗಿಯೂ, ಸ್ವಾಮಿ ನಂಮ ಇಕ್ಕಟ್ಟಿನಲ್ಲಿ ಶರಣವೂ ಸಜ್ಜನರಿಗೆ ಆನಂದವೂ ದುರ್ಜನರಿಗೆ ಹಾನಿಯೂ ಆಗಿದ್ಧಾರೆಂದು ಉದ್ದಿಶ್ಯವಾಗಿಯೂ, ಪಾಡಿ ಇರುವದು.]

ಯಾವರ್‍ಯಾವರ ಅಕ್ರಮಗಳು ಕ್ಷಮಿಸಲ್ಪಟ್ಟಿವೆಯೋ, ಅಂಥವರು ಭಾಗ್ಯವಂತರು; ಯಾವರ್‍ಯಾವರ ಪಾಪಗಳು ಮುಚ್ಚಲ್ಪಟ್ಟಿವೆಯೋ, ಅವರೂ ಭಾಗ್ಯವಂತರು.

ಯಾವನ್ಯಾವನ ಪಾಪವು ತಂನ ಮೇಲೆ ಹೊರಿಸಲ್ಪಡದಿರುವದೋ, ಅವನು ಭಾಗ್ಯವಂತನು; ಯಾವನ ಮನಸ್ಸು ನಿಷ್ಕಪಟವಾಗಿಧೆಯೋ, ಅಂಥವನೂ ಭಾಗ್ಯವಂತನು.

ನಾನು ನಂನ ಪಾಪವ ಬೈಲು ಮಾಡದೆ ಮೌನಿಯಾಗಿದ್ದು ದಿನವೆಲ್ಲಾ ದುಃಖಾಲಾಪವ ಮಾಡಿ ಕೊಂಡದ್ದರಿಂದ, ನಂನ ಅಸ್ಥಿಗಳೆಲ್ಲಾ ನಲುಗಿ ಕ್ಷೀಣ ಹೋಗಿದ್ದವು.

ಯಾಕಂದರೆ ತಂಮ ಹಸ್ತದ ಭಾರವು ಅಹೋರಾತ್ರಿ ನಂನ ಮೇಲೆ ಹೊತ್ತಿದ್ದ ಕಾರಣ, ಶಲ್ಯ ಚುಚ್ಚಿಳಿದೋ ಪಾದೆ ಕಠಿಣ ವ್ಯಥೆಯಂ ಪಟ್ಟು ಆದಾಟ ಸಂಕಟವಾಗಿ ಹೊರಳಿ ಕೊಂಡಿದ್ದೆನು.

ನಂನ ಪಾಪವಂನು ನಿಮಗೆ ತಿಳಿಸಿದೆನು, ನಂನ ಅನ್ಯಾಯುವ ನಿಮಗೆ ಮಾಜಿದವನಲ್ಲ.

ನನಗೆ ತಾನೇ ವಿರೋಧವಾಗಿ ನಂನ ಅಕ್ರಮವಂನು ಆಳಿದವರ ಬಳಿಯಲ್ಲಿ ಬಹಿರಂಗ ಮಾಡುವೆನೆಂಧೇಳಿದೆನು. ಆ ಕ್ಷಣವೇ ತಾವು ನಂನ ಪಾಪ ದೋಷವ ಪರಿಹರಿಸಿ ಚಿತ್ತೈಸಿದಿರಿ.

ಇದರ ನಿಮಿತ್ತವೇ ಪುಣ್ಯಾತ್ಮರೆಲ್ಲರು ಕಾಲೋಚಿತ ನೋಡಿ ನಿಂಮಂನು ಪ್ರಾರ್ಥಿಸಿ ಕೊಳ್ಳುವರು.

ಈ ಪ್ರಕಾರ ಮಹಾ ಜಲಪ್ರವಾಹವು ಅವರ ಮಟ್ಟಿಗೆ ಏರಲಾರದು.

ನಂನಂನು ಸುತ್ತಿಕೊಂಡಿರುವ ಆಪತ್ತುಗಳಲ್ಲಿ ನನಗೆ ದಿಕ್ಕು ನೀವೇ, ಸಂತೋಷವು ನೀವೇ, ನಂನಂನು ಪರಿವೇಷ್ಟಿಸಿ ಕೊಂಡಿರುವವರೊಳಗಿಂದ ಕಾಪಾಡಿ ರಕ್ಷಿಸಿರಿ.

ನೀನು ನಡೆಯ ಬೇಕಾದ ಮಾರ್ಗವಂನು ನಿನಗೆ ಕಲಿಸಿಕೊಟ್ಟು, ನಿನಗೆ ಭಾವಜ್ಞವಂನು ಪಾಲಿಸಿ, ನಿಂನ ಮೇಲೆ ನಂಮ ದೃಷ್ಟಿ ಇರಿಸುವೆವು.

ಜ್ಞಾನ ಹೀನವಾದ ಕುದರೆಯು ಹಾಗೂ ಹಾಸರ ಗತ್ತೆಯುಹಾಗೂ ಇರ ಬೇಡಿರಿ;

ನಿಂಮ ಬಳೀಲಿ ಶೇರದ ಇಂಥ ಮೃಗಗಳ ಬಾಯಂನು ಲಗಾಮುಗಳಿಂದಲೂ ಕಡಿವಾಳದಿಂದಲೂ ಬಿಗಿಸಿ ಬಂಧನೆ ಮಾಡಿರಿ.

ದುಷ್ಟರಿಗೆ ಅನೇಕಾಜ್ಞೆಗಳುಂಟು, ಆದರೆ ಕರ್ತರ ಮೇಲೆ ಭಕ್ತಿ ನಂಬಿಕೆಯುಳ್ಳವರಂನು ದೇವ ಕೃಪೆಯು ಸುತ್ತಿಕೊಂಡಿರುವದು.

ಸನ್ಮಾರ್ಗಸ್ಥರುಗಳಿರಾ, ಆಳಿದವರಲ್ಲಿ ಉಲ್ಲಾಸಿಸಿ ಸಂತೋಷಪಡಿರಿ, ಮನಶುದ್ಧಿಯುಳ್ಳವರೇ, ನೀವೆಲ್ಲರೂ ಅವರಲ್ಲಿ ಉತ್ಸಾಹ ಪಡಿರಿ.

ಪಿತನಿಗೂ, ಸುತನಿಗೂ. . . . .

---

೩ ನೇದು.—೩೭ ನೇ ಸಂಗೀತವು.

[ತಮ್ಮ ಪಾಪಗಳಿಂದ ತಾವೇ ಬಿದ್ದಿದ್ದ ಕೇವಲ ನಿರ್ಭಾಗ್ಯವಂನು ಸರ್ವೇಶ್ವರನಿಗೆ ಬೈಲು ಮಾಡುವದಕ್ಕೂ, ದೃಢ ನಂಬಿಕೆಯೊಂದಿಗೂ ಮಹಾ ಮನೋದೈನ್ಯದೊಂದಿಗೂ ಕರ್ತರ ಕನಿಕರವಂನು ಬೇಡಿಕೊಳ್ಳುವದಕ್ಕೂ, ದಾವಿದೆಂಬವರು ಪಾಡಿದ ಸಂಗೀತವು.]

ಸ್ವಾಮಿ, ದೇವರವರು ಕೋಪೋದ್ರೇಕವಾಗಿರುವಲ್ಲಿ ನಂನಂನು ದಂಡಿಸ ಬೇಡಿರಿ; ಕೋಪಾಗ್ನಿಯ ವೇಳೆಯೊಳು ನಂನಂನು ಧಿಕ್ಕರಿಸ ಬೇಡಿರಿ.

ಯಾಕಂದರೆ ನೀವು ಬಿಟ್ಟ ಬಾಣಗಳು ನಂನಂನು ತಿವಿದು ನಾಟಿ ಕೊಂಡಿದ್ದವು, ನಿಂಮ ಹಸ್ತದ ಭಾರವು ನಂನ ಮೇಲೆ ಕೊತ್ತು ಕೊಂಡಿತೆ.

ನಿಮ್ಮ ಕೋಪದ ನೋಟಕ್ಕೆ ನಂನ ಮಾಂಸದಲ್ಲಿ ಸುಖ ಕ್ಷೀಣ ಹೋಯಿತು; ನಂನ ಪಾಪಗಳ ನೋಟಕ್ಕೆ ನಂನ ಅಸ್ಥಿಗಳದರಿ ಕಲಕಲಗಿ ಬಿದ್ದವೆ.

ಯಾಕಂದರೆ ನಂನ ದುಷ್ಕೃತ್ಯಗಳು ನಂನ ತಲೆಗೆ

ಮೀರಿ ಏರಿದವೆ, ಮೋಪಾದ ಬಲುವಾಗಿ ನಂನಂನು ಅಮುಕಿ ಕುಂಗಿಸುತ್ತವೆ.

ನಂನ ಮತೀ ಹೀನತ್ವದಿಂದ ನಂನ ಘಾಯಗಳು ಕೊಳೆತು, ಕೀವು ತುಂಬಿ, ದುರ್ಗಂಧ ಬಡಿಯುತ್ತವೆ.

ನಾನು ಕೇವಲ ದೀನನಾಗಿ, ದೇಹವು ತಾರಿ ಕುಂಗಿ ಬಿತ್ತು; ದಿನವೆಲ್ಲಾ ದುಃಖದಿಂದ ಮುಖವು ಬಾಡಿ ತಿರುಗಾಡುತ್ತೇನೆ.

ಯಾಕಂದರೆ ನಂನ ನಡುವು ಅಗ್ನಿ ಆವೇಶವಾಗಿ ಉರಿಯುತ್ತಿಧೆ; ನಂನ ದೇಹದಲ್ಲಿ ಸ್ವಸ್ಥಾಮಿಷವೂ ಇಲ್ಲ.

ನಾನು ಬಹು ಕ್ಲೇಶಕ್ಕೂ ಬಹು ಹೀನತೆಗಳಿಗೂ ಒಳಗಾದೆನು, ಆದ್ದರಿಂದ ನಂನ ಹೃದಯಾಂಗಲಾಪದಿಂದ ಅರ್ಭಟಿಸುತ್ತೇನೆ.

ನಂನ ಆಳಿದವರೇ, ನಂನ ಆಶೆಗಳೆಲ್ಲವು ತಮಗೆ ತಿಳಿದಿರುತ್ತವೆ; ನಂನ ಪ್ರಲಾಪವು ತಮಗೆ ಮರೆದಿರುವದಿಲ್ಲ.

ನಂನ ಹೃದಯವು ಕಳವಳ ಪಟ್ಟಿತು, ನಂನ ಶಕ್ತಿ ಕೈಬಿಟ್ಟು ಹೋಯಿತು; ನಂನ ಕಂಣುಗಳ ದೃಷ್ಟಿಯೋ, ಅದು ಸಹ ಮಬ್ಬು ಬಿದ್ದು ಹೋಯಿತು.

ನಂನ ಕಳತ್ರರೂ ಮಿತ್ರರೂ ನನಗೆ ಎದುರಿಸಿ ಹತ್ರ ಬಂದು, ವಿರೋಧವಾಗಿ ನಿಂತಿರುತ್ತಾರೆ;

ನಂನ ನೆರೆಯವರು ತೊಲಗಿ ದೂರ ನಿಂತರೂ, ನಂನ ಪ್ರಾಣವ ಹಾನಿಮಾಡ ನೆನಸಿದವರು ನನಗೆ ಬಹಳ ಬಲೋದ್ಬಂಧ ಮಾಡುತ್ತಿದ್ದರು.

ನನಗೆ ಕೇಡು ಹುಡುಕುವವರು ನಂನ ಸಂಗಡ ವ್ಯರ್ಥ

ಮಾತುಗಳಾಡಿ, ದಿನವೆಲ್ಲಾ ನಂನಂನು ಮೋಸಗೊಳಿಸುವ ಬಗೆಯಂನು ಯೋಜಿಸುತ್ತಿದ್ದರು.

ನಾನಾದರೆ ಕಿವಿ ಕೇಳದ ಕಿವಡನಂತೆಯೂ, ಬಾಯಿ ಬಾರದ ಮೂಗನಂತೆಯೂ ಇದ್ದೆನು.

ನಾನು ಕೇಳ ಕಿವಿಯಿಲ್ಲದವನೂ, ಪ್ರತ್ಯುತ್ತರವ ಕೊಡ ನಾಲಿಗೆ ಇಲ್ಲದವನೂ ಆದೆನು.

ಯಾಕಂದರೆ, ಸ್ವಾಮಿ, ನಿಂಮಂನು ನಂಬಿ ಇದ್ದೆನು, ಸರ್ವೇಶ್ವರಾ ಸ್ವಾಮಿ, ನಂನ ವಿಜ್ಞಾಪನೆ ಆಲೈಸುವಿರಿ.

ನಂನ ಕಾಲು ತಡಬಡುವಾಗ ನಂನಂನು ದೂಷಿಸಿದ ನಂನ ವೈರಿಗಳು ಇನ್ನೂ ನನ್ನನ್ನುನೋಡಿ ಸಂತೋಷಿಸದಂತೆ, ನಿಮಗೆ ಮನವಿ ಮಾಡಿಕೊಂಡಿದ್ಧೇನೆ.

ಆದಾಗ್ಯೂ ದಂಡನೆಗಳಿಗೆ ನಾನು ಸಿದ್ಧವಾಗಿದ್ಧೇನೆ; ನನ್ನ ದುಖ್ಖವು ಎಡೆಬಿಡದೆ ನಂನ ಕಂಣಿಗೆ ಮುಂದಿದ್ದು ಕೊಂಡಿರುತ್ತೆ.

ಯಾಕಂದರೆ ನಂನ ಅಕ್ರಮವಂನು ಹೇಳಿ ತೋರಿಸುವೆನು, ನಂನ ಪಾಪಕ್ಕೋಸ್ಕರ ದುಃಖಿಸಿ ಚಿಂತಿಸುವೆನು.

ಆದರೆ ನಂನ ವೈರಿಗಳು ಜೀವದೊಂದಿಗೆ ಇದ್ದು ನನಗಿಂತ ಬಲವುಳ್ಳವರಾಗಿದ್ಧಾರೆ; ಅನ್ಯಾಯವಾಗಿ ನಂನಂನು ಹಗೆಮಾಡುವವರು ಪ್ರಬಲವಾದರು.

ನಾನು ಮೇಲುತನವ ಅನುಸರಿಸುತ್ತಿರುವ ಕಾರಣ, ಮೇಲಿಗೆ ಬದಲು ಕೇಡು ಮಾಡುವವರು ನಂನಂನು ದೂರು ಪಡಿಸುತ್ತಾರೆ.

ನಂನ ಸರ್ವೇಶ್ವರಾ ಸ್ವಾಮೀ, ನಂನಂನು ಕೈಯಿಬಿಡಬೇಡಿರಿ, ನಂನಂನು ಬಿಟ್ಟು ತೊಲಗಬೇಡಿರಿ.

ನನಗೆ ರಕ್ಷಣ್ಯವಾಗಿರುವಂಥ ಸರ್ವೇಶ್ವರಾ ಸ್ವಾಮೀ, ಶೀಘ್ರವಾಗಿ ಬಂದು ಸಹಾಯವ ಪ್ರಸಾದಿಸ ಕರುಣಿಸಿರಿ.

ಪಿತನಿಗೂ, ಸುತನಿಗೂ.....

೪ ನೇದು. — ೫೦ನೇ ಸಂಗೀತವು.

[ತಂಮ ಕಂಣಿಗೆದುರಾಗಿ ಯಾವಾಗಲಿದ್ದ ತಂಮ ಪಾಪಗಳ ನಿಮಿತ್ತ ಸರ್ವೇಶ್ವರನನ್ನು ನೋಡಿ ಪ್ರಲಾಪಿಸಿ, ಪಾಪದೋಷದಿಂದ ತಂಮನ್ನು ಅಧಿಕಧಿಕವಾಗಿ ಶುಚಿಕರಿಸಬೇಕೆಂಬದಾಗಿಯೂ, ತಮಗೆ ವರಪ್ರಸಾದಗಳಂನೂ ನೂತನ ಹೃದಯವಂನೂ ಪಾಲಿಸಬೇಕೆಂಬದಾಗಿಯೂ ಸರ್ವೇಶ್ವರಂನ ಬೇಡಿಕೊಂಡು, ಮತ್ತೂ ದೈನ್ಯ ಮನಸ್ತಾಪವುಳ್ಳಂಥ ಹೃದಯವೇ ದೇವರಿಗೆ ಸಮರ್ಪಕವಾದ ಬಲಿ ಎಂಥೇಳಿ ದಾವಿದೆಂಬವರು ಪಾಡಿದ ಸಂಗೀತವು.]

ಸರ್ವೇಶ್ವರಾ ಸ್ವಾಮೀ, ತಂಮ ಕೃಪೆಯ ವಿಶಾಲತೇ ಪ್ರಮಾಣದಲ್ಲಿ ನಂನ ಮೇಲೆ ಕನಿಕರವಾಗಿರಿ;

ತಂಮ ಅಂತಃಕರುಣಾದಿಗಳ ಹೇರಳತ್ವದ ಪ್ರಕಾರವಾಗಿ ನಂನ ದುಷ್ಕೃತ್ಯವಂನು ನಿರ್ಮೂಲಮಾಡ ಕರುಣಿಸಿರಿ.

ಇಂನೂ ಅಧಿಕವಾಗಿ ನಂನ ಅಕ್ರಮದಿಂದ ನಂನಂನು

ತೊಳೆದು, ನಂನ ಪಾಪದಿಂದ ನಂನಂನು ಬಿಡಿಸಿ ಶುಚಿಕರಿಸಿರಿ.

ನಾನಾದರೆ ನಂನ ಅಕ್ರಮವ ತಿಳಿದಿರುತ್ತೇನೆ; ನಂನ ಪಾಪವು ನಂನ ಕಂಣಿಗೆ ಮುಂದಾಗಿ ನೆಲೆ ನಿಂತಿರುತ್ತದೆ.

ನಿಮಗೆ ಮಾತ್ರವೇ ನೇರವಂನು ಮಾಡಿದೆನು; ನಿಂಮ ಸಂನಿಧಿಯಲ್ಲಿಯೇ ಪಾಪವ ನೆರವೇರಿಸಿದೆನು. ತಾವು ನಿಮ್ಮ ವಾಗ್ದತ್ತಗಳಲ್ಲಿ ಪ್ರಮಾಣಿಕ್ಯಸ್ತರಾಗಿದ್ಧೀರಿ ಎಂತಲೂ, ನಿಮ್ಮ ತೀರ್ವೆಯೊಳು ನೀತಿಪರರಾಗಿದ್ಧೀರಿ ಎಂತಲೂ ಪ್ರತ್ಯಕ್ಷವಾಗುವಹಾಗೆ ನಂನ ತಪ್ಪು ಪಾಪಗಳ ಕ್ಷಮಿಸಿರಿ.

ಇಗೋ ನಾನು ಅಕ್ರಮದಲ್ಲಿ ಜನ್ಮಿಸಿದೆನು; ನಂನ ತಾಯಿ ಪಾಪದೋಷದಲ್ಲಿ ನಂನಂನು ಗರ್ಭಧರಿಸಿದಳು.

ನೀವು ಸತ್ಯವ ಸ್ನೇಹಿಸಿ, ನಿಮ್ಮ ಪರಮ ಜ್ಞಾನದ ರಹಸ್ಯಗಳಂನು ನನಗೆ ಬಹಿರಂಗ ಪಡಿಸಿದಿರಿ.

ನೀವು ಇಸೋಪೆಂಬ ತೃಣದಿಂದ ನಂನಂನು ಪ್ರೋಕ್ಷಿಸಿದಿರಿಯಾದರೆ, ನಾನು ಪವಿತ್ರನಾಗುವೆನು; ತಾವು ನಂನ ತೊಳೆಯುವಿರಿ; ಆಗ ನಾನು ಹಿಮಕ್ಕಿಂತ ಶುದ್ಧ ಬಿಳುಪಾಗುವೆನು.

ನಂನ ಕರ್ಣಗಳಿಗೆ ಆನಂದವಂನೂ ಸಂತೋಷವಂನೂ ದಯಾಮಾಡುವಿರಾದರೆ, ತಲ್ಲಣವಾಗಿ ಬಿದ್ದಿರುವ ನಂನ ಎಲುಬುಗಳು ದೃಢಪಟ್ಟು ಎದ್ದು ಆನಂದಿಸುವವು.

ನಂನ ಪಾಪಗಳಿಗೆ ಹಿಮ್ಮುಖವಾಗಿ ತಿರುಗಿರಿ; ನಂನ ಅಕ್ರಮಗಳೆಲ್ಲಾ ಅಳಿಸಿಬಿಡಿರಿ.

ಸರ್ವೇಶ್ವರಾ, ನನ್ನೊಳ್ ನಿರ್ಮಲ ಹೃದಯವ ಸೃಷ್ಟಿಸಿರಿ, ನಂನ ಅಂತರಂಗದೊಳಗೆ ನೀತಿಮಾರ್ಗವುಳ್ಳ ಬುದ್ಧಿಯಂನು ನೂತನವಾಗಿ ಏರ್ಪಡಿಸಿರಿ.

ನಿಂಮ ಸಮುಖದಿಂದ ನಂನಂನು ಹೊರಡಿಸ ಬೇಡಿರಿ; ನಿಂಮ ಪರಿಶುದ್ಧ ಜ್ಞಾನವಂನೂ ನಂನ ವಶದಿಂದ ಹಿಂತೆಗದುಕೊಳ್ಳ ಬೇಡಿರಿ.

ನಿಮ್ಮ ರಕ್ಷಣ್ಯದಾನಂದವನ್ನು ಪುನಶ್ಚ ನನಗೆ ಪಾಲಿಸಿರಿ; ನಿಮ್ಮ ವಿಶೇಷವಾದ ಜ್ಞಾನದಿಂದ ನಂನಂನು ದೃಢಪಡಿಸಿರಿ.

ಅನೀತಿವಂತರಿಗೆ ನಿಂಮ ಮಾರ್ಗವಂ ಬೋಧಿಸುವೆನು, ದುಷ್ಟರುಗಳೆಲ್ಲರು ನಿಂಮ ಪಾರ್ಶ್ವವಾಗಿ ತಿರುಗುವರು.

ಸರ್ವೇಶ್ವರಾ, ನಂನ ರಕ್ಷಕರಾದ ದೇವರೇ, ರಕ್ತದ ಅಪರಾಧಗಳಿಂದ ನಂನಂನು ಬಿಡಿಸಿ ಬಿಡಿ; ಆಗಲೇ ನಂನ ನಾಲಿಗೆಯು ನಿಮ್ಮ ನೀತಿಯಂನು ಹೊಗಳಿ ಸ್ತುತಿಸುವದು.

ಆಳಿದವರೇ, ನಂನ ತುಟಿಗಳಂನು ತೆರೆಯ ಕರುಣಿಸಿರಿ, ನಂನ ಬಾಯಿ ನಿಂಮ ಮಹಿಮೆಯಂನು ಪ್ರಕಟಿಸುವದು.

ಆಳಿದವರೇ, ತಮಗೆ ಬಲಿ ಬೇಕಾಗಿದ್ದರೆ ನಿಜವಾಗಿ ನಾನು ಬಲಿಸಮರ್ಪಿಸುವೆ; ಆದರೆ ಸರ್ವಾಂಗ ದಹನಗಳು ತಮಗೆ ಪ್ರೀತಿಯಾಗಿರುವದಿಲ್ಲ.

ದುಃಖಿಸಿ ತಲ್ಲಣಿಯಾದ ಹೃದಯವೇ ಕರ್ತರಿಗೆ ಪ್ರೀತಿಕರ ಬಲಿಯಾಗಿದೆ; ಪಶ್ಚಾತ್ತಾಪದಿಂದ ಜಜ್ಜಿ ದೈನ್ಯವು ಪಡುವಂಥ ಹೃದಯವಂನು, ಕರ್ತರೇ, ತಾವು ತಿರಸ್ಕರಿಸುವವರು ಅಲ್ಲ.

ಆಳಿದವರೇ, ನಿಮ್ಮ ಅಂತಃಕರುಣದಿಂದ ಸಿಯೋನೆಂಬ ಪರ್ವತದ ಮೇಲೆ ಕೃಪಾಕಟಾಕ್ಷವಾಗಿರಿ; ಜೆರೂಸಲೇಮಿನ ಅಲಂಗಗಳು ಕಟ್ಟಲ್ಪಡುವಂತೆ ದಯಾಮಾಡಿ.

ಆಗಲು ನೀತಿಯ ಬಲಿಯೂ ಸರ್ವಾಂಗ ದಹನ ಬಲಿಯೂ ಅರ್ಪಣೆಗಳೂ ತಮಗೆ ಸಮರ್ಪಕವಾಗುವವು; ಆಗಲೂ ಕಂದುಗಳಂನು ಬಲಿಯಾಗಿ ನಿಮ್ಮ ಪೀಠದ ಮೇಲೆ ಅರ್ಪಿಸುವರು.

ಪಿತನಿಗೂ, ಸುತನಿಗೂ....

೫ ನೇದು.— ೧೦೧ ನೇ ಸಂಗೀದವು.

[ದುಃಖಾಕ್ರಾಂತದಲ್ಲಿ ಬಿದ್ದು ದೀನನು ಸರ್ವೇಶ್ವರನ ಬಳಿಗೆ ಒಪ್ಪಿಸುವಂಥ ಜಪ ಪ್ರಾರ್ಥನೆಗಳು.]

ಆಳಿದವರೇ, ನಂನ ಮನವಿ ಆಲೈಸ ಕರುಣಿಸಿರಿ; ನನ್ನ ಅಭಯಧ್ವನಿ ನಿಮ್ಮ ಸನ್ನಿಧಿಯ ಪರಿಯಂತ ಸೇರಲಿ.

ನನಗೆ ನೀವು ವಿಂಮುಖವಾಗಿ ತಿರಿಗಿಕೊಳ್ಳ ಬೇಡಿರಿ; ನಾನು ಸಂಕಟಪಡುವ ಯಾವದಿನದಲ್ಲ್ಯಾದರೂ ನಂನ ದಿಕ್ಕು ಓರೆಕಿವಿಯಾಗಿ ಕೇಳಿರಿ.

ನಾನು ಎಂದಿನದಲ್ಲಿ ನಿಂಮಂನು ಬೇಡಿಕೊಳ್ಳುವೆನೋ, ನಂನ ಪ್ರಾರ್ಥನೆ ತೀವ್ರವಾಗಿ ಕೇಳಕರುಣಿಸಿರಿ.

ಯಾಕೆಂದರೆ ನಂನ ದಿನಗಳು ಹೊಗೆಯೋಪಾದಿ

ಹಾರಿಹೋದವೆ; ನಂನ ಅಸ್ಥಿಗಳು ಸುಬ್ಬಲುಗಳ ಹಾಗೆ ಗರಿಲಾದವು.

ನಂನ ಆಹಾರ ಭೋಜಿಸ ಮರೆತದ್ದರಿಂದ, ನಂನ ಹೃದಯವು ಒಣಗಲಾಗಿ, ಬಿಸಲಿನಲ್ಲಿ ಗರಿಲಾದ ಹುಲ್ಲಿನ ಹಾಗೆ ನಾನು ಕೀದಿಹೋದೆನು.

ನಂನ ನಿಟ್ಟುಸುರಿನ ರೋದನದಿಂದ ಖಂಡವೆಲ್ಲ ಕರಗಿ ನಂನ ಚರ್ಮದೊಂದಿಗೆ ಅಸ್ಥಿಗಳಂಟಿಕೊಂಡಿವೆ.

ಅರಣ್ಯದಲ್ಲಿ ಏಕಾಂಗಿಯಾಗಿರುವ ಪೆಲಿಕಾನವೆಂಬ ಪಕ್ಷಿಯ ಹಾಗೂ, ಏಕಾಂತ ವನದಲ್ಲಿರುವ ಗೂಬೆಯ ಹಾಗೂ ಆದೆನು.

ನಿದ್ರೆ ಮರೆತೆನು, ಒಂಟಿಯಾಗಿ ಮಾಳಿಗೆಯ ಮೇಲೆ ಕೂತುಕೊಂಡಿರುವ ಪಕ್ಷಿಯ ಹಾಗಿದ್ದೆನು.

ನಂನ ವೈರಿಗಳು ದಿನವೆಲ್ಲಾ ದೂಷಿಸಿ ಕೊಂಡು ಬರುತ್ತಾರೆ; ನಂನಂನು ಹೊಗಳುತ್ತಿದ್ದವರೂ ನನಗೆದುರಾಗಿ ಶಪನೆ ಸಾಧಿಸುತ್ತಾರೆ.

ಅದು ಯಾಕಂದರೆ, ನಾನು ಭೋಜನದಂತೆ ಬೂದಿ ಭುಜಿಸಿ ಇದ್ದೆನು; ನೀರಿನೊಂದಿಗೆ ಕಂಣೀರಂನು ಬೆರಸಿ ಪಾನ ಮಾಡುತ್ತಿದ್ದೆನು.

ನಿಂಮ ಶಟ್ಟಿನ ನಿಂಮ ಕೋಪಾಗ್ನಿಯ ನೋಟದಿಂದ ನಾನು ಹೀಗೆ ಮಾಡಿದೆ; ಯಾಕಂದರೆ ನೀವು ನಂನ ಎತ್ತಿ ಕುಕಿ ಕೆಡವಿದಿರಿ.

ನಂನ ದಿವಸಗಳು ನೆರಳಿನ ಹಾಗೆ ಬಗ್ಗಿದವು; ನಾನೋ

ಹುಲ್ಲಿನಂತೆ ಒಣಗಿದೆನು.

ಆದರೆ, ಕರ್ತರಾದವರೇ, ತಾವು ಸದಾ ಕಾಲಂತರಗಳಲ್ಲಿ ಇರುವಂಥ ನಿತ್ಯರೂ; ನಿಂಮ ತಿರು ನಾಮದ ಸ್ಮರಣೆಯೂ ಎಂದೆಂದಿಗೂ ಶಾಶ್ವತವಾಗಿ ನಿಂತಿರುವದು.

ಸಿಯೋನೆಂಬ ಪಟ್ಟಣಕ್ಕೆ ಕೃಪೆ ಪ್ರಾಪ್ತಿಸುವಂಥ ಕಾಲವು ಸಮೀಪಿಸಿ ಸಂಗತಿಸಿರುವ ಕಾರಣ, ದೇವರವರು ಎದ್ದು ಅದರ ಮೇಲೆ ಕನಿಕರವಾಗಿರುವಿರಿ.

ಯಾಕಂದರೆ ನಿಂಮ ಸೇವಕರು ಆ ನಗರದ ಒಡಕು ಬಿದ್ದ ಕಲ್ಲುಗಳಂನು ಪ್ರೀತಿ ಮಾಡುತ್ತಿದ್ದರು; ಅದರ ಭೂಮಿಗೆ ಕನಿಕರಿಸುವರು.

ಆಳಿದವರೇ, ನಿಮ್ಮ ತಿರು ನಾಮಕ್ಕೆ ಸಕಲ ಜನಾಂಗಗಳೂ, ನಿಮ್ಮ ಮಹಿಮೆಗೆ ಭೂಪತಿ ಸಮಸ್ತರೂ ಅಂಜಿಕೊಳ್ಳುವರು.

ಅದೇನಂದರೆ ಸಿಯೋನೆಂಬ ನಗರವ ಆಳಿದವರು ಕಟ್ಟಿಸಿ, ತಂಮ ಮಹಿಮೇ ಪ್ರತಾಪದೋಳ್ ಪ್ರತ್ಯಕ್ಷವಾಗುವರು.

ಅವರು ದೀನರ ಬಿಂನಹಂಗಳಿಗೆ ಕಟಾಕ್ಷಿಸಿದ್ದಲ್ಲದೆ, ಅವರ ಜಪವಂನು ಅಲಕ್ಷ್ಯ ಮಾಡಲಿಲ್ಲ.

ಇಂನು ಮೇಲೆ ಬರ ಹೋಗುವ ಸಂತತಿಗೋಸ್ಕರ ಇದು ಬರೆದಿರಿಸಲ್ಪಡಲಿ; ಜನ್ಮಿಸುವದಕ್ಕಿರುವಂಥ ಜನರು ಕರ್ತರಾದವರಂನು ಸ್ತುತಿಸುವರು.

ಯಾಕಂದರೆ ಆಳಿದವರು ತಂಮ ಪರಿಶುದ್ಧ ಸ್ಥಳದೋನ್ನತದಿಂದ ಕಟಾಕ್ಷ ದೃಷ್ಟಿ ಇಟ್ಟರು.

ಸಂಕೋಲೆ ಪಟ್ಟಿರುವವರ ಪ್ರಲಾಪವಂನಾಲೈಸುವ ಹಾಗೂ, ಕೊಲೆ ಪಟ್ಟವರ ಮಕ್ಕಳಂನು ಕಟ್ಟುಬಿಚ್ಚಿ ಬಿಡಿಸುವ ಹಾಗೂ;

ಈ ಪ್ರಕಾರ ವಿಮೋಚನೆಯಾದವರ ಜನಗಳೂ ಅರಸುಗಳೂ ಆಳಿದವರಿಗೆ ತಿರು ಶೇವೆ ಶೇವಿಸ ಏಕವಾಗಿ ಕೂಡಿ ಇರುವಾಗ;

ಸಿಯೋನೆಂಬ ಪಟ್ಟಣದಲ್ಲಿ ಕರ್ತರಾದವರ ತಿರು ನಾಮವನ್ನು ಕೊಂಡಾಡಿ ಜೆರೂಸಲೇಮ್ ನಗರದೊಳವರು ತಿರುಕೀರ್ತನೆಗಳ ಪಾಡಿ ಕೊಳ್ಳುವಹಾಗೂ ಪರಲೋಕದ ದೇಶೆಯಿಂದ ಭೂಲೋಕವಂನು ದೃಷ್ಟಿಸ ಚಿತ್ತೈಸಿದರು.

ದೀನನು ತಂನ ಸತ್ವದ ಮಧ್ಯದಲ್ಲಿ ಕರ್ತರಿಗೆ ಕೇಳಿದ್ದು: ನಂನ ಆಯುಷ್ಯದ ಸ್ವಲ್ಪವಂನು ನನಗೆ ಅರುಹಿಸಿರಿ.

ನಂನ ಆಯುಷ್ಯದ ಮಧ್ಯ ಭಾಗದೊಳು ನಂನಂನು ಕರೆದು ಕೊಳ್ಳ ಬೇಡಿರಿ; ನಿಮ್ಮ ಸಂವತ್ಸರಗಳು ತಲ ತಲಾಂತರಗಳಾಗಿರುವವು.

ಸ್ವಾಮಿ, ದೇವರವರೇ ಭೂಮಂಡಲಕ್ಕೆ ಆದಿಯಲ್ಲಿ ಅಸ್ತಿವಾರವ ಹಾಕಿದಿರಿ; ಜ್ಯೋತಿರ್ಮಂಡಲಗಳು ನಿಂಮ ಕೈಯ್ಯ ಕರ್ಮಗಳಾಗಿವೆ.

ಅವು ಕ್ಷೀಣಿಸಿ ಹೋಗುವವು; ತಾವಾದರೆ, ನಿರಂತರವಾಗಿರುವವರು. ಅವು ವಿಶಿಷ್ಟವು ವಸ್ತ್ರಗಳಂತೆ ಜೀರ್ಣವಾಗುವವು;

ಉಡುಪು ಬದಲಾಯಿಸುವ ಮೇರೆಗೆ ಅವುಗಳ ಬದಲಾ

ಯಿಸುವಿರಿ, ಅವು ಬದಲು ಪಡುವವು, ತಾವೋ ಅನಂತ ಕಾಲ ಏಕ ರೀತಿಯಾಗಿರುವವರು; ನಿಮ್ಮ ವರುಷಗಳು ಗತಿಸಿ ಹೋಗುವದಿಲ್ಲ.

ನಿಂಮ ಪಾದ ಸೇವಕರ ಮಕ್ಕಳು ನಿಂಮೊಂದಿಗೆ ವಾಸ ಮಾಡಿಕೊಂಡಿರುವರು, ಅವರ ಸಂತತಿಯೂ ಎಂದೆಂದಿಗೂ ಸುಮಾರ್ಗದಲ್ಲಿ ನಡಿಸಲ್ಪಡುವದು.

ಪಿತನಿಗೂ, ಸುತನಿಗೂ . . . .

೭ ನೇದು.—೧೩೦ ನೇ ಸಂಗೀತವು.

[ಪಾಪದ ನಿವಾರಣೆ ಹೊಂದುವಂತೆ ಸರ್ವೇಶ್ವರನ್ನ ಪ್ರಾರ್ಥಿಸ ತಕ್ಕ ಭಕ್ತಿರಸದ ಮಾತೃಕೆಯಾಗಿ ಪಾಡಿ ಇದ್ದದ್ದು.]

ಪಾತಾಳಗಳೊಳಗಿಂದ ನಿಮ್ಮಂನು ನೋಡಿ ಕರೆಯುತ್ತೇನೆ, ಕರ್ತನೇ; ಕರ್ತನೇ, ನಂನ ಶಬ್ದವಂನು ಆಲೈಸಿರಿ.

ನಂನ ವಿಜ್ಞಾಪನೆಯ ರೋದನವಂನು ನೀವು ಶ್ರವಣ ತಂದು ಕೇಳ ಕರುಣಿಸಿರಿ.

ಆಳಿದವರೇ, ತಾವು ಪಾಪಾಕ್ರಮಗಳಂನು ಕಂಡಿಟ್ಟು ನೋಡಿದರೆ, ನಿಮಗೆ ಮುಂದೆ ನಿರ್ವಾರು ಮಾಡುವವನ್ಯಾರು, ಸ್ವಾಮಿ?

ಆದರೆ ದೇವರವರ ಬಳಿಯಲ್ಲಿ ದಯಾಳ ಕ್ಷಮೆ ಇರುವದರಿಂದಲೂ, ನಿಂಮ ವೇದನೀತಿಯ ನಿಮಿತ್ತದಿಂದಲೂ, ಸ್ವಾಮಿ, ನಿಂಮಂನು ನಂಬಿ ನಿರೀಕ್ಷಿಸಿ ಕೊಂಡಿರುತ್ತೇನೆ.

ನಂನ ಆತ್ಮವು ಆಳಿದವರ ಸ್ಥಿರವಾದ ವಾಕ್ಯದ ಮೇಲೆ ಊರಿಕೊಂಡಿರುತ್ತೆ; ನಂನ ಆತ್ಮವು ಆಳಿದವರಲ್ಲಿ ನಂಬಿಕೆ ಇರಿಸಿಕೊಂಡಿರುತ್ತೆ.

ಉದಯಕಾಮದ ನೋಂಪುಗೊಂಡು ರಾತ್ರಿಯು ಪರಿಯಂತರಕ್ಕೂ ಇಸ್ರಾಯೇಲ್ ಜನವು ಆಳಿದವರನ್ನು ನಂಬಿ ಕಾದು ಕೊಂಡಿರಲಿ.

ಯಾಕಂದರೆ ಸ್ವಾಮಿ ದಯಾಪರರು; ಅವರೊಳ್ ರಕ್ಷಣ್ಯವು ಹೇರಳವಾಗಿರುತ್ತದೆ.

ಇವರೇ ಇಸ್ರಾಯೇಲ್ ಜನರಂನು ಸಕಲ ಪಾಪದೊಳಗಿಂದ ರಕ್ಷಿಸ ಕರುಣಾ ಚಿತ್ತವಾಗುವರು.

ಪಿತನಿಗೂ, ಸುತನಿಗೂ....

೭ ನೇದು. ೧೪೩ ನೇ ಸಂಗೀತವು.

[ದೀರ್ಘದರ್ಶಿಯಾದ ದಾವಿದೆಂಬವರು ತಾವು ಪಡುತ್ತಿದ್ದ ಆಪತ್ತುಗಳಲ್ಲಿ ದೇವಕೃಪೆಯಂನು ದೈನ್ಯದೊಂದಿಗೆ ಬೇಡಿ, ಸರ್ವೇಶ್ವರನು ತಂಮ ನೀತಿಯು ಖಂಡಿತಪ್ರಕಾರ ನಡಿಸದೆ ದಯದೊಂದಿಗೆ ನಡಿಸಬೇಕೆಂತ ಸರ್ವೇಶ್ವರನ್ನ ವಿಜ್ಞಾಪಿಸಿ ಪಾಡಿಯಿದ್ದರು.]

ಸ್ವಾಮಿ, ನನ್ನ ಪ್ರಾರ್ಥನೆಯಂನು ಆಲೈಸಿರಿ; ನಿಂಮ ಸತ್ಯ ಪ್ರಮಾಣದಲ್ಲಿ ನಂನ ವಿಜ್ಞಾಪನೆಗಳಿಗೆ ಶ್ರವಣಕೊಡಿರಿ; ನಿಮ್ಮ ನೀತಿಯು ಪ್ರಕಾರ ನಂನ ಬೇಡುಧಲೇ ಅಂಗೀಕರಿಸಿರಿ.

ತಪ್ಪುಗಳ ವಿಚಾರಿಸಿ ನಿಂಮ ಸೇವಕನಂನು ತೀರ್ಪಿಯಿಡ ಪ್ರವೇಶಿಸ ಬೇಡಿರಿ; ಯಾಕಂದರೆ ಜೀವಿತರೊಳೊಬ್ಬನಾದರೂ ದೇವರವರ ಮುಂದೆ ಪವಿತ್ರನೆಂದಂನಿಸಿಕೊಳ್ಳಲಾರನು.

ಯಾಕಂದರೆ ನಂನ ಶತ್ರು ನಂನ ಆತ್ಮವಂನು ಪೀಡಿಸಿ, ನಂನ ಪ್ರಾಣವ ನೆಲಕ್ಕೆ ಕುಂಗಿಸಿದನು.

ಪೂರ್ವದಲ್ಲಿ ಮೃತವಾದವರೋಪಾದಿ ನಂನಂನು ಕಾರ್ಗತ್ತಲೇಸ್ಥಳಗಳಲ್ಲಿ ನಿಲ್ಲ ಮಾಡಿದನು. ನಂನ ಆತ್ಮವು ನಂನಲ್ಲಿ ತಲ್ಲಡಿಸಿ ಕೊಂಡು, ನಂನ ಹೃದಯವು ಕಳವಳ ಗೊಂಡಿರುತ್ತದೆ.

ನಾನು ಪೂರ್ವಕಾಲಗಳಂನು ಜ್ಞಪ್ತಿಗೆ ತಂದು ನಿಂಮ ಚರ್ಯೆಗಳೆಲ್ಲಾ ಯೋಚಿಸುತ್ತಾಯಿದ್ದೆನು ; ನಿಂಮ ತಿರುಹಸ್ತಗಳ ಕೃತ್ಯಗಳ ಮೇಲೆ ಧ್ಯಾನವಂನು ಮಾಡುತ್ತಾ ಇದ್ದೆನು.

ನಿಂಮಂನು ನೋಡಿ ನಂನ ಕೈಗಳಂನು ಚಾಚಿದೆನು; ಜಲವಿಲ್ಲದ ನೆಲದಹಾಗೆ ನಂನ ಆತ್ಮವು ಇಂಗಿ ನಿಂಮಂನು ಆಕಾಂಕ್ಷಿಸುತ್ತೇ.

ಆಳಿದವರೇ, ನಂನ ಜೀವವು ಸೊರಗಿ ಬೀಳುತ್ತದೆ; ನನ್ನ ಬೇಡುದಲೆ ತೀವ್ರವಾಗಿ ಕೇಳ ಕರುಣಿಸಿರಿ.

ನೀವು ನನಗೆ ಪರಮುಖವಾಗ ಬೇಡಿರಿ; ನನಗೆ ಪರಮುಖವಾಗುವಿರೋ, ನಾನು ಗುಣಿಯಲ್ಲಿ ಇಳಿವವರಿಗೆ ಸಮಾನವಾಗುವೆನು.

ನಾನು ನಿಂಮಂನು ನಂಬಿ ಇರುವದರಿಂದ, ಬೆಳಿಗ್ಗೆ ನನಗೆ ನಿಂಮ ದಯಾರಸವಾದ ವಾರ್ತೆ ಕೇಳಿಸುವಂತೆ ಅನುಗ್ರಹಿಸಿರಿ.

ನಂನ ಆತ್ಮವಂನು ನಿಮ್ಮ ಕಡೆಗೆ ನಾನು ಎತ್ತಿದೆನೆಂಬ ಕಾರಣ, ನಾನು ನಡೆಯ ಬೇಕಾದ ಮಾರ್ಗವ ನನಗೆ ತಿಳಿಯ ಪಡಿಸಿರಿ.

ನಾನು ನಿಮಗೆ ಶರಣಾಗತನಾದದರಿಂದ, ನಂನ ಶತ್ರುಗಳಿಂದ ನಂನಂನು ಕಾಪಾಡಿ ರಕ್ಷಿಸಿಕೊಳ್ಳಿ; ದೇವರವರೇ, ನಂನ ದೈವವಾಗಿದ್ಧೀರಿ ಎಂಬುವದರಿಂದ, ನಾನು ನಿಂಮ ಚಿತ್ತಪ್ರಕಾರವಾಗಿ ನಡೆಯ ಕಲ್ಪಿಸಿರಿ.

ನಿಂಮ ದಿವ್ಯ ಸ್ಪೀರಿತು ಆದವರು ನಂನಂನು ಸನ್ಮಾರ್ಗದಲ್ಲಿ ನಡಿಸಲಿ, ಸ್ವಾಮೀ; ನಿಂಮ ತಿರುನಾಮದ ಕೀರ್ತಿಯ ನಿಮಿತ್ತ ತಮ್ಮ ನೀತಿಗಳಿಗೆ ಅನುಗುಣವಾಗಿ ನಂನನ್ನು ಜೀವಿಸ ಮಾಡುವಿರಿ ಆಗಲಿ.

ಆಪತ್ತು ವಿಪತ್ತಿನೊಳಗಿಂದ ನಂನ ಆತ್ಮವಂನು ಬಿಡುಗಡೆ ಹಾಕಿ, ತಂಮ ದಯದಿಂದ ನಂನ ಶತ್ರುಗಳಂನು ಸಂಹರಿಸುವಿರಿ ಆಗಲಿ.

ನಾನು ನಿಂಮ ಪಾದ ಸೇವಕನಾದ್ದರಿಂದ, ನಂನ ಆತ್ಮವಂನು ಬಾಧಿಸುವವರೆಲ್ಲರಂನು ನಿರ್ಮೂಲ ಮಾಡ ಚಿತ್ತ ಕರುಣಿಸಿರಿ.

ಪಿತನಿಗೂ, ಸುತನಿಗೂ.

ಸ್ವಾಮಿಾ, ನಂಮ ಪಾಪಗಳಂನಾ ನಮ್ಮ ಮಾತಾ ಪಿತೃಗಳ ಪಾಪಗಳಂನಾ ಸ್ಮರಿಸಿಕೊಳ್ಳ ಬೇಡಿರಿ, ನಂಮ ಪಾಪಗಳಿಗೆ ಪ್ರತಿಫಲ ನಿಯಮಿಸ ಬೇಡಿರಿ, ಸ್ವಾಮಿಾ.

ಪ್ರಾರ್ಥನೆಗಳು.

ತಪಸ್ಸುಕಾಲದ ಏಳು ವಾರಗಳಂನು ವಿನಾಯಿಸಿ, ವರುಷದ ಸಕಲ ಆದಿತ್ಯವಾರಗಳಲ್ಲಿ ಕೇಳತಕ್ಕ ಪರಮ ತ್ರಿತ್ವದ ಪ್ರಾರ್ಥನೆಗಳು.

† ಸ್ವಾಮಿಾ, ಕೃಪೆಯಂನು ಮಾಡಿ;
ಕ್ರೀಸ್ತುವೇ, ಕೃಪೆಯಂನು ಮಾಡಿ;
ಸ್ವಾಮಿಾ, ಕೃಪೆಯಂನು ಮಾಡಿ;
ಕ್ರೀಸ್ತುವೇ, ನಂಮಂನು ಆಲೈಸಿರಿ;
ಕ್ರೀಸ್ತುವೇ, ನಮ್ಮ ಪ್ರಾರ್ಥನೇ ಚಂನಾಗಿ ಕೇಳಿಕೊಳ್ಳಿ.

ಪರಲೋಕದ ದೆಶೆಯಿಂದ ಪಿತನಾಗಿದ್ದಂಥಾ ದೇವರೇ, ನಮಗೆ ದಯಾ ಮಾಡಿ, ಸ್ವಾಮಿಾ.

ಲೋಕವ ರಕ್ಷಿಸುವ ಸುತನಾಗಿದ್ದಂಥಾ ದೇವರೇ, ನಮಗೆ ದಯಾ ಮಾಡಿ, ಸ್ವಾಮಿಾ.

ಸ್ಪೀರಿತು ಸಾಂತುವಾಗಿದ್ದಂಥಾ ದೇವರೇ, ನಮಗೆ ದಯಾ ಮಾಡಿ, ಸ್ವಾಮಿಾ.

ಅಚ್ಯ್ರ ಶಿಷ್ಟ ತನು ತ್ರಿತ್ವಂತರಾಗಿದ್ದಂಥಾ ಏರ ದೇವರೇ, †

ಪಿತನೂ ಸುತನೂ ಸ್ಪಿರಿತುಸಾಂತ್ತುವೂ ಸೃಷ್ಟಿಕರ್ತರೂ ಜ್ಞಾನ ಪಾಲಿಸುವವರೂ ಆಗಿರುವಂಥಾ ಪರಮ ತ್ರಿತ್ವವೇ,

ಪಿತನೂ ಸುತನೂ ಸ್ಪಿರಿತು ಸಾಂತ್ತುವೆಂಬಂಥಾ ಮೂವರು ಬೇರೆ ಬೇರೆ ಮಂದಿತ್ವವಾಗಿದ್ದಾಗ್ಯೂ, ಒಂದೇ ದೈವವಾಗಿ ಇರುವಂಥಾ ಮೇಲಾದ ತ್ರಿತ್ವವೇ,

ಮನುಜರ ಬುದ್ಧಿಗೆ ಎಟ್ಟದ ಪರಮ ರಹಸ್ಯವಾಗಿರುವಂಥಾ ಪರಮ ತ್ರಿತ್ವವೇ,

ಮುವ್ವರೂ ಏಕೀಭವವಾಗಿದ್ದುಕೊಂಡು ಒಂದೇ ದೈವವಾಗಿರುವಂಥಾ ಮೇಲಾದ ತ್ರಿತ್ವವೇ,

ನಿತ್ಯ ಮಹಿಮೇ ಪ್ರತಾಪದೊಡ್ಡೋಲಗದಲ್ಲಿರುವಂಥಾ ಮೇಲಾದ ತ್ರಿತ್ವವೇ,

ಮಟ್ಟು ಪ್ರಮಾಣವಿಲ್ಲದಿರುವಂಥಾ ಪರಮ ತ್ರಿತ್ವವೇ,

ಆದ್ಯಂತವಿಲ್ಲದೆ ಇರುವಂಥಾ ಪರಮ ತ್ರಿತ್ವವೇ,

ಸರ್ವ ವಲ್ಲಭರಾಗಿರುವಂಥಾ ಮೇಲಾದ ತ್ರಿತ್ವವೇ,

ನಿಜವಾದ ದೈವವಾಗಿರುವಂಥಾ ಪರಮ ತ್ರಿತ್ವವೇ,

[illegible]

---

† ಎರಡು ಶಿಲುಬೆಗಳ ಅಂತರದಲ್ಲಿ ಅಡಗಿ ಇರುವದು ಎಲ್ಲಾ ಪ್ರಾರ್ಥನೆಗಳಿಗೆ ಪ್ರಾರಂಭವು.

ಸಕಲರ್ಗೂ ಮೇಲಾದ ಅಳಿದವರಾಗಿರುವಂಥಾ ದೇವ ತ್ರಿತ್ವವೇ,

ಪಿತನ ದೆಶೆಯಿಂದ ಸುತನು ಜನಿಸಿ, ಪಿತನ ದೆಶೆಯಿಂದಲೂ ಸುತನ ದೆಶೆಯಿಂದಲೂ ಸ್ಪೀರಿತು ಸಾಂಕ್ತು ಹೊರಟು, ತಂಮ ಪ್ರಕಾಶದ ಕಿರಣವ ಜ್ವಲಿಸುವಂಥಾ ಪರಮ ತ್ರಿತ್ವವೇ,

ಮುಂದೆ ಬಂದವರೆಂತಲೂ ಹಿಂದೆ ಬಂದವರೆಂತಲೂ ಹೇಳ ಬಾರದ ಸರಿಸಮಾನವಾಗಿರುವ ಮೂವರಾದಂಥಾ ಪರಮ ತ್ರಿತ್ವವೇ,

ದೊಡ್ಡವರೆಂದೂ ಕಿರಿಯವರೆಂದೂ ಹೇಳಕೂಡದೆ, ವ್ಯತ್ಯಾಸವಿಲ್ಲದೆ ಮೂವರಾದಂಥಾ ಪರಮ ತ್ರಿತ್ವವೇ,

ಪರಲೋಕ ಭೂಲೋಕಗಳಂನೂ ಅವುಗಳಲ್ಲಿ ಉಂಟಾಗಿರುವ ಸಕಲ ವಸ್ತುಗಳಂನೂ ಆಗಲಿ ಎಂಬ ವಾಕ್ಯವ ಹೇಳಿಸಿದಾಕ್ಷಣವೇ ಉಂಟಾಗ ಮಾಡಿದಂಥಾ ಪರಮ ತ್ರಿತ್ವವೇ,

ಸಕಲ ಜೀವಾದಿಗಳಿಗೆ ಆಹಾರವಂನು ತಂದು ಪೋಷಿಸಿಕೊಂಡು ಬರುವಂಥಾ ಪರಮ ತ್ರಿತ್ವವೇ,

ಪಂಚ ಭೂತಗಳಿಂದ ಸಮಸ್ತ ಜೀವರಾಶಿಗಳಂನು ನಡಿಸಿ ದಂಡಿಸಿ ಕೊಂಡು ಬರುವಂಥಾ ಪರಮ ತ್ರಿತ್ವವೇ,

ನಮಗೆ ದಯಾ ಮಾಡಿ, ಸ್ವಾಮಿ.

ಪರಲೋಕ ಭೂಲೋಕಗಳಂನೂ ಅವುಗಳಲ್ಲಿ

ಅಡಗಿರುವ ಲೆಕ್ಕವಿಲ್ಲದ ವಸ್ತುಗಳಂನೂ ಒಂದೇ ವಾಕ್ಯದಿಂದ, ಒಂದೇ ಕ್ಷಣದಲ್ಲಿಯೇ, ನಿರ್ಮಾಣ ಮಾಡುವದಕ್ಕೆ ಮೇಲಾದ ಸಾಮರ್ಥ್ಯ ಭರಿತವಾದಂಥಾ ಪರಮ ತ್ರಿತ್ವವೇ,

ದಾವಯುಗಾಂಗಳಲ್ಲಿಯೂ ಸ್ವಯಂಭೂ ಆದ ಕಾಂತಿಯಿಂದ ಪ್ರಕಾಶಿಸುವಂಥಾ ಪರಮ ತ್ರಿತ್ವವೇ,

ದಯದಲ್ಲಿಯೂ ನೀತಿಯಲ್ಲಿಯೂ ಸಮಸ್ತ ಮೇಲುಗಳಲ್ಲಿಯೂ ಮಟ್ಟಿಲ್ಲದ್ದಾಗಿರುವಂಥಾ ಪರಮ ತ್ರಿತ್ವವೇ,

ಸಮಸ್ತ ಕಾಲಂತರಗಳಲ್ಲಿಯೂ ಜೀವಿತವಾದಂಥಾ ಪರಮ ತ್ರಿತ್ವವೇ,

ಮಹಾ ಪರಿಶುದ್ಧವಾದಂಥಾ ಪರಮ ತ್ರಿತ್ವವೇ,

ಪೂರ್ಣ ನಂಬಿಕೆಯೊಂದಿಗೆ ನಿಂಮ ಶರಣ ಹೊಗುವವರಂನು ಸಕಲಾಪತ್ತು ವಿಪತ್ತುಗಳಿಂದ ರಕ್ಷಿಸಿ ಕಾಪಾಡುವಂಥಾ ಪರಮ ತ್ರಿತ್ವವೇ,

ನಿಮ್ಮಂನು ದರ್ಶಿಸುವಂಥಾ ಮೋಕ್ಷವಾಸಿಗಳಿಗೆ ತೃಪ್ತಿಯುಳ್ಳಾನಂದ ಸಂತೋಷವಂನು ವರ್ಧಿಸ ಮಾಡುವಂಥಾ ಪರಮ ತ್ರಿತ್ವವೇ,

ಯಥಾರ್ಥ ವಾಕ್ಯ ಪ್ರಮಾಣಿಕ್ಯರಾದಂಥಾ ನಂಮ ಸರ್ವೇಶ್ವರಾ,

ಸಕಲ ವರಪ್ರಸಾದಗಳಿಗೆ ಬುಗ್ಗೆಯಾಗಿರುವಂಥಾ ಸರ್ವೇಶ್ವರಾ,

ನಮಗೆ ದಯೆ ಮಾಡಿ, ಸ್ವಾಮಿ.

ಸಕಲರ್ಗೂ ಆದಿಕಾರಣವಾಗಿರುವಂಥಾ ನಂಮ ಸರ್ವೇಶ್ವರಾ, — ನಮಗೆ ದಯಾ ಮಾಡಿ, ಸ್ವಾಮಿ.

ಭೂತ ಭವಿಷ್ಯದ್ವರ್ತಮಾನ ಕಾಲಂತರಗಳಂನು ವರ್ತಮಾನಕಾಲವಂತೆ ತಿಳಿದುಕೊಂಡಿರುವಂಥಾ ನಂಮ ಸರ್ವೇಶ್ವರಾ, — ನಮಗೆ ದಯಾ ಮಾಡಿ, ಸ್ವಾಮಿ.

ಗತಿಸಿದ ಭೂತಕಾಲದ ಕಾರ್ಯಗಳಂನೂ, ಸಂಗತಿಸುವ ವರ್ತಮಾನಕಾಲದ ಕಾರ್ಯಗಳಂನೂ, ನಡೆಯುವದಕ್ಕಿರುವ ಭವಿಷ್ಯತ್ಕಾಲದ ಕಾರ್ಯಗಳಂನೂ ನಿರಂತರವಾಗಿ ನೋಡಿಕೊಂಡಿರುವಂಥಾ ನಂಮ ಸರ್ವೇಶ್ವರಾ, — ನಮಗೆ...

ದಯಾಪರರಾಗಿದ್ದು, — ನಂಮ ಪಾಪಗಳ ತಾಳಿಕೊಳ್ಳಿ, ಸ್ವಾಮಿ.

ದಯಾಪರರಾಗಿದ್ದು, — ನಂಮ ಪ್ರಾರ್ಥನೇ ಪ್ರಕಾರ ದಯಾ ಮಾಡಿ, ಸ್ವಾಮಿ.

ನಿಂಮ ಕಲ್ಪಣೆಗಳಂನು ಮೀರುವದಕ್ಕೆ ಕಾರಣವಾಗಿರುವ ದುರ್ಗುಣಗಳಿಂದ,

ನಿಂಮ ವರಪ್ರಸಾದಗಳಂನು ಎಣಿಸದ ಮಂದಮತಿಯಿಂದ,

ನಿಮ್ಮ ಮರಾ ಭಯಂಕರವಾದ ನೀತಿಯಂನೂ ವಲ್ಲಭತ್ವವಂನೂ ಧ್ಯಾನಿಸದ ಮೂರ್ಖತನದಿಂದ,

ಕಾಮಾಗ್ನಿಯ ಚುರುಕಿನಿಂದ,

ನರಕದ ಪಾತಾಳದಲ್ಲಿ ನಂಮನು ದೊಬ್ಬುವದಕ್ಕೆ ಪ್ರಯಾಸ ಪಡುವಂಥಾ ಶೈತಾನನ ತಂತ್ರೋ

ನಂಮಂನು ರಕ್ಷಿಸಿಕೊಳ್ಳಿ, ಸ್ವಾಮಿ.

ಪಾಯಗಳಿಂದ,

ಪಾಪಾತ್ಮರ ಬಾಧಿಸುವದಕ್ಕೋಸ್ಕರ ದೇವರವರು ಕಳುಹಿಸುವ ಶಿಡಲು, ಅಘೋರವಾದ ಘಾಳಿ, ಇವು ಮುಂತಾದ ಮೋಸಗಳಿಂದ, — ನಮ್ಮಂನು ರಕ್ಷಿಸಿಕೊಳ್ಳಿ, ಸ್ವಾಮಿ.

ಘೋರ ಪಿಶಾಚ ಶರೀರದಿಂದ ಬರುವ ಆಶಾಪಾಶವೆಂಬ ಎಡೆಬಿಡದ ಯುದ್ಧದಿಂದ, — ನಮ್ಮಂನು....

ಮರಣದ ಸಮಯದಲ್ಲಿ ಬರುವ ಅವಿಶ್ವಾಸ ಅಪನಂಬಿಕೆಗಳಿಂದ, —ನಂಮಂನು ರಕ್ಷಿಸಿಕೊಳ್ಳಿ, ಸ್ವಾಮಿ.

ನಂಮ ರಕ್ಷಕರೆಂಬದಾಗಿ ನಿಮ್ಮಂನು ಕೈಗೊಂಡವರ ಸಮೂಹದಲ್ಲಿ ನಮ್ಮಂನು ಶೇರಿಸುವಹಾಗೆ,

ನಂಮ ಪಾಪವಂನು ತಾಳುವ ಹಾಗೆ,

ಶೋಧನೇ ಕಾಲದೊಳಗೆ ನಾವು ತತ್ತಳಿಸಿ ಹೋಗದಂತೆ ನೀವು ಕೈಕೊಟ್ಟು ನಂಮಂನು ರಕ್ಷಿಸುವ ಹಾಗೆ,

ನಿಂಮ ಸ್ನೇಹಕ್ಕೆ ವಿರೋಧಿಸುವಂಥ ಆಶಾಪಾಶಗಳಂನು ವರ್ಜಿಸಿ, ಅವುಗಳ ಮೇಲೆ ಅಸಹ್ಯ ಹುಟ್ಟಿಸುವ ಹಾಗೆ,

ನಿಂಮಂನು ಪೂರ್ಣ ಮನಸ್ಸಿನಿಂದ ಸ್ನೇಹಿಸಿ ಮರಣ ಪರಿಯಂತಕ್ಕೂ ಸ್ನೇಹದಲ್ಲಿ ನಂಮಂನು ದೃಢಾಪಡಿಸುವ ಹಾಗೆ,

ಮಹಾ ಪರಿಶುದ್ಧವಾದ ಆನಂದವುಳ್ಳ ನಿಂಮ ಸಮುಖದೊಳಗೆ ಶೇರಿದ ಅಚ್ಯರ್ಶಿಷ್ಟವರ ಸಂಗಡ

ದೇವರವರಂನು ಬೇಡಿಕೊಳ್ಳುತ್ತಿದ್ದೇವೆ.

ದಲ್ಲಿ ನಮ್ಮಂನು ಅರ್ಹಶಿಷ್ಟವರಾಗ ಮಾಡಿ ಶೇರಿಸುವದಹಾಗೆ,

† ಲೋಕದ ಪಾಪಗಳ ಪರಿಹರಿಸುವ ಸರ್ವೇಶ್ವರನ ಕಿಂಗುರೀ ಮರಿಯೇ, — ನಂಮ ಪಾಪಗಳಂನು ತಾಳಿಕೊಳ್ಳಿ, ಸ್ವಾಮಿ.

ಲೋಕದ ಪಾಪಗಳ ಪರಿಹರಿಸುವ ಸರ್ವೇಶ್ವರನ ಕಿಂಗುರೀ ಮರಿಯೇ, — ನಂಮ ಪ್ರಾರ್ಥನೇ ಪ್ರಕಾರ ಕರುಣಿಸಿರಿ, ಸ್ವಾಮಿ.

ಲೋಕದ ಪಾಪಗಳ ಪರಿಹರಿಸುವ ಸರ್ವೇಶ್ವರನ ಕಿಂಗುರೀ ಮರಿಯೇ, — ದಯವಾಗಿರಿ, ಸ್ವಾಮಿ.

ಕ್ರೀಸ್ತುವೇ, ನಂಮ ಪ್ರಾರ್ಥನೇ ಕೇಳಿಕೊಳ್ಳಿ.
ಕ್ರೀಸ್ತುವೇ, ನಂಮ ಪ್ರಾರ್ಥನೇ ಅಂಗೀಕರಿಸಿಕೊಳ್ಳಿ.
ಸ್ವಾಮಿ, ಕೃಪೆಯಂನು ಮಾಡಿ;
ಕ್ರೀಸ್ತುವೇ, ಕೃಪೆಯಂನು ಮಾಡಿ;
ಸ್ವಾಮಿ, ಕೃಪೆಯಂನು ಮಾಡಿ. (೧ ಪರಲೋಕದ.)
(ಉ.) ನಂಮಂನು ಶೋಧನೆಯಲ್ಲಿ ಬೀಳಲೀಸದೆ,
(ಜ.) ಕೇಡಿನೊಳಗಿಂದ ನಂಮಂನು ರಕ್ಷಿಸಿಕೊಳ್ಳಿ. †

ಪ್ರಾರ್ಥಿಸಿಕೊಂಬುವದು.

ತಾವಾಗಿಯೂ ಆದಿ ಅಂತವಿಲ್ಲದವರಾಗಿಯೂ ಶರೀರವಿಲ್ಲದವರಾಗಿಯೂ ಮಿತಿಯಿಲ್ಲದ ಸಕಲ ಮೇಲು ಸ್ವರೂಪ

---

†. ಎರಡು ಶಿಲುಬೆಗಳ ಅಂತರದಲ್ಲಿ ಅಡಗಿ ಇರುವದು, ಎಲ್ಲಾ ಪ್ರಾರ್ಥನೆಗಳಿಗೆ ಮುಗುವು.

ವಾಗಿಯೂ ಸರ್ವವ್ಯಾಪಿಯೂ ಸಕಲಕರ್ತೃ ಆದಿಕಾರಣವಾಗಿಯೂ ಮಹಾ ಕಾಂತಿಯುಳ್ಳ ತೇಜಪ್ರಕಾಶವೂ ಆಗಿರುವ ಏಕ ಕರ್ತನಾದ ಸರ್ವೇಶ್ವರಾ, ನಿಂಮ ಊಳಿಗವಂನು ಮಾಡುವದಕ್ಕಾಗಿ ನಂಮ ಶರೀರವಂನೂ ಬುದ್ಧಿ ಯೋಜನೆಯಂನೂ ಮನೋಸ್ವತಂತ್ರವಂನೂ ಪೂರ್ಣವಾಗಿ ನಿಮಗೆ ಕಾಣಿಕೆಯಾಗಿ ಒಪ್ಪಿಸುತ್ತಾಯಿದ್ದೇವೆ, ನಿಂಮಂನು ಹೊಗಳಿ ಸ್ತುತಿಸಿ ಸಾಷ್ಟಾಂಗವಾಗಿ ನಮಸ್ಕರಿಸುತ್ತೇವೆ. ನಿಮ್ಮ ತಿರುಸಭೆಯಲ್ಲಿ ಇರುವ ಪರಮ ರಹಸ್ಯಗಳೆಲ್ಲವಂನು ವಿಶ್ವಾಸಿಸುವ ನಮ್ಮ ಮನಸ್ಸಂನು ಇಂಥಾ ವಿಶ್ವಾಸದಲ್ಲಿಯೇ ದೃಢಪಡಿಸಿ; ನಿಮ್ಮ ರಾಜ್ಯದಲ್ಲಿ ನಿತ್ಯಕಾಲದೊಳು ನಿಂಮಂನು ದರ್ಶಿಸಿ ಸ್ತುತಿಸುವ ಹಾಗೂ, ಈಗಲು ನಿಮ್ಮ ಚಿತ್ತಕ್ಕೆ ಹೊಂದಿ ನಡಿಯುವ ಹಾಗೂ, ನಂಮಂನು ನಡಿಸ ಬೇಕೆಂದು ದೇವರ ವರ ಬೇಡಿಕೊಳ್ಳುತ್ತೇವೆ. ದೇವರವರಿಂದ ಉಂಟುಮಾಡಲ್ಪಟ್ಟ ಜ್ಯೋತಿಶ್ಚಕ್ರ ಭೂಮಂಡಲ ಪಾತಾಳ ಲೋಕಗಳೊಳಗೂ ಅಡಗಿ ಇರುವ ಸರ್ವ ವಸ್ತುಗಳು ಶಿರಸಾ ವಹಿಸಿ ನಿತ್ಯಕಾಲದಲ್ಲ್ಯಾ ನಿಮ್ಮಂನು ಸ್ತುತಿಸುವದಾಗಲಿ. ಆಮೆನ್ ಜೇಸು.

(ನಮೋ ರಾಣಿಯೇ ಮಂತ್ರ. ಆ ಮೇಲೆ ಅವರವರ ಭಕ್ತಿಗೆ ತಕ್ಕಷ್ಟು ಬೇಡುದಲೆ ಹೇಳಿಕೊಂಡು ಹೋಗಬಹುದು.)

ಸೋಮವಾರಕ್ಕೆ.

ಉತ್ತರಿಸುವ ಆತ್ಮಗಳ ಪ್ರಾರ್ಥನೆ.

† ಸ್ವಾಮಿ, ಕೃಪೆಯಂನು ಮಾಡಿ;... (೪೬೧ನೇ ಪತ್ರ.)

ಅರ್ಚ್ಯ. ಮರಿಯಮ್ಮನವರೇ,
ಕನ್ಯಾಸ್ತ್ರೀಯರುಗಳೊಳಗೆ ಉತ್ತಮ ಅರ್ಚ್ಯ. ಕಂನಿಕೆಯೇ,
ಅರ್ಚ್ಯ. ಮಿಖಯೇಲೇ,
ದೂತರೂ ಪ್ರಧಾನ ದೂತರುಗಳೂ ಆದ ಸಮ್ಮನಸ್ಸುಗಳಿರಾ,
ನವವಿಳಾಸ ಸಭೆಯಾಗಿರುವ ಸರಲ ಸಮ್ಮನಸ್ಸುಗಳಿರಾ,
ಸ್ನಾಪಕರಾದ ಅರ್ಚ್ಯ. ಜೊವಾನಿ ಎಂಬವರೇ,
ಅರ್ಚ್ಯ. ಜೋಸೇಫನವರೇ,
ಪಿತಾಪಿತೃಗಳ ದೀರ್ಘ ದರ್ಶಿಗಳ ಸಮೂಹವೆಲ್ಲಾ,
ಅರ್ಚ್ಯ. ರಾಯಪ್ಪನವರೇ,
ಅರ್ಚ್ಯ. ಚಿಂನಪ್ಪನವರೇ,
ಅರ್ಚ್ಯ. ಅರುಳಪ್ಪನವರೇ,
ಅಪೋಸ್ತಲರ ಸುವಿಶೇಷರ ಸಮೂಹವೆಲ್ಲಾ,

ಅರ್ಚ್ಯ. ಕಿರೀಟಪ್ಪನವರೇ,
ಅರ್ಚ್ಯ. ಲೌರೇಂಸಿ ಎಂಬವರೇ,
ಅರ್ಚ್ಯ. ವೇದ ಸಾಕ್ಷಿಗಳ ಸಮೂಹರುವೆಲ್ಲಾ,
ಅರ್ಚ್ಯ. ಗ್ರೆಗೋರಿ ಎಂಬವರೇ,
ಅರ್ಚ್ಯ. ಅಂಬ್ರೋಸಿ ಎಂಬವರೇ,
ಅರ್ಚ್ಯ. ಅಗುಸ್ತೀನೆಂಬವರೇ,
ಅರ್ಚ್ಯ. ಮೇತ್ರಾಣಿಗಳ ಸ್ತುತಿಯುರುಗಳ ಸಮೂಹರುವೆಲ್ಲಾ,
ಅರ್ಚ್ಯ. ವೇದಪಾಠಗರ ಸಮೂಹರುವೆಲ್ಲಾ,
ಅರ್ಚ್ಯ. ಗುರುಗಳ ಆಚಾರ್ಯರುಗಳ ಸಮೂಹರುವೆಲ್ಲಾ,
ಅರ್ಚ್ಯ. ಸನ್ಯಾಸಿಗಳ ತಪೋಧನರುಗಳ ಸಮೂಹರುವೆಲ್ಲಾ,
ಅರ್ಚ್ಯ. ಮರೀಯ ಮಗ್ದಲೇನೆಂಬವಳೇ,
ಅರ್ಚ್ಯ. ಕಥರೀನೆಂಬವಳೇ,
ಅರ್ಚ್ಯ. ಬರ್ಬರವೆಂಬವಳೇ,
ಅರ್ಚ್ಯ. ಕನ್ಯಾಸ್ತ್ರೀಯರುಗಳ ವಿಧವೆ ಸ್ತ್ರೀಯರುಗಳ ಸಮೂಹರುವೆಲ್ಲಾ,
ಅಳಿದವರ ಭಕ್ತರಾದ ಸ್ತ್ರೀ ಪುರುಷರುಗಳ ಸಮೂಹರುವೆಲ್ಲಾ,

ಮೃತವಾದ ವಿಶ್ವಾಸಿಗಳಾತ್ಮಗಳಿಗಾಗಿ ಬೇಡಿ ಕೊಳ್ಳಿ.

ದಯಾಪರರಾಗಿದ್ದು, — ಅವರ ಪಾಪಗಳ ತಾಳಿಕೊಳ್ಳಿ, ಸ್ವಾಮಿ.

ದಯಾಪರರಾಗಿದ್ದು, — ನಮ್ಮ ಪ್ರಾರ್ಥನೆಯನ್ನು ಆಲೈಸಿರಿ, ಸ್ವಾಮೀ.

ಸಕಲ ಕೇಡುಗಳಿಂದ,
ನಿಮ್ಮ ಕೋಪದಿಂದ,
ನಿಮ್ಮ ನೀತಿಯ ಘೋರತ್ವದಿಂದ,
ಪಿಶಾಚಿಯಾಧೀನದಿಂದ,
ಕಠೋರ ವ್ಯಾಕುಲದಿಂದ,
ಕ್ರೂರವಾದ ಆಜ್ಞೆಯಿಂದ,
ಮರಣದ ಭಯಂಕರವಾದ ಅಂಧಕಾರದಿಂದ,
ಅಗ್ನಿಯ ಜ್ವಾಲೆಯಿಂದ,
ಆಕ್ರಂದನವಾದ ಅಳುವಿನಿಂದ,
ಉತ್ತರಿಸುವ ಸ್ಥಳದ ಶಿಕ್ಷೆಯಿಂದ,
ದೇವರವರ ಮನುಷ್ಯಾವತಾರವನ್ನು ನೋಡಿ,
ದೇವರವರ ಅಮಲೋದ್ಭವವನ್ನು ನೋಡಿ,
ದೇವರವರ ಮಧುರ ನಾಮವನ್ನು ನೋಡಿ,
ದೇವರವರ ಬಾಲ್ಯವನ್ನು ನೋಡಿ,
ದೇವರವರ ಜ್ಞಾನಸ್ನಾನವನ್ನೂ ಉಪವಾಸವನ್ನೂ ನೋಡಿ,
ದೇವರವರ ಅತ್ಯಂತ ಮನೋದಾಕ್ಷಿಣ್ಯವನ್ನು ನೋಡಿ,
ದೇವರವರ ಸುತುಸುರುಪಾದ ವಿಧೇಯತ್ವವನ್ನು ನೋಡಿ,

ಅವರನ್ನು ರಕ್ಷಿಸಿರಿ, ಸ್ವಾಮೀ.

ದೇವರವರ ಕೃಪೆಯ ಕೋಮಳತ್ವವಂನೂ ಮಟ್ಟಿಲ್ಲದ ಸ್ನೇಹವಂನೂ ನೋಡಿ,

ದೇವರವರ ಕಠೋರ ಉಪದ್ರಗಳಂನೂ ನಿರ್ಬಂಧಗಳಂನೂ ನೋಡಿ,

ದೇವರವರ ರಕ್ತದ ಬೆವರಂನು ನೋಡಿ,

ದೇವರವರು ಕಟ್ಟಲ್ಪಟ್ಟ ಕಟ್ಟುಗಳಂನು ನೋಡಿ,

ದೇವರವರು ಪಟ್ಟದೆಬ್ಬೆಗಳಂನು ನೋಡಿ,

ದೇವರವರ ಮುಳ್ಳಿನ ಕಿರೀಟವಂನು ನೋಡಿ,

ದೇವರವರ ತಿರು ಶಿಲ್ವೆಯಂನು ನೋಡಿ,

ದೇವರವರ ಕಠಿನವಾದ ಮರಣವಂನು ನೋಡಿ,

ದೇವರವರ ತಿರು ಪಂಚ ಘಾಯಗಳಂನು ನೋಡಿ,

ನಂಮ ಮರಣವಂನು ಜಯಿಸಿದ ನಿಂಮ ಅಪಮಾನವಾದ ಮರಣವಂನು ನೋಡಿ,

ದೇವರವರ ಅಮೂಲ್ಯವಾದ ರಕ್ತವಂನು ನೋಡಿ,

ದೇವರವರ ಮಹಿಮೆಯಾದ ಉತ್ಥಾನವಂನು ನೋಡಿ,

ದೇವರವರ ಅತಿಶಯವಾದ ಆರೋಹಣವಂನು ನೋಡಿ,

ಉಪಶಮನ ಮಾಡುವ ಸ್ಪಿರಿತು ಸಾಂತುವಿನ ಆಗಮನವಂನು ನೋಡಿ,

ಅವರಂನು ರಕ್ಷಿಸಿಕೊಳ್ಳಿ, ಸ್ವಾಮೀ.

ನಡು ತೀರ್ವೆಯ ದಿನದಲ್ಲಿ, —— ಅವರಂನು ರಕ್ಷಿಸಿಕೊಳ್ಳಿ, ಸ್ವಾಮಿ.

ಪಾಪಿಗಳಾಗಿರುವ ನಾವು ದೇವರವರಂನು ಬೇಡಿಕೊಳ್ಳುತ್ತೇವೆ: —— ಬೇಡಿಕೊಳ್ಳುವ ನಂಮಂನು ಆಲೈಸಿರಿ, ಸ್ವಾಮಿ.

ಪಾಪಿಯಾದ ಮಗ್ದಲೇನಮ್ಮನಿಗೆ ಪಾಪವ ಮಂನಿಸಿದವರೂ, ಒಳ್ಳೇ ಕಳ್ಳನ ಬಿಂನಹವ ಕೇಳಿಕೊಂಡವರೂ ಆಗಿರುವಂಥವರೇ,

ಮರಣ ಪಾತ್ರಾಳದ ಬೀಗದ ಕೈಗಳನ್ನು ದಕ್ಕಿಸಿಕೊಂಡಂಥವರೇ,

ರಕ್ಷಿಣ್ಯಕ್ಕೆ ಅಪ್ತರಂನು ಉಚಿತಾರ್ಥವಾಗಿ ರಕ್ಷಿಸುವಂಥವರೇ,

ನಂಮ ಸಹೋದರರ ಬಂಧುಗಳ ಉಪಕಾರಿಗಳ ಆತ್ಮಗಳಂನು ಉತ್ತರಿಸುವ ಸ್ಥಳದಿಂದ ರಕ್ಷಿಸುವದಾಗೆ,

ಭೂಲೋಕದಲ್ಲಿ ಯಾವರು ನೆನಸದೆ ಇರುವಂಥ ಆತ್ಮಗಳಿಗೆ ದಯಾಮಾಡುವ ದಾಗೆ,

ಕ್ರೀಸ್ತುನಾಥರಲ್ಲಿ ವಿಶ್ರಮಿಸುವ ಸಕಲರಿಗೆ ಉಪಶಾಂತಿಯೂ ಪ್ರಕಾಶವೂ ಸಮಾಧಾನವೂ ಉಳ್ಳ ಸ್ಥಳವಂನು ಕಟ್ಟಳೆ ಇಡುವ ದಾಗೆ,

ಪಾಪ ದೋಷದಿಂದ ಅವರಿಗುಂಟಾದ ಆಜ್ಞೆಗಳಂನು ತಗ್ಗಿಸುವ ದಾಗೆ,

ಬೇಡಿಕೊಳ್ಳುವ ನಂಮಂನು ಆಲೈಸಿರಿ, ಸ್ವಾಮಿ.

ಅವರ ದುಃಖಾಲಾಪವು ಸಂತೋಷವಾಗುವಂತೆ ಮಾರುಗೊಳ್ಳುವ ಹಾಗೆ, — ಬೇಡಿಕೊಳ್ಳುವ ನಂಮಂನು ಆಲೈಸಿರಿ, ಸ್ವಾಮಿ.

ಅವರ ಅಭೀಷ್ಟಗಳಂನು ನೆರವೇರಿಸುವ ಹಾಗೆ, — ಬೇಡಿಕೊಳ್ಳುವ ನಂನುಂನು ಆಲೈಸಿರಿ, ಸ್ವಾಮಿ.

ಅವರು ನಿಂಮಂನು ಕೊಂಡಾಗಳ ಸ್ತುತಿಯ ಬಲಿ ನಿಮಗೆ ಅರ್ಪಿಸುವ ಹಾಗೆ, — ಬೇಡಿಕೊಳ್ಳುವ ನಂಮಂನು ಆಲೈಸಿರಿ, ಸ್ವಾಮಿ.

ನಿಂಮ ಅಜ್ಯರ್ಶಿಷ್ಟವರ ಸಮೂಹದಲ್ಲಿ ಅವರಂನು ಶೇರಿಸುವ ಹಾಗೆ, — ಬೇಡಿಕೊಳ್ಳುವ ನಂಮಂನು ಆಲೈಸಿರಿ, ಸ್ವಾಮಿ.

ಸರ್ವೇಶ್ವರನ ದಿವ್ಯ ಸುತನಾದವರೇ, — ಬೇಡಿಕೊಳ್ಳುವ ನಂಮಂನು ಆಲೈಸಿರಿ, ಸ್ವಾಮಿ.

ಕೃಪೆಯ ಒರತೆಯೇ, — ಬೇಡಿಕೊಳ್ಳುವ ನಮ್ಮಂನು ಆಲೈಸಿರಿ, ಸ್ವಾಮಿ.

† ಘೋರದ ಪಾಪಗಳ. . . . (೪೬೭ನೇ ಪರ್ಕ.)

(ಉ.) ನರಕದ ಬಾಗಲಿನಿಂದ,

(ಜ.) ಅವರ ಆತ್ಮಗಳಂನು ರಕ್ಷಿಸಿ ಕೊಳ್ಳಿ, ಸ್ವಾಮಿ.

(ಉ.) ಸಮಾಧಾನದಲ್ಲಿ ಅವರು ವಿಶ್ರಮಿಸುವದಾಗಲಿ!

(ಜ.) ಹಾಗಾಗಲಿ, ಸ್ವಾಮಿ.

(ಉ.) ಕರ್ತನೇ, ನಂಮ ಪ್ರಾರ್ಥನೆಯಂನು ಆಲೈಸಿಕೊಳ್ಳಿ;

(ಜ.) ನಾವು ಕೂಗುವ ಶಬ್ದ ದೇವರವರ ಸಂನಿಧಾನದ ಪರಿಯಂತರಕ್ಕೂ ಬರುವದಾಗಲಿ.

ಪ್ರಾರ್ಥಿಸಿಕೊಂಬುವದು.

ಸಮಸ್ತ ವಿಶ್ವಾಸಿಗಳ ಸೃಷ್ಟಿಕರ್ತರೂ ರಕ್ಷಕರೂ ಆಗಿರುವಂಥ ಸರ್ವೇಶ್ವರಾ, ಮೃತವಾದವರಿಗಾಗಿ ನಾವು ಮಾಡುವ ಭಕ್ತಿಯುಳ್ಳ ಬಿಂನಹಂಗಳಂನು ಅಂಗೀಕರಿಸಿ, ಅಂಥವರು ಕೇವಲವಾಗಿ ಅಪೇಕ್ಷಿಸುವ ಪಾಪದ ಕ್ಷಮೆಯಂನು ಕರುಣಿಸಬೇಕೆಂದು ದೇವರವರಂನು ಬೇಡಿಕೊಳ್ಳುತ್ತಿದ್ದೇವೆ. ಸದಾಕಾಲವು ಜೀವಿತರಾದ ಸರ್ವೇಶ್ವರಾ, ಇಂಥ ಬಿಂನಹವಂನು ಕೃಪೆಯೊಂದಿಗೆ ಲಾಲಿಸಿರಿ, ಸ್ವಾಮಿ.

ನಿತ್ಯ ಪಿತನೇ, ಮಾತಾ ಪಿತೃಗಳಂನೂ ಕಳತ್ರರಂನೂ ಮಿತ್ರರಂನೂ ಉಪಕಾರಿಗಳಂನೂ ಮುಂತಾದವರಂನೂ ತಕ್ಕ ವಿಧವಾಗಿ ಸ್ನೇಹಿಸಿ ಅವರಿಗೆ ಬೇಕಾದ ಮೇಲುಗಳನ್ನು ಮಾಡ ಕಲ್ಪಿಸಿದಿರೇ! ಆದಕಾರಣ, ನಂಮಂನು ಹುಟ್ಟಿಸಿ ಧರ್ಮವಾಗಿ ಸಾಕಿ ಸಲಹಿದವರೂ, ಬಗೆ ಬಗೆ ಉಪಕಾರಗಳಂನು ನಮಗೆ ಮಾಡಿದವರೂ, ನಂಮ ಬಂಧು ಮಿತ್ರರು ಮುಂತಾದವರೂ ವೇದನೆಯೆಲ್ಲಾ ನೀಗಿ ನಿತ್ಯಕಾಲವು ನಿಂಮಂನು ಆನಂದದೊಂದಿಗೆ ದರ್ಶಿಸಿಕೊಂಡಿರುವ ಹಾಗೆ, ದೇವರವರು ಕಟಾಕ್ಷಿಸ ಬೇಕೆಂದು ಬೇಡಿಕೊಳ್ಳುತ್ತೇವೆ. ಆಮೆನ್ ಜೇಸು.

(ಉ.) ಮೃತವಾದ ವಿಶ್ವಾಸಿಗಳಿಗಾಗಿ ಬೇಡಿ ಕೊಳ್ಳುವದಾಗಲಿ;

(ಜ.) ನಿತ್ಯ ವಿಶ್ರಮವಂನು ಅವರಿಗೆ ಪಾಲಿಸಿರಿ, ಸ್ವಾಮಿ; ನಿತ್ಯ ಜ್ಯೋತಿಯೂ ಅವರಿಗೆ ಪ್ರಕಾಶಿಸುವದಾಗಲಿ.

ಮಂಗಳವಾರಕ್ಕೆ.

ಕಾವಲಾದ ಸಂಮನಸ್ಸಿನ ಪ್ರಾರ್ಥನೆ.

✝ ಸ್ವಾಮಿ, ಕೃಪೆಯಂನು ಮಾಡಿ;...(೪೭೧ನೇ ಪರ್ಟ.)

ಸಂಮನಸ್ಸುಗಳಿಗೆ ರಾಣಿಯಾಗಿದ್ದಂಥಾ ಅರ್ಚ್ಯ ಮರೀಯೇ,

ಅರ್ಚ್ಯಣ ಮಿಖಯೇಲೇ,

ಅರ್ಚ್ಯಣ ಗಬ್ರಿಯೇಲೇ,

ಅರ್ಚ್ಯಣ ರಫಯೇಲೇ,

ನಮಗೆ ಕಾವಲಾಗಿರುವಂಥಾ ಅರ್ಚ್ಯಣ ಸಂಮನಸ್ಸಾದವರೇ,

ನಂಮಂನು ಕಾಯುವದರಲ್ಲಿ ಮಹಾ ಪ್ರಮಾಣಿಕ್ಯರಾಗಿರುವ ಸಂಮನಸ್ಸಾದವರೇ,

ನಂಮಂನಾದರಿಸ ಯಾವಾಗಲೂ ಚಿಂತಿಸುವಂಥಾ ಸಂಮನಸ್ಸಾದವರೇ,

ಮಹಾ ಮರಿಂಮೇ ಪ್ರತಾಪವಲ್ಲಭವುಳ್ಳಂಥಾ ಸಂಮನಸ್ಸಾದವರೇ,

ನಮಗಾಗಿ ಬೇಡಿ ಕೊಳ್ಳಿ.

ಬೊಂಕರದ ಸತ್ಯ ಸಾಕ್ಷಿಯಾಗಿರುವಂಥಾ ಸಂಮನಸ್ಸಾದವರೇ,

ನಮಗೆ ಅಗಲಿ ಬಿಡದ ಸಂಗಡಿಗರಾಗಿರುವಂಥಾ ಸಂಮನಸ್ಸಾದವರೇ,

ಈ ಪರದೇಶದಲ್ಲಿ ಆತ್ಮಗಳಿಗೆ ಉಪಶಮಿಕರಾಗಿರುವಂಥಾ ಸಂಮನಸ್ಸಾದವರೇ,

ಮಹಾ ಜ್ಞಾನ ವಿವೇಕದೊಂದಿಗೆ ನಡಿಸುವವರಾಗಿದ್ದಂಥಾ ಸಂಮನಸ್ಸಾದವರೇ,

ಪರಿಶುದ್ಧ ವಿರಕ್ತವುಳ್ಳ ಸ್ನೇಹಿತರಾಗಿರುವಂಥಾ ಸಂಮನಸ್ಸಾದವರೇ,

ದಯಾಭರಿತರಾದ ಮಂದೇ ಕಾವಲಾಗಿರುವಂಥಾ ಸಂಮನಸ್ಸಾದವರೇ,

ವಿಮಲತನಕ್ಕೆ ಕಾವಲಾಗಿರುವಂಥಾ ಸಂಮನಸ್ಸಾದವರೇ,

ಉತ್ತಮಾಲೋಚನೆಗಳನ್ನು ಪ್ರೇರೇಪಿಸುವಂಥಾ ಸಂಮನಸ್ಸಾದವರೇ,

ಶಾಂತ ದಯದೊಂದಿಗೆ ಬುದ್ಧಿಮತಿಗಳನ್ನು ಕೇಳುವಂಥಾ ಸಂಮನಸ್ಸಾದವರೇ,

ಹೃದಯಗಳಿಗೆ ಪ್ರಕಾಶ ತರುವಂಥಾ ಸಂಮನಸ್ಸಾದವರೇ,

ಏಕಾಂತದಲ್ಲಿ ಜ್ಞಾನ ಕಿರಣಗಳ ಬೀಸುವಂಥಾ ಸಂಮನಸ್ಸಾದವರೇ,

ನಮಗಾಗಿ ಬೇಡಿ ಕೊಳ್ಳಿ.

ಅಗೋಚರವಾದವರಾಗಿದ್ದಾಗ್ಯೂ ದಾರಿ ತೋರಿಸುವವರಾಗಿರುವಂಥಾ ಸಂಮನಸಾದವರೇ,

ಸಮಸ್ತ ಕಾರ್ಯಗಳಂನು ಕ್ರಮದೊಂದಿಗೆ ನಡಿಸುವಂಥಾ ಸಂಮನಸ್ಸಾದವರೇ,

ಬಲಹೀನದಲ್ಲಿ ನಮಗೆ ಆಶ್ರಯವಾಗಿರುವಂಥಾ ಸಂಮನಸ್ಸಾದವರೇ,

ಸರ್ವೇಶ್ವರನ ಬಳಿಯಲ್ಲಿ ನಮಗಾಗಿ ಬಹು ಪ್ರೀತಿಕರವಾದ ಮನವಿಗಳಂನು ಮಾಡುವಂಥಾ ಸಂಮನಸ್ಸಾದವರೇ,

ದೇವ ಕೃಪೆಯ ಸಿಂಹಾಸನಕ್ಕೆ ನಂಮ ಜಪಗಳಂನು ತಂದೊಪ್ಪಿಸುವಂಥಾ ಸಂಮನಸ್ಸಾದವರೇ,

ಬಲವುಳ್ಳ ಸಹಾಯಸ್ತರಾಗಿರುವಂಥಾ ಸಂಮನಸ್ಸಾದವರೇ,

ನಂಮ ಶತ್ರುಗಳೊಂದಿಗೆ ಯುದ್ಧ ಮಾಡುವವರಲ್ಲಿ ಎಂದಿಗಾದರೂ ಅಪಜಯ ಪಡದಂಥಾ ಸಂಮನಸ್ಸಾದವರೇ,

ಪಿಶಾಚಿಗಳಿಗೆ ಭಯಂಕರವಾದ ಚಾಟಿಯಾದಂಥಾ ಸಂಮನಸ್ಸಾದವರೇ,

ತಪ್ಪು ಮಾಡುವವರಂನು ಖಂಡಿಸುವಂಥಾ ಸಂಮನಸ್ಸಾದವರೇ,

ಭದ್ರ ತಪ್ಪಿದ ಸಮಯಗಳಲ್ಲಿ ಸ್ಥಿರ ಪಡಿಸುವಂಥಾ ಸಂಮನಸ್ಸಾದವರೇ,

ನಮಗಾಗಿ ಬೇಡಿಕೊಳ್ಳಿ

ರೋಗಾದಿಗಳಲ್ಲಿ ಒತ್ತಾಸೆಯಾಗಿರುವಂಥಾ ಸಂಮನಸ್ಸಾದವರೇ,
ದುಃಖದಲ್ಲಿ ಉಪಶಮಿಸುವಂಥಾ ಸಂಮನಸ್ಸಾದವರೇ,
ಮರಣಾವಸ್ಥೆಯಲ್ಲಿ ಆದರಣೆ ಮಾಡುವಂಥಾ ಸಂಮನಸ್ಸಾದವರೇ,
ಜ್ಞಾನ ಯುದ್ಧದಲ್ಲಿ ಧೈರ್ಯ ಬರಮಾಡುವಂಥಾ ಸಂಮನಸ್ಸಾದವರೇ,
ಜಯಶಾಲಿಗಳಿಗೆ ದೇವ ಕೃಪೆಯಿಂದ ಕಿರೀಟವನ್ನು ಕಟ್ಟುವಂಥಾ ಸಂಮನಸ್ಸಾದವರೇ,
ಪವಿತ್ರವಾದ ಆತ್ಮಗಳನ್ನು ಕೈಕೊಳ್ಳುವಂಥಾ ಸಂಮನಸ್ಸಾದವರೇ,
ಯುದ್ಧ ಸಭೆಗೆ ವಜ್ರ ಕಂಭವಾಗಿರುವ ರಾವಲಾದ ಸಂಮನಸ್ಸಾದವರೇ,
ನವವಿಳಾಸ ಸಭೆಗಳಾಗಿರುವಂಥಾ ಸರಲ ಪರಿಶುದ್ಧ ಸಂಮನಸ್ಸಾದವರುಗಳಿರಾ,

ನಮಗಾಗಿ ಬೇಡಿ ಕೊಳ್ಳಿ.

† ಲೋಕದ ಪಾಪಗಳ.... (೪೭೭ ನೇ ಪುಟ.)

(ಉ.) ಭಯಂಕರವಾದ ತೀರ್ಪಿಯ ದಿನದಲ್ಲಿ ನಾವು ನಿತ್ಯ ಶಪನೆಗಳಿಗೆ ಒಳಗಾಗದ ಹಾಗೆ,

(ಜ.) ನಮಗೆ ರಾವಲಾಗಿರುವ ಸಮ್ಮನಸ್ಸಾದವರೇ, ಜ್ಞಾನ ಯುದ್ಧದಲ್ಲಿ ನಂಮಂನು ಕಾಪಾಡ ಚಿತ್ತೈಸಿರಿ.

ಪ್ರಾರ್ಥಿಸಿ ಕೊಂಬುವದು.

ಸರ್ವೇಶ್ವರಾ ಸ್ವಾಮೀ, ಮನೋವಾಕ್ಕಿಗೆಟ್ಟದ ನಿಂಮ ಕೃಪೆಯುಳ್ಳ ಪರಾಮರಿಕೆಯಿಂದ ನಂಮಂನು ಕಾಯುವದಕ್ಕೆ ದೇವರವರ ಪರಿಶುದ್ಧ ಸಮ್ಮನಸ್ಸುಗಳಂನು ನೇಮಿಸಿ ಕಳುಹಿಸ ಚಿತ್ತವಾದಿರೀ; ನಿಂಮಂನು ಬೇಡಿಕೊಳ್ಳುವಂಥ ನಾವು ಅವರ ಆದರಣೆಯಲ್ಲಿ ಯಾವಾಗಲೂ ಕಾಪಾಡಲ್ಪಡಲೂ ನಿತ್ಯವಾಗಿ ಅಂಥವರ ಆನಂದ ಐಕ್ಯದಲ್ಲಿ ಬಾಳಿಕೊಂಡಿರಲೂ ನಮ್ಮ ಆಳಿದವರಾಗಿರುಂಥ ಜೇಸುಕ್ರೀಸ್ತುವಿನ ಮುಖವಂನು ನೋಡಿ ಅನುಗ್ರಹಿಸಿರಿ, ಸ್ವಾಮೀ. ಆಮೆನ್ ಜೇಸು.

ಬುಧವಾರಕ್ಕೆ.

ಅರ್ಚ್ಯ. ಜೋಸೇಫನವರ ಪ್ರಾರ್ಥನೆ.

✝ ಸ್ವಾಮೀ, ಕೃಪೆಯಂನು ಮಾಡಿ... (೪೬೧ ನೇ ಪ್ರ.)

ಅರ್ಚ್ಯ. ಜೋಸೇಫನವರ ಕನ್ಯಾ ಪತ್ನಿಯಾದಂಥಾ ಅರ್ಚ್ಯ. ಮರೀಯೇ,

ಅರ್ಚ್ಯ. ಕನ್ಯೆ ಮರೀಯಮ್ಮನವರಿಗೆ ಪರಿಶುದ್ಧ ಭರ್ತನಾಗುವದಕ್ಕೆ ಸಕಲ ಪುರುಷರೊಳಗೆ ದೇವರಿಂದ ತೆರೆದುಕೊಳ್ಳಲ್ಪಟ್ಟ ಅರ್ಚ್ಯ. ಜೋಸೇಫನವರೇ,

} ನಮಗಾಗಿ ಬೇಡಿಕೊಳ್ಳಿ

ಮನೋವಾಕ್ಕಿಗೆಟ್ಟದ ಆಶೀರ್ವಾದ ಮೇಲು ವರಗಳಿಂದ ಭರಿತರಾದ ಅರ್ಚ್ಯ. ಜೋಸೇಫನವರೇ,

ಪಿತಾ ಪಿತೃಗಳಿಗೆ ಶ್ರೇಯೋವಂತರಾದ ಅರ್ಚ್ಯ. ಜೋಸೇಫನವರೇ,

ದೇವ ಮಾತೆಗೆ ಯೋಗ್ಯ ಸಹಾಯಕರಾದ ಅರ್ಚ್ಯ. ಜೋಸೇಫನವರೇ,

ಕನ್ಯಾತಾಯಾದವಳಿಗೆ ವಿರ್ತ್ರ ಭರ್ತ್ರರಾದ ಅರ್ಚ್ಯ. ಜೋಸೇಫನವರೇ,

ಕನ್ಯಾವ್ರತವ ಮೀರದ ಸಂಸಾರಕ್ಕೆ ಮೊದಲನೇ ಮಾತೃಕೆಯಾದ ಅರ್ಚ್ಯ. ಜೋಸೇಫನವರೇ,

ಈ ಭೂವನದಲ್ಲಿ ದೇವ ಮಾತೆಗೆ ಆದರಣೆಯಾದ ಅರ್ಚ್ಯ. ಜೋಸೇಫನವರೇ,

ದಾವಿದೆಂಬ ರಾಯನ ಪುತ್ರನಾದ ಅರ್ಚ್ಯ. ಜೋಸೇಫನವರೇ,

ದೇವ ಸುತನಾದವರು ನಿಂಮ ಕುಮಾರನೆಂದು ಎಣಿಸಲೂ ಕರೆಯಲೂ ಪಡುವದಕ್ಕೆ ಚಿತ್ತೈಸಿದ್ದರಿಂದ ಉಂನತವಾದ ಶ್ರೇಷ್ಟತ್ವವ ಹೊಂದಿದ ಅರ್ಚ್ಯ. ಜೋಸೇಫನವರೇ,

ಸರ್ವಾಧಿ ಕರ್ತರು ನಿಮಗೆ ವಿಧೇಯವಾದ ಕಾರಣ ಮಹಿಮೆ ಹೊಂದಿದ ಅರ್ಚ್ಯ. ಜೋಸೇಫನವರೇ,

ದಾವಿದೆಂಬ ಅರಸನ ಹಾಗೆ ತಂಮ ಹೃದ

ನಮಗಾಗಿ ಬೇಡಿ ಕೊಳ್ಳಿ.

ಯಕ್ಕೆ ಸಮರ್ಪಕವಾದವರೆಂದು ಸರ್ವೇಶ್ವರನಿಂದ ಅಂಗೀಕರಿಸಲ್ಪಟ್ಟ ಅರ್ಚ್ಯ. ಜೋಸೇಫನವರೇ,

ದಿವ್ಯ ಸಂಕಲ್ಪದ ಪರಮ ರಹಸ್ಯಗಳೊಳು ಶ್ರೇಷ್ಟವಾದ ರಹಸ್ಯವಂನು ದೇವರಿಂದ ತಿಳಿದುಕೊಳ್ಳುವದಕ್ಕೆ ಯೋಗ್ಯಸ್ಥರೆಂತ ಎಣಿಸಲ್ಪಟ್ಟ ಅರ್ಚ್ಯ. ಜೋಸೇಫನವರೇ,

ಈ ಭೂಲೋಕದ ಪ್ರಭುಗಳೊಳಗೆ ಒಬ್ಬನಾದರೂ ಅರಿಯದಿದ್ದಂಥ ಪರಮ ರಹಸ್ಯವಂನು ಅರಿಯುವದಕ್ಕೆ ವರವಂನು ಹೊಂದಿದ ಅರ್ಚ್ಯ. ಜೋಸೇಫನವರೇ,

ಅನೇಕ ರಾಯರುಗಳೂ ದೀರ್ಘದರ್ಶಿಗಳೂ ನೋಡಲೂ ಆಲೈಸಲೂ ಅಪೇಕ್ಷಿಸಿದ್ದಾಗ್ಯೂ, ನೋಡದೆಯೂ ಆಲೈಸದೆಯೂ ಹೋದ ರಕ್ಷಕರಂನು ನೋಡಿದ್ದೂ ಕೇಳಿದ್ದೂ ಅಲ್ಲದೆ, ಅವರಂನು ವಹಿಸಲೂ ನಡಿಸಲೂ ತಕ್ಕೈಸಲೂ ಮುದ್ದನ್ನಿಕ್ಕಲೂ ಕಾಪಾಡಲೂ ಪ್ರಾಪ್ತಹೊಂದಿದ ಅರ್ಚ್ಯ. ಜೋಸೇಫನವರೇ,

ಕನ್ಯಾ ಮಾತೆಗೆ ಹಿಂದಿನವರಾಗಿ ಮೊದಲೇ ಬಾಲರಾದ ಕರ್ತರಂನು ಆರಾಧಿಸಿದಂಥಾ ಅರ್ಚ್ಯ. ಜೋಸೇಫನವರೇ,

ಅವತರಿಸಿದ ದೇವಜ್ಞಾನವಾದವರಂನು ನಡಿಸಿದಂಥಾ ಅರ್ಚ್ಯ. ಜೋಸೇಫನವರೇ,

ನಮಗಾಗಿ ಬೇಡಿಕೊಳ್ಳಿ.

ಸರ್ವ ಲೋಕಗಳ ಪೋಷಕರನ್ನು ಸಲಹಿದಂಥಾ ಅರ್ಚ್ಯ. ಜೋಸೇಫನವರೇ,

ಮಾನವಾಗಿದ್ದ ದೇವ ವಾಕ್ಯಯಾದವರ ಸ್ವರವಾದಂಥಾ ಅರ್ಚ್ಯ. ಜೋಸೇಫನವರೇ,

ಪರಲೋಕದ ಬೊಕ್ಕಸವಾದವರನ್ನು ಕಾಪಾಡಿದಂಥಾ ಅರ್ಚ್ಯ. ಜೋಸೇಫನವರೇ,

ದೇವಾಲಯದಲ್ಲಿ ಸಮರ್ಪಿಸಲ್ಪಟ್ಟ ಲೋಕದ ರಕ್ಷಕರನ್ನು ರಕ್ಷಿಸಿದಂಥಾ ಅರ್ಚ್ಯ. ಜೋಸೇಫನವರೇ,

ಲೋಕದ ರಕ್ಷಕರಿಗೆ ಉದ್ಧಾರಕರಾದಂಥಾ ಅರ್ಚ್ಯ. ಜೋಸೇಫನವರೇ,

ಸರ್ವಾಂತದ ಪಾಲಕರಾದವರನ್ನು ನಷಿಸಿದಂಥಾ ಅರ್ಚ್ಯ. ಜೋಸೇಫನವರೇ,

ಪರದೇಶಿಯಾದ ದೇವರಿಗೆ ವಸ್ತಿಕೊಟ್ಟಂಥಾ ಅರ್ಚ್ಯ. ಜೋಸೇಫನವರೇ,

ಪರಮಾಲೋಚನೆಗೆ ಸಹಾಯಕರಾದಂಥಾ ಅರ್ಚ್ಯ. ಜೋಸೇಫನವರೇ,

ಸಮಸ್ತ ಕುಟುಂಬಗಳಲ್ಲಿ ಶ್ರೇಷ್ಠವೂ ಪರಿಶುದ್ಧವೂ ಆಗಿದ್ದ ಕುಟುಂಬಕ್ಕೆ ಯಜಮಾನರಾಗಿದ್ದಂಥಾ ಅರ್ಚ್ಯ. ಜೋಸೇಫನವರೇ,

ಪರಲೋಕದ ರಾಯನಿಂದಲೂ ರಾಣಿಯಿಂದಲೂ ಸೇವಿಸಲ್ಪಟ್ಟಂಥಾ ಅರ್ಚ್ಯ. ಜೋಸೇಫನವರೇ,

ನಮಗಾಗಿ ಬೇಡಿ ಕೊಳ್ಳಿ.

ಜೇಸುನಾಥರಿಗೂ ಕನ್ಯಾಮಾತೆಗೂ ಪ್ರೇಷ್ಠರಾದಂಥಾ ಅರ್ಚ್ಯ. ಜೋಸೇಫನವರೇ,

ಭೂವನದಲ್ಲಿ ಜನ್ಮಿಸಿದ ಪುರುಷರೊಳು ಸರಿಸಮಾನವನೊಬ್ಬನಿಲ್ಲದೆ ಆದಂಥಾ ಅರ್ಚ್ಯ. ಜೋಸೇಫನವರೇ,

ದೇವ ದೂತರುಗಳಿಗಿಂತ ಶ್ರೇಷ್ಠವಾದ ನಾಮವ ಹೊಂದಿದ ಮೇರೆಯಲ್ಲಿ ಅವರಿಗಿಂತಾ ಉತ್ತಮವಾದಂಥಾ ಅರ್ಚ್ಯ. ಜೋಸೇಫನವರೇ,

ಜೇಸುನಾಥರೂ ದೇವ ಮಾತೆಯೂ ತಂಮ ಮುಖದರ್ಶನದಿಂದಲೂ ವಾಕ್ಕಿನಿಂದಲೂ ಪ್ರವರ್ತನೆಯಿಂದಲೂ ನಿರಂತರವಾದ ಸಹವಾಸದಿಂದಲೂ ಅನೇಕ ವರುಷ ಕಾಲದೊಳು ಅನುಗ್ರಹಿಸಿದ ದೇವಿಷ್ಟ ಪ್ರಸಾದಗಳಿಂದ ಭರ್ತಿಯಾದಂಥಾ ಅರ್ಚ್ಯ. ಜೋಸೇಫನವರೇ,

ವಿರಕ್ತದಿಂದ ಮರಾ ವಿಮಲವಾದಂಥಾ ಅರ್ಚ್ಯ. ಜೋಸೇಫನವರೇ,

ನಮಗಾಗಿ ಬೇಡಿ ಕೊಳ್ಳಿ.

ಅತ್ಯಂತ ಮನೋದಾಕ್ಷಿಣ್ಯದಲ್ಲಿ ಅಧಿಕರಿಸಿದಂಥಾ ಅರ್ಚ್ಯ. ಜೋಸೇಫನವರೇ,

ದೇವ ಸ್ನೇಹದಾಗ್ನಿಯ ಆವಿಗೆಯಾದಂಥಾ ಅರ್ಚ್ಯ. ಜೋಸೇಫನವರೇ,

ಧ್ಯಾನ ಯೋಗದಲ್ಲಿ ಉಂನತವಾದಂಥಾ ಅರ್ಚ್ಯ. ಜೋಸೇಫನವರೇ,

ನೀತಿಪರರೂ ಶ್ರೇಯೋವಂತರೂ ಆದಂಥಾ ಅರ್ಚ. ಜೋಸೇಫನವರೇ,
ಜೇಸುನಾಥರ ತಿರು ಕರಗಳಲ್ಲಿಯೂ ದೇವ ಮಾತೆಯ ಆತುಕೊಳ್ಳುವದರಲ್ಲಿಯೂ ಭಾಗ್ಯವಾದ ಮರಣವಂನು ಹೊಂದಿದಂಥಾ ಅರ್ಚ. ಜೋಸೇಫನವರೇ,
ಜೇಸುನಾಥರೊಂದಿಗೆ ಉತ್ಥಾನವಾದವರೊಳಗೆ ಒಬ್ಬರಾದಂಥಾ ಅರ್ಚ. ಜೋಸೇಫನವರೇ,
ಆತ್ಮದಲ್ಲಿಯೂ ಶರೀರದಲ್ಲಿಯೂ ವಿಶೇಷ ಮಹಿಮೆಯ ವರಗಳಂನು ಅನುಭವಿಸುವಂಥಾ ಅರ್ಚ. ಜೋಸೇಫನವರೇ,
ದಿವ್ಯ ಕುಮಾರನ ಭದ್ರಾಸನಕ್ಕೂ ಮಾತೆಯ ಸಿಂಹಾಸನಕ್ಕೂ ಮಹಾ ಸಮೀಪವಾಗಿ ಕುಳಿತುಕೊಂಡಿರುವಂಥಾ ಅರ್ಚ. ಜೋಸೇಫನವರೇ,
ದೇವರಿಂದ ತಿಳಿದುಕೊಳ್ಳಲ್ಪಟ್ಟವರು ಕಡೇ ಹಾಯುವದಕ್ಕೆ ಮಹಾ ಸಹಾಯಕರಾಗಿರುವಂಥಾ ಅರ್ಚ. ಜೋಸೇಫನವರೇ,
ನಿಂಮ ಸಹೋದರರಾಗಿರುವ ಮನುಜರಲ್ಲಿ ಪ್ರಭುವಾದಂಥಾ ಅರ್ಚ. ಜೋಸೇಫನವರೇ,
ತಿರು ಸಭೆಗೆ ಭದ್ರವಾಗಿರುವಂಥಾ ಅರ್ಚ. ಜೋಸೇಫನವರೇ,
ನಿಂಮ ಪ್ರಜೆಗಳಿಗೆ ಸ್ಥಿರತ್ವವಾಗಿರುವಂಥಾ ಅರ್ಚ.

ನಮಗಾಗಿ ಬೇಡಿಕೊಳ್ಳಿ.

ಜೋಸೇಫನವರೇ, — ನಮಗಾಗಿ ಬೇಡಿ ಕೊಳ್ಳಿ.

ಮೃತವಾಗುವವರಂನು ಆಶ್ರಯಿಸುವಂಥಾ ಅರ್ಚ್ಯ. ಜೋಸೇಫನವರೇ, —ನಮಗಾಗಿ ಬೇಡಿ ಕೊಳ್ಳಿ.

ನಂಮ ಆಸ್ಪದಿರರಾಗಿರುವಂಥಾ ಅರ್ಚ್ಯ. ಜೋಸೇಫನವರೇ, — ನಮಗಾಗಿ ಬೇಡಿಕೊಳ್ಳಿ.

ಲೋಕದ ಪಾಪಗಳ. . . (೪೬೭ ನೇ ಪತ್ರ.)

(ಉ.) ಕ್ರೀಸ್ತು ಪಾಲಿಸಿದ ವಾಗ್ದತ್ತಗಳಿಗೆ ನಾವು ಪಾತ್ರರಾಗುವ ಹಾಗೆ,

(ಜ.) ಅರ್ಚ್ಯ. ಜೋಸೇಫನವರೇ, ನಮಗಾಗಿ ಬೇಡಿ ಕೊಳ್ಳಿ.

ಪ್ರಾರ್ಥಿಸಿ ಕೊಂಬುವದು.

ಸರ್ವ ಶಕ್ತಿಯುಂಟಾದ ನಿತ್ಯ ಸರ್ವೇಶ್ವರಾ, ದೇವರವರು ಅರ್ಚ್ಯ. ಕನ್ಯೆ ಮರೀಯಂಮನವರಿಗೆ ಪರಿಶುದ್ಧ ಭರ್ತನಾಗಲೂ ನಿಂಮ ದಿವ್ಯ ಕುಮಾರನಂನು ಈ ಭೂಲೋಕದಲ್ಲಿ ಪೋಷಕ ತಂದೆಯಾಗಲೂ ಅರ್ಚ್ಯ. ಜೋಸೇಫನವರಂನು ಮುಂದು ತಿಳಿದು ಕೊಂಡಿರೇ; ಅವರ ಪುಣ್ಯ ಫಲಗಳಂನು ನೋಡಿ, ಯಾವ ದೇಶದಲ್ಲಿಯೂ ಅಜ್ಞಾನವೂ ನೀಗಿ ಹೋಗಲೂ, ತಿರು ಸಭೆ ವರ್ಧಿಸಲೂ, ಅವರಂನು ನಂಬುವಂಥಾ ನಾವು ಪುಣ್ಯದಲ್ಲಿ ನೆಲೆನಿಂತು ಒಳ್ಳೇ ಮರಣವ ಹೊಂದಲೂ, ಅವರೊಂದಿಗೆ ಯಾವಾಗಲೂ ದೇವರವರಂನು ಸ್ತುತಿಸಿ ಮೋಕ್ಷಭಾಗ್ಯವಂನು ಅನುಭವಿಸಲೂ ಕೃಪೇ ಮಾಡಿ, ಸ್ವಾಮಿ. ಇಂಥಾ ಬಿಂನಹಗಳೆಲ್ಲಾ ನಿಂಮಾ

ಡನೆಯೂ ಸ್ಪೀರಿತು ಸಾಂರ್ತುವಿನೊಡನೆಯೂ ನಿತ್ಯ ಜೀವಿತರಾಗಿಯೂ ರಾಜ್ಯ ಭಾರವಂನು ಮಾಡುವವರಾಗಿಯೂ ಇರುವ ಜೇಸುನಾಥರ ತಿರು ಮುಖಾ ನೋಡಿ ಕರುಣಿಸಿರಿ, ಸ್ವಾಮೀ. ಆಮೆನ್ ಜೇಸು.

ಬೃಹಸ್ಪತಿವಾರಕ್ಕೆ.

ಸತ್ ಪ್ರಸಾದದ ಪ್ರಾರ್ಥನೆ.

ಸ್ವಾಮೀ, ಕೃಪೆಯಂನು ಮಾಡಿ; ...(೪೬೧ ನೇ ಪಕ್ಕ.)

ಪರಲೋಕದ ದೆಸೆಯಿಂದ ಇಳಿದ ಜೀವವುಳ್ಳ ಆಹಾರವೇ,
ಸತ್ ಪ್ರಸಾದದಲ್ಲಿ ಅದೃಶ್ಯವಾದಂಥಾ ದೇವ ರಕ್ಷಕರೇ,
ಮೋಕ್ಷವ ಹೊಂದುವವರಂನು ಪೋಷಿಸುವಂಥಾ ಧಾನ್ಯವೇ,
ವಿರಕ್ತರಂನು ಬೆಳೆಸುವಂಥಾ ರಸವೇ,
ರಾಯರುಗಳಿಗೆ ಯೋಗ್ಯಾಮೃತವಾದಂಥಾ ಅತ್ಯಂತ ಸಾರವುಳ್ಳ ಅಪ್ಪವೇ,
ನಿರಂತರವಾದ ಬಲಿಯೇ,
ನಿರ್ಮಲವಾದ ಕಾಣಿಕೆಯೇ,

ನಮಗೆ ದಯೆ ಮಾಡಿ, ಸ್ವಾಮೀ.

ನಿಷ್ಕಳಂಕವಾದ ಕೆಂಗುರೀ ಮರಿಯೇ,
ಅತಿ ವಿಮಲವಾದ ಔತನವೇ,
ಸಂಮನಸ್ಸುಗಳ ಆಹಾರವೇ,
ರಹಸ್ಯವಾದ ಮಂಣವೆಂಬಂಥಾ ಭೋಜನವೇ,
ಸಮಸ್ತ ದೇವ ಅದ್ಭುತಿಗಳಿಗೆ ಸ್ಮರಣೆಯೇ,
ಸ್ವಭಾವಕ್ಕೆ ಮೇಲಾದ ಅಪ್ಪವೇ,
ಮಾಂಸವಾದ ದೇವ ವಾರ್ತೆಯಾದವರೇ,
ನಂಮೊಳು ವಾಸವಾಗಿರುವಂಥಾ ದಯಾಪರರಾದವರೇ,
ದೈವೀಕವಾದ ನೈವೇದ್ಯವೇ,
ಪರಮ ಆಶೀರ್ವಾದದ ಪಾತ್ರೆಯೇ,
ವಿಶ್ವಾಸದ ಪರಮ ರಹಸ್ಯವೇ,
ಎಲ್ಲಕ್ಕಿಂತಲೂ ಮಹಾ ಪೂಜ್ಯವಾದ ದೇವ ದ್ರವ್ಯ ಅನುಪಾನವೇ,
ಎಲ್ಲಕ್ಕಿಂತಲೂ ಪವಿತ್ರವಾದ ಯಜ್ಞವೇ,

ನಮಗೆ ದಯಾ ಮಾಡಿ, ಸ್ವಾಮೀ.

ಜೀವಂತರಿಗೂ ಮೃತವಾದವರಿಗೂ ದೇವ ಕೃಪಾ ಕಟಾಕ್ಷವಂನು ಪಡಿಸುವ ತರ್ಪಣೆಯಾದ ಬಲಿಯೇ,
ಪಾಪದಲ್ಲಿ ಬೀಳದ ಹಾಗೆ ದಿವ್ಯಸಂರಕ್ಷಣೆಯೇ,
ಸಮಸ್ತ ಅದ್ಭುತಗಳೊಳಗೆ ಅತಿಶಯವಾದ ಅದ್ಭುತವೇ,

ಸ್ವಾಮಿ ಅನುಭವಿಸಿದ ಪಾಡುಗಳ ಮಹಾ ತಿರು ಸ್ಮರಣೆಯೇ,
ದತ್ತಗಳೊಳಗೆ ಉತ್ತಮೋತ್ತಮ ದತ್ತವೇ,
ಸರ್ವೇಶ್ವರನ ಅಂತಃಕರುಣದ ಪ್ರಧಾನ ದೃಷ್ಟಾಂತವೇ,
ದೇವ ಉದಾರತ್ವದ ಪ್ರವಾಹವೇ,
ಮಹಾ ಪೂಜ್ಯವೂ ಮಹಾ ಘನವೂ ಆದಂಥಾ ರಹಸ್ಯವೇ,
ಅಮರತ್ವಕ್ಕೆ ಸಂಜೀವನ ಕರಣಿಯೇ,
ಮಹಾ ವಿನಯ ಭಯಕ್ಕೆ ಯೋಗ್ಯವೂ ಜ್ಞಾನ ಜೀವಕ್ಕೆ ಮೂಲವೂ ಆಗಿರುವಂಥಾ ದೇವ ದ್ರವ್ಯ ಅನುಮಾನವೇ,
ದೇವ ವಾಕ್ಯದ ಸರ್ವ ವಲ್ಲಭತ್ವದಿಂದ ಮಾಂಸವಾಗ ಮಾಡಲ್ಪಟ್ಟಂಥಾ ಅಪ್ಪವೇ,
ರಕ್ತ ಚೆಲ್ಲದ ಬಲಿಯೇ,
ಸಹಾತನಸ್ಥನೂ ಭೋಜನವೂ ಆಗಿದ್ದಂಥಾ ಕರ್ತನೇ,
ಸಂಮನಸ್ಸುಗಳು ಪರಿಚಾರಕರಾಗಿ ಬಡಿಸುವಂಥಾ ಮಹಾ ಅಮೃತವಾದ ಔತಣವೇ,
ಅಂತಃಕರುಣದ ದೇವ ದ್ರವ್ಯ ಅನುಮಾನವೇ,
ಸ್ನೇಹದ ಬಂಧನವೇ,
ತಂಮನ್ನು ತಾವೇ ಒಪ್ಪಿಸಿ ತಂಮಿಂದ ತಾವೇ

ನಮಗೆ ದಯಾ ಮಾಡಿ, ಸ್ವಾಮೀ.

ಒಪ್ಪಿಸಲ್ಪಡುವಂಥಾ ನೈವೇದ್ಯವೇ, — ನಮಗೆ ದಯಾ ಮಾಡಿ, ಸ್ವಾಮಿ.

ನಿಜಬುಗ್ಗೆಯಲ್ಲಿ ಅನುಭವಿಸಲ್ಪಡುವಂಥಾ ಜ್ಞಾನ ಅಮೃತವೇ, — ನಮಗೆ ದಯಾ ಮಾಡಿ, ಸ್ವಾಮಿ.

ಭಕ್ತಿಯುಳ್ಳ ಆತ್ಮಗಳಿಗೆ ಸಂತೃಪ್ತಿಯೇ, — ನಮಗೆ ದಯಾ ಮಾಡಿ, ಸ್ವಾಮಿ.

ದೇವಿಷ್ಟ ಪ್ರಸಾದದಲ್ಲಿ ಸಾಯುವವರಿಗೆ ಮೋಕ್ಷ ದಾರಿಯಲ್ಲಿ ಆದರಣೆಯಾದ ಭೋಜನವೇ, — ನಮಗೆ ದಯಾ ಮಾಡಿ, ಸ್ವಾಮಿ.

ಬರುವ ಮಹಿಮೆಗೆ ಸಂಚಕಾರವೇ, — ನಮಗೆ ದಯಾ ಮಾಡಿ, ಸ್ವಾಮಿ.

ದಯಾಪರರಾಗಿದ್ದು, — ನಂಮ ಪಾಪಗಳ ತಾಳಿಕೊಳ್ಳಿ, ಸ್ವಾಮಿ.

ದಯಾಪರರಾಗಿದ್ದು, — ನಂಮ ಪ್ರಾರ್ಥನೇ ಪ್ರಕಾರ ದಯಾ ಮಾಡಿ, ಸ್ವಾಮಿ.

ನಿಂಮ ತಿರು ಶರೀರವಂನೂ ತಿರು ರಕ್ತವಂನೂ ಅಯೋಗ್ಯವಾಗಿ ತೆಗೆಯದ ಹಾಗೆ, — ನಂಮಂನು ರಕ್ಷಿಸಿಕೊಳ್ಳಿ, ಸ್ವಾಮಿ.

ಮಾಂಸದ ಆಶಾಪಾಶಗಳೊಳಗಿಂದ, — ನಂಮಂನು ರಕ್ಷಿಸಿಕೊಳ್ಳಿ, ಸ್ವಾಮಿ.

ದೃಷ್ಟಿಯ ದುರಿಚ್ಛೆಗಳಿಂದ, — ನಂಮಂನು ರಕ್ಷಿಸಿಕೊಳ್ಳಿ, ಸ್ವಾಮಿ.

ಜೀವದ ಅಹಂಕಾರದಿಂದ,

ಪಾಪಕ್ಕೆ ಹೇತುವೆಯಾದ ಸಮಸ್ತ ಸಮಯಗಳೊಳಗಿಂದ,

ಪಾಸ್ಖಾವೆಂಬ ಈ ದಿವ್ಯ ಭೋಜನವಂನು ತಮ್ಮ ಶಿಷ್ಯರುಗಳ ಸಂಗಡಲಾಗಿ ಭೋಜಿಸ ತಾವು ಕೊಂಡಿದ್ದ ಅಪೇಕ್ಷೆಯಂನು ನೋಡಿ,

ನಿಮ್ಮ ಶಿಷ್ಯರ ಪಾದಗಳ ತೊಳೆಯುವಲ್ಲಿ ನೀವು ತೋರಿಸಿದ ಅತ್ಯಂತ ದಾಕ್ಷಿಣ್ಯವಂನು ನೋಡಿ,

ದೇವರವರು ಸತ್ ಪ್ರಸಾದವೆಂಬ ಈ ಪರಮ ದೇವ ದ್ರವ್ಯ ಅನುಮಾನವಂನು ಕಲ್ಪಿಸುವಾಗ ಕರುಣಿಸಿದ ಮಹಾ ಕಾಂಕ್ಷೆಯಾದ ಸ್ನೇಹವಂನು ನೋಡಿ,

ಪೀಠದ ಮೇಲೆ ನಮಗಾಗಿ ಇರಿಸಿದ ನಿಂಮ ಬೆಲೆ ಇಲ್ಲದ ರಕ್ತವಂನು ನೋಡಿ,

ಇಂಥಾ ನಿಂಮ ಶರೀರದಲ್ಲಿ ನಮಗಾಗಿ ಧರಿಸಿದ ಪಂಚ ಘಾಯಗಳಂನು ನೋಡಿ,

ಒಂದೊಂದು [illegible] ಒಮ್ಮೆ.

ಪಾಪಿಗಳಾಗಿರುವ ನಾವು ದೇವರವರಂನು ಬೇಡಿಕೊಳ್ಳುತ್ತಿದ್ದೇವೆ:— ಬೇಡಿ ಕೊಳ್ಳುವ ನಂಮಂನು ಆಲೈಸಿರಿ, ಸ್ವಾಮಿ.

ಈ ಪರಮ ರಹಸ್ಯದ ಮೇಲೆ ವಿಶ್ವಾಸ ವಿನಯ ಭಕ್ತಿ ನಮ್ಮಲ್ಲಿ ಅಭಿವೃದ್ಧಿ ಮಾಡಿ ಕಾಪಾಡುವಹಾಗೆ,— ಬೇಡಿ ಕೊಳ್ಳುವ ನಂಮಂನು ಆಲೈಸಿರಿ, ಸ್ವಾಮಿ.

ಉತ್ತಮ ಪಾಪ ಸಂಕೀರ್ತನದಿಂದ ಆಗಾಗ್ಯೆ ಸತ್ ಪ್ರಸಾದವಂನು ತೆಕ್ಕೊಳ್ಳುವದಕ್ಕೆ ನಮಗೆ ಪ್ರಾಪ್ತಿ ಬರುವ ಹಾಗೆ,

ಸರಲ ಪತಿತತನದಿಂದಲೂ ಕಪಟದಿಂದಲೂ ಹ್ರುದಯದಂಧಕಾರದಿಂದಲೂ ನಮ್ಮಂನು ರಕ್ಷಿಸುವ ಹಾಗೆ,

ಈ ಪರಿಶುದ್ಧ ದೇವ ದ್ರವ್ಯ ಅನುಮಾನದಿಂದ ಹುಟ್ಟುವ ಬೆಲೆಯಿಲ್ಲದ ದಿವ್ಯ ಫಲಗಳಂನು ನಮಗೆ ಫಲಿಸುವ ಹಾಗೆ,

ಪ್ರಾಣಂತ್ಯದಲ್ಲಿ ಈ ದಿವ್ಯ ಭೋಜನವಂನು ಭಕ್ಷಿಸಿದ್ದರಿಂದ ನಮಗೆ ಜ್ಞಾನ ಬಲ್ಮೆಯೂ ಆಧಾರವೂ ಬರುವ ಹಾಗೆ,

ಬೇಡಿ ಕೊಳ್ಳುವ ನಂಮಂನು ಆಲೈಸಿರಿ, ಸ್ವಾಮಿಾ.

ಸರ್ವೇಶ್ವರನ ಏಕ ಸುತನಾದವರೇ,

† ಲೋಕದ ಪಾಪಗಳ . . . (೪೬೭ ನೇ ಪತ್ರ.)

ಪ್ರಾರ್ಥಿಸಿಕೊಂಬುವದು.

ಈ ಆಶ್ಚರ್ಯವಾದ ದೇವ ದ್ರವ್ಯ ಅನುಮಾನದಲ್ಲಿ ದೇವರವರು ಅನುಭವಿಸಿದ ಕಷ್ಟಗಳ ಸ್ಮರಣೆಯುಂನು ನಮಗಾಗಿ ಇರಿಸ ಕರುಣಿಸಿದಂಥಾ ಸರ್ವೇಶ್ವರಾ, ನಿಂಮ ದಿವ್ಯ ಶರೀರದ ರಕ್ತದ ಪರಮ ರಹಸ್ಯಗಳಂನು ಮಹಾ ಪೂಜ್ಯವಾಗಿ ನಾವು ಆರಾಧಿಸಿದದರಿಂದ ನಂಮ ರಕ್ಷಣ್ಯದ ಅನಂತ ಫಲಾದಿಗಳಂನು ನಂಮಲ್ಲಿ ಎಂದೆಂದಿಗೂ ಅನುಭವಿಸುವ ಹಾಗೆ ಪಾಲಿಸ ಕರುಣಿಸಿರಿ, ಸ್ವಾಮಿಾ. ಪಿತನಾ

ದಂಥಾ ಸರ್ವೇಶ್ವರನೊಡನೆಯೂ ಸ್ಪಿರಿತು ಸಾಂತುವಾದ ಸರ್ವೇಶ್ವರನೊಡನೆಯೂ ಏಕ ತ್ರಿತ್ವದಲ್ಲಿ ಸರ್ವ ಸ್ವತಂತ್ರದಲ್ಲಿ ಸಮಸ್ತವಂನು ಸ್ಥಿರವಾಗಿ ಆಳಿಕೊಂಡಿರುವಂಥವರೇ. ಆಮೆನ್ ಜೇಸು.

ಶುಕ್ರವಾರಕ್ಕೆ.

ಜೇಸುನಾಥರ ತಿರು ಪಾಡುಗಳ ಪ್ರಾರ್ಥನೆ.

(೩೯೪ ನೇ ಪರ್ಕ.)

ಶನಿವಾರಕ್ಕೆ.

(೧೨೩ ನೇ ಪರ್ಕದಲ್ಲಿರುವ ದೇವರ ತಾಯ್ಯ ಪ್ರಾರ್ಥನೇ ಕೇಳಬರುದು, ಅಥವಾ ೪೯೫ ನೇ ಪರ್ಕದಲ್ಲಿ ಬರುವ ಉತ್ತರೀಯ ದೇವ ಮಾತೆಯ ಪ್ರಾರ್ಥನೇ ಕೇಳುವದು.)

ಅಜ್ಯ. ದೇವ ಮಾತೆಯ ತಿರು ಉತ್ತರೀಯದ ವಿವರವು.

ದೇವ ಮಾತೆಯ ಉತ್ತರೀಯವಾದದ್ದು ತಂಮ ಮೇಲೆ ಭಕ್ತಿಶಾಲಿಗಳಿಗೆ ತಿರು ಬಿರುದಾಗಿಯೂ ತಂಮ ಆದರಣೆಗೆ ಈಡಾಗಿಯೂ ಪರಲೋಕದ ರಾಣಿಯಾದವಳು ಅಜ್ಯ.

ಶಿಮೋನ್ ಸ್ತೋಕೆಂಬ ಮಹಾತ್ಮರಿಗೆ ಬಂದು ದರ್ಶನದಲ್ಲಿ ತಂದುಕೊಡ ಕರುಣಿಸಿದ ಗುರುತು ಕಾದು. ಆದ್ದರಿಂದ ಅದು ಸಮಸ್ತ ಭಕ್ತಿಶಾಲಿಗಳಿಗೆ ಎಷ್ಟೋ ಪೂಜ್ಯವೂ ಮುಖ್ಯವೂ ಆಗಿರತಕ್ಕದ್ದು! ಅಚ್ಯ೯. ಪ್ರಕಾಶನಾಥ ಮೊದಲಾದ ಅನೇಕ ಅರಸುಗಳೂ ಪ್ರಭುಗಳೂ ಅಸಂಖ್ಯವಾದ ವಿಶ್ವಾಸಿಗಳೂ ಇಂಥ ತಿರು ವಸ್ತ್ರವ ಮಹಾ ವಿನಯದೊಂದಿಗೆ ಧರಿಸಿಕೊಂಡರು. ಇಂಥ ಉತ್ತರೀಯದ ಮೂಲವಾಗಿ ನಡೆದ ಅದ್ಭುತಾದಿಗಳಂನು ಎಣಿಸಲು ತೀರದು. ಅವುಗಳಲ್ಲೊಂದಂನು ಕೇಳಿ ತೋರಿಸುವೆವು. ಫ್ರಾಂಸು ರಾಜ್ಯದಲ್ಲಿರುವ ಮೊಂಪೆಲಿಯುರೆಂಬ ಪಟ್ಣವಂನು ಲಗ್ಗೆ ಮಾಡುವಾಗ ಬಂಟನೊಬ್ಬನಿಗೆ ಬಂದೂಕಿನ ಗುಂಡು ಪಟ್ಟಿತು. ಆದರೆ ಅದು ರುಡುಕೆಗೆ ತೂತುಮಾಡಿ ತಿರು ಉತ್ತರೀಯದಲ್ಲಿ ಪಟ್ಟಮಾತ್ರದಲ್ಲಿ ಚಪ್ಪಟೆಯಾಗಿ ಬಿದ್ದು ಏನು ಮೋಸವ ಮಾಡದೆ ನಿಂತಿತು. ಸದರಿ ಯುದ್ಧದಲ್ಲಿ ಇದ್ದ ಫ್ರಾಂಸು ರಾಜ್ಯದ ರಾಯನಾದ ೧೩ ನೇ ಜ್ಞಾನಪ್ರಕಾಶರೆಂಬವರು ಇಂಥ ಅದ್ಭುತವಂನು ಆಶ್ಚರ್ಯದೊಂದಿಗೆ ಕಂಡು, ತಾವೂ ಮಹಾ ಭಕ್ತಿಯೊಂದಿಗೆ ತಿರು ಉತ್ತರೀಯವ ಪಡೆದು ಧರಿಸಿಕೊಂಡು ಬಂದರು. ಕೀಗಿರಲಾಗಿ ಉತ್ತರೀಯವಂನು ಭಕ್ತಿಯಾಗಿ ಧರಿಸಿಕೊಳ್ಳುವದರಿಂದಲೇ ತಂನಂನು ತಾನೇ ದೇವರ ತಾಯಾದವಳಿಗೆ ಶರಣಾಗತನೆಂಬದಾಗಿಯೂ ಅಂಥ ಆಳಿದವಳ ದಾಸರೊಳಗೆ ಒಬ್ಬನೆಂಬದಾಗಿಯೂ ಯಾವಾಗ್ಯೂ

ಅವಳ ಬೇಡುದಲೆ ಸಹಾಯವ ಕೋರಿಕೊಳ್ಳುವವನೆಂಬದಾಗಿಯೂ ಪ್ರಸಿದ್ಧವಾಗಿ ತೋರಿಸುವಕಾರಣ, ಇದೇ ಉತ್ತಮ ಪುಣ್ಯದ ಸಾಧನವೆಂದು ನಂಬ ಬೇಕಾಗಿದೆ.

ಮತ್ತೂ ಉತ್ತರೀಯ ಸಭೆಗೆ ಹೆಸರುಕೊಟ್ಟವನು ಕರ್ಮೇಲೆಂಬ ಸನ್ಯಾಸಿ ಮತಸ್ತರಿಂದ ಮಾಡಲ್ಪಡುವ ಜಪ ತಪ ಧ್ಯಾನ ಮುಂತಾದ ಸುಕೃತ್ಯಗಳಿಗೆ ಪಾಲುಗಾರನಾಗುವದಲ್ಲದೆ, ಅರ್ಚ್ಯ. ಪಾಪು ಸ್ವಾಮಿಗಳು ತಿರು ಉತ್ತರೀಯ ಸಭೆಯವರಿಗೆ ಪಾಲಿಸಿದ ಅನೇಕ ಪುಣ್ಯ ಫಲಾದಿಗಳನ್ನು ಹೊಂದ ಸ್ವತಂತ್ರಿಸಿಕೊಳ್ಳುವನು.

ಉತ್ತರೀಯ ಸಭೆಯ ಫಲಗಳ ವಿವರವು.

೧ ನೇದು. — ಪರಿಪೂರ್ಣ ಫಲಗಳು.

ಉತ್ತರೀಯ ಸಭೆಯವನು ಒಳ್ಳೇ ಪಾಪ ಸಂಕೀರ್ತನೇ ಮಾಡಿ ದೇವಪ್ರಸಾದವ ತೆಗದುಕೊಂಡು ಅರ್ಚ್ಯ. ಪಾಪು ಸ್ವಾಮಿಯವರ ಸುಕೃತಾಭಿಪ್ರಾಯಗಳಿಗಾಗಿ ಸ್ವಲ್ಪ ಹೊತ್ತು ಬೇಡಿಕೊಂಡರೆ, ಪಡೆಯಲಾಗುವ ಪರಿಪೂರ್ಣ ಫಲಗಳು ಯಾವವೆಂದರೆ:

೧. — ತಿರು ಉತ್ತರೀಯವ ಹೊಂದುವ ದಿವಸದಲ್ಲಿ, ಒಂದು ಪರಿಪೂರ್ಣ ಫಲವು.

೨. — ಉತ್ತರೀಯ ದೇವರತಾಯ ಹಬ್ಬದಲ್ಲಿ

ಅಲ್ಲವೇ ಅಂಥ ದಂಬರ್ಕೆ ಶೇರಿದ ಎಂಟು ದಿವಸಗಳೊಂದರಲ್ಲಿ, ಒಂದು ಪರಿಪೂರ್ಣ ಫಲವು.

೩. — ಮೇತ್ರಾಣಿಯವರ ಅಪ್ಪಣೇಮೇರೆಗೆ ಮಾಸದ ಒಂದು ಆದಿತ್ಯವಾರದಲ್ಲಿ ನಡೆಯುವ ಪ್ರದಕ್ಷಿಣಕ್ಕೆ ಬಂದವರಿಗೆ, ಒಂದು ಪರಿಪೂರ್ಣ ಪಲವು.

ಆದರೆ ವ್ಯಾಧಿ ಮೊದಲಾದ ವಿಘ್ನಗಳಿಂದ ಸದರಿ ಪ್ರದಕ್ಷಿಣಕ್ಕೆ ಬರಲಾರದೆ ಅವಕಾಶ ಪ್ರಾಪ್ತಿಸದ ವೇಳೆಯಲ್ಲಿ, ಪಾಪಸಂಕೀರ್ತನೇ ಮಾಡಲೂ ದಿವ್ಯ ಪ್ರಸಾದವ ಗ್ರಹಿಸಲೂ ಪ್ರತಿಜ್ಞೇ ಮಾಡಿಕೊಂಡು; ಉತ್ತಮ ಮನಸ್ತಾಪದ ಮಂತ್ರವಂನೂ ಐವತ್ತು ಪರಲೋಕದ ನಮೋದೇವ ಮಂತ್ರಗಳಂನೂ ಜಪಿಸಿದರೆ, ಇಂಥ ಪರಿಪೂರ್ಣ ಫಲವ ಪಡೆಯಬಹುದು.

೪. — ಮರಣದ ವೇಳೆಯಲ್ಲಿ ಬಾಯಿಂದ ನುಡಿಯಕೂಡದಾಗ ಮನದೊಳಾದರೂ ಜೇಸುವೆಂಬ ತಿರು ನಾಮವಂನು ಭಕ್ತಿಯೊಂದಿಗೆ ಉಚ್ಚರಿಸುವವರಿಗೂ ಪರಿಪೂರ್ಣ ಫಲ ಪ್ರಾಪ್ತಿಸುವದು.

೨ನೇದು. — ಭಾಗವಾದ ಜ್ಞಾನ ಫಲಗಳು.

---

೧. — ತಿರು ಉತ್ತರೀಯವ ಧರಿಸಿಕೊಂಡು ಮಾಸದಲ್ಲಿ ಒಂದಾವರ್ತಿ ಸತ್ ಪ್ರಸಾದವಂನು ತೆಗದು ಫಲಗ

ళిగె వాడికెయాద బేడుదలెగళంను బేడికొండరె, ౫ వరుష మత్తూ ౫ మండలద ఫలవు.

౨. — దేవర తాయాదవళ బేరె రుంబగళల్లి దేవ సత్ ప్రసాదవ తెగదు అదేప్రకార బేడికొండరె, ౩ వరుష మత్తూ ౩ మండలద ఫలవు.

౩. — వ్యాధికారరిగె గురుస్వామిగళు సత్ ప్రసాదవంను కొండుహోగువాగ సంగడ హోదరె, ౫ వరుష మత్తూ ౫ మండలద ఫలవు.

౪. — శుక్రవారవల్లదె బుధ శనివారగళల్లి శుద్ధ భోజనవంను అనుసరిసిదరె, ౩౦౦ దివసగళ ఫలవు.

౫. — దినకట్టియాగి దేవర తాయిగె స్తోత్రవాగి ౭ పరలోకద ౭ నమోదేవ మంత్రగళ బేడికొండరె, ౪౦ దివసగళ ఫలవు.

౬. — మృతవాద క్రీస్తువన అడకక్కె కల్లరే మట్టిగె హోదరె, ౧౦౦ దివసగళ ఫలవు.

౭. — ఉత్తరీయ మాతెయ పీఠక్కె ఆగువ దివ్య పూజే నోడువదక్కూ దరిద్రరిగె దాన ధర్మ మాడువదక్కూ ౧౦౦ దివసగళ ఫలవు.

ఈ ఫలగళెల్లవంను ఉత్తరిసువ స్థళద ఆత్మగళిగాగి ఒప్పిస బరుదు.

ಉತ್ತರೀಯ ಸಭೆಯ ಕಟ್ಟಳೆಗಳು.

---

೧. —ಅಂಥ ಸಭೆಗೆ ಹೆಸರು ಕೊಡುವದಕ್ಕೂ ಅದರ ಜ್ಞಾನ ಫಲಗಳನ್ನು ಸ್ವತಂತ್ರಿಸಿ ಕೊಳ್ಳುವದಕ್ಕೂ ಆಶೆಯುಳ್ಳವರು ಕರ್ಮೇಲೆಂಬ ಮಠದ ಸನ್ಯಾಸಿಯಿಂದಲಾದರೂ ಉತ್ತರೀಯವ ಕೊಡುವದಕ್ಕೆ ಅಧಿಕಾರ ಹೊಂದಿದ ಬೇರೆ ಗುರುಸ್ವಾಮಿಯಿಂದಲಾದರೂ ಅಂಥ ತಿರು ಉಡಿಗೆಯಂನು ಗ್ರಹಿಸ ಬೇಕಾಗಿದೆ.

೨. —ಅದನ್ನು ಎದೇಮೇಲೆಯೂ ಬೆನ್ನಿನಮೇಲೆಯೂ ನೆಲೆಯಾಗಿ ಬಿಟ್ಟು ಬಿಡದೆ ಧರಿಸಿ ಕೊಂಡಿರಬೇಕು. ಆದಾಗ್ಯೂ ಸ್ವಲ್ಪದಿವಸ ಮರೆತು, ಅಲ್ಲದೆ ಹೊಸದು ದೊರೆಯದೆ ಇದ್ದರೆ, ಮೋಸವಿಲ್ಲ. ಹೊಸದು ತಾರಿಕೊಳ್ಳುವದಕ್ಕೆ ಮಂತ್ರಿಸ ಕೆಲಸವಿಲ್ಲ.

೩. —ಆದರೆ ದುರ್ಬುದ್ಧಿಯಿಂದ ಬರು ದಿನಗಳು ವರ್ಜಿಸಿ ಬಿಟ್ಟಮೇಲೆ, ಪುನಃ ಗುರುವಿನ ಕೈಯಲ್ಲಿ ಅದನ್ನು ಪಡೆಯ ಬೇಕಾದೀತು.

ಉತ್ತರೀಯ ದೇವ ಮಾತೆಯ ಪ್ರಾರ್ಥನೆ.

---

† ಸ್ವಾಮಿ, ಕೃಪೆಯಂನು ಮಾಡಿ; ...(೪೮೧ ನೇ ಪಕ್ಕ.)

ಜನ್ಮಪಾಪದ ಕಳಂಕವಿಲ್ಲದೆ ಉದ್ಭವಿಸಿದ ತಾಯೇ, — ನಮಗಾಗಿ ಬೇಡಿ ಕೊಳ್ಳಿ.

ಸರ್ವ ಕಾಲಗಳಿಗೆ ಮುಂಚೆ ಅನಾದಿ ಪಿತನಾದ ವರ ದೇವಾಲೋಚನೆಯೊಳು ಉದ್ಭವವಾಗಿದ್ದಂಥಾ ಉತ್ತರೀಯದ ತಾಯೇ,

ಅವತರಿಸಿದ ದೇವ ಸುತನನ್ನು ಪಡೆದಂಥಾ ತಿರು ಕನ್ಯಾ ತಾಯೇ,

ಸ್ಪಿರಿತು ಸಾಂಕ್ತುವಿನೊಂದಿಗೆ ಪರಿಶುದ್ಧ ಸ್ನೇಹ ಬಂಧನೆಯಾಗಿದ್ದಂಥಾ ಕನ್ನಿಕೆಯೇ,

ಅಚ್ಯುತ ತಮ ತ್ರಿತ್ವದ ಉನ್ನತವಾದ ದೇವಾಲಯವೇ,

ಸಮಸ್ತ ಸೃಷ್ಟಿಗಳಿಗೂ ಪ್ರಧಾನವೂ ಅತಿಶ್ರೇಷ್ಟವೂ ಆಗಿದ್ದಂಥಾ ಅಳಿದವಳೇ,

ಆದಿ ತಂದೆಯ ದೆಶೆಯಿಂದ ದೋಷಕ್ಕೆ ತಗಲಿಕೊಳ್ಳದಂಥಾ ಪರಿಶುದ್ಧ ತಾಯೇ,

ನರಕದ ಸರ್ಪವನ್ನು ತುಳಿದು ನಗ್ಗಿರುವವಳೆಂದು ಆದಿಯಲ್ಲಿ ಅರುಹಿಸಲ್ಪಟ್ಟಂಥಾ ಪರಮ ಸ್ತ್ರೀಯೇ,

ಮೋಯಿಸೆಸೆಂಬವರು ಅಗ್ನಿಯೊಳ್ ಬೆಂದು ಹೋಗದ ಅದ್ಭುತವಾದ ವೃಕ್ಷದಿಂದ ಗುರಿಸಲ್ಪಟ್ಟಂಥಾ ಕನ್ಯಾ ತಾಯೇ,

ಪೂರ್ವ ವೇದದಲ್ಲಿ ಅನೇಕಾವರ್ತಿ ಮುಂದರುಹಿಸಲ್ಪಟ್ಟಂಥಾ ಪರಮ ಒಡತಿಯೇ,

ದೇವ ಕರುಣದಾಲೋಚನೆಯು ನೆರವೇರುವದಕ್ಕೆ ಯತ್ನವಾದಂಥಾ ಕರುಣಾಮೂರ್ತಿಯೇ,

ನಮಗಾಗಿ ಬೇಡಿಕೊಳ್ಳಿ.

ಅಷ್ಟಾದಶ ಕಿರೀಟಾಧಿಪತಿಗಳಿಗೆ ಸಂತತಿಯಾದಂಥಾ ಕನ್ಯಾ ತಾಯೇ,

ದೇವ ವರಪ್ರಸಾದಗಳಿಂದ ಭರಿತವಾದಂಥಾ ಪರಮಾಲಂಕಾರಿಯೇ,

ಅತ್ಯಂತಾಭಿಲಾಷೆಯುಳ್ಳ ಪ್ರಾರ್ಥನೆಗಳಿಂದ ಲೋಕದ ರಕ್ಷಣ್ಯವಂನು ತೀವರಿಸಿದಂಥಾ ಉತ್ತಮ ವಿರಕ್ತಿಯೇ,

ಸಮಸ್ತರಿಗೆ ಕರ್ತರಾದವರು ಕೀಳ್ಪಟ್ಟು ವಂದಿಸಿದಂಥಾ ಮಾತೆಯೇ,

ಕಾಲವು ಬರುವದಕ್ಕಿಂತಾ ಮುಂಚೆ ಜೇಸುನಾಥರಿಂದ ಅದ್ಭುತವಂನು ಮಾಡಿಸಿದಂಥಾ ದಯಾಪರಿಯೇ,

ಜೇಸುನಾಥರು ನಂಮಂನು ರಕ್ಷಿಸ ರಕ್ತಬಲಿ ಆಗುವಹಾಗೆ ಒಪ್ಪಿತವನ್ನು ಕೊಟ್ಟಂಥಾ ತಾಯೇ,

ಉತ್ಥಾನವಾದ ಕರ್ತರ ದರ್ಶನದಿಂದ ಆನಂದ ಸಂತೋಷ ಪೂರಿತವಾದಂಥಾ ತಾಯೇ,

ದೇವ ಪ್ರಸಾದದ ತಾಯ್ಯಾ ದೇವಾಲಯವಾಗಿದ್ದಂಥಾ ಕಂನಿಕೆಯೇ,

ಸೃಷ್ಟಿಸಲ್ಪಟ್ಟ ಸಮಸ್ತ ಪ್ರಪಂಚಗಳಿಗಿಂತಾ ಸರ್ವೇಶ್ವರನಿಗೆ ಹೇರಳ ಸ್ತೋತ್ರವ ಪಡಿಸಿದಂಥಾ ಉತ್ತಮೋತ್ತಮ ಶ್ರೇಯೋವಂತಿಯೇ,

ಪರಮ ಕರ್ತರು ಪರಲೋಕಕ್ಕೂ ಭೂಲೋಕ

ನಮಗಾಗಿ ಬೇಡಿ ಕೊಳ್ಳಿ.

ಕ್ಷಾ ಏರ್ಪಡಿಸಿದಂಥಾ ಏಕರಾಣಿಯೇ,

ಸರ್ವಲೋಕದಲ್ಲ್ಯಾ ಸ್ತೋತ್ರನಮಸ್ಕಾರಗಳಂನು ಕೊಂಡಿದಂಥಾ ಸುಕೃತ ಚೆಲ್ವಿಯೇ,

ಪೂರ್ವ ಮೊದಲ್ಗೊಂಡು ಕರ್ಮೇಲೆಂಬ ದೀರ್ಘದರ್ಶನ ಪರ್ವತದಲ್ಲಿ ವಿಶೇಷ ಭಕ್ತಿ ವಂದನೆಯೊಂದಿಗೆ ಸೇವಿಸಲ್ಪಟ್ಟಂಥಾ ಆಳಿದವಳೇ,

ಕರ್ಮೇಲ್ ಸಭೆಯ ಮೇಲೆ ಅನಂತ ಕೃಪೆಯುಳ್ಳಂಥಾ ತಾಯೇ,

ಅದರ ಶ್ರೇಷ್ಠರಾದ ಅರ್ಚ್ಯ. ಶಿಮೋನ್ ಸ್ತೋಕೆಂಬವರಿಗೆ ದರ್ಶನವಾಗಿ ತಿರು ಉತ್ತರೀಯವನ್ನು ತಂದಂಥಾ ದಯಾಪರಿಯೇ,

ನಿಂಮ ಕೃಪೆಯ್ಯಾಧಾರವಾಗಿಯೂ ಸ್ನೇಹದ ಅಡವಾಗಿಯೂ ಇಂಥ ತಿರು ಉತ್ತರೀಯವಂನು ಕೊಡ ಕರುಣಿಸಿದಂಥಾ ತಾಯೇ,

ತಿರು ಉತ್ತರೀಯದ ಮೂಲಕವಾಗಿ ಅನೇಕಾದ್ಭುತಾದಿಗಳಂನು ಮಾಡ ಕಟಾಕ್ಷಿಸಿದಂಥಾ ಕರುಣಾಕರಿಯೇ,

ತಿರು ಉತ್ತರೀಯವ ನಿಂಮ ದಾಸರಿಗೆ ವಿಶೇಷ ಬಿರುದಾಗಿ ನೇಮಿಸ ಕರುಣಿಸಿದಂಥಾ ರಾಣಿಯೇ,

ತಿರು ಉತ್ತರೀಯವ ಭಕ್ತಿಯೊಂದಿಗೆ ಧರಿಸುವ ವಿರಕ್ತರ ಮೇಲೆ ಅತ್ಯಂತ ಕೃಪೆ ಪ್ರೀತಿಯುಳ್ಳಂಥಾ ತಾಯೇ,

ನಮಗಾಗಿ ಬೇಡಿಕೊಳ್ಳಿ

೫೦೨ ಉತ್ತರೀಯ ದೇವ ಮಾತೆಯ ಪ್ರಾರ್ಥನೆ.

ಈ ಭೂವನದಲ್ಲಿ ಭಕ್ತರಾದ ನಿಂಮ ಉತ್ತರೀಯ ಸಭೆಯವರಂನು ಮೇಲು ವರಪ್ರಸಾದಗಳಿಂದ ಪೂರೈಸುವಂಥಾ ಆಳಿದವಳೇ,

ಭಕ್ತಿ ಪ್ರಮಾಣಿಕದೊಡನೆ ಉತ್ತರೀಯವ ಧರಿಸುವವರಂನು ನರಕದಲ್ಲಿ ಬೀಳಲೀಸದೆ ಇರುವಂಥಾ ದಯಾಪರಿಯೇ,

ಉತ್ತರಿಸುವ ಸ್ಥಳದಲ್ಲಿರುವ ಉತ್ತರೀಯ ಸಭೆಯವರಿಗೆ ಉಪಶಾಂತಿಯಂನೂ ಮೋಕ್ಷದಾನಂದವಂನೂ ಶೀಘ್ರವಾಗಿ ಹೊಂದಿಸುವಂಥಾ ಉಪಕಾರಶಾಲಿಯೇ,

ಅಮೃತರಸವುಳ್ಳಂಥಾ ಉತ್ತರೀಯದ ತಾಯೇ,

ಜೀವದ ಫಲವಂನು ತಂದಂಥಾ ವೃಕ್ಷವೇ,

ದಯಾಳತ್ವವುಳ್ಳ ರಾಣಿಯೇ,

ಕೃಪೆಯ ತಾಯೇ,

ಅನಂತ ಮಧುರವುಳ್ಳ ಕರುಣಾಮೂರ್ತಿಯೇ,

ನಮಗಾಗಿ ಬೇಡಿ ಕೊಳ್ಳಿ.

ಈ ಪ್ರಪಂಚದ ಪರದೇಶಿತನಕ್ಕೆ ಉಪಶಮನವೇ,

ನಿಂಮಂನು ಬೇಡಿಕೊಳ್ಳುವವರಿಗೆ ಒತ್ತಾಸೆ ಮಾಡಲಪೇಕ್ಷಿಸುವಂಥಾ ಉಪಕಾರಿಯೇ,

ನರಮಕ್ಕಳ ಮನೆ ಊರುಗಳ ಮೇಲೆ ಅನಂತ ಕನಿಕರವುಳ್ಳಂಥಾ ದಯಾಪರಿಯೇ,

ನಿಮ್ಮ ಭಕ್ತರುಗಳಿಗೋಸ್ಕರ ದೇವರ ಸಂನಿಧಿಯಲ್ಲಿ ಅನುಕೂಲವಾಗಿ ಪ್ರಾರ್ಥಿಸುವಂಥಾ ತಾಯೇ,

ಕರ್ತರ ಬಳಿಯಲ್ಲಿ ಅತ್ಯಂತ ಬಲವನ್ನು ಹೊಂದಿದಂಥಾ ತಾಯೇ,

ದರಿದ್ರರಿಗೊತ್ತಾಸೆ ಉಪಶಮನವಾದಂಥಾ ಧರ್ಮಾಬ್ಧಿಯೇ,

ಆಪತ್ತು ವಿಪತ್ತು ಪಡುವವರಿಗೆ ಆಸ್ಗಾರವಾದಂಥಾ ತಾಯೇ,

ಒಳ್ಳೆಯವರಿಗೆ ಉತ್ತಮ ಸಂಗಾತಿಯಾಗಿದ್ದಂಥಾ ತಾಯೇ,

ನಿಂಮಂನು ನಂಬಿ ಬೇಡಿ ಕೊಳ್ಳುವವರಂನು ಕೈ ಬಿಡದಂಥಾ ತಾಯೇ,

ಪಿಶಾಚಿಯ ತಂತ್ರಗಳಲ್ಲಿ ದೃಢವಾಧಾರವಾದಂಥಾ ತಾಯೇ,

ಮನ ತಿರುಗುವ ಪಾಪಿಗಳಿಗೆ ಶರಣಾಗತಿಯಾದಂಥಾ ದಯಾಪರಿಯೇ,

ಸಕಲರಿಗೂ ಅವಸರವಾದ ಆದರವೇ,

ರಕ್ಷಣ್ಯದ ನಿಶ್ಚಯವಾದ ಕರಿಹೇ,

ಸರ್ವೇಶ್ವರನಿಗೂ ಮನುಜರಿಗೂ ಬಂಧುತ್ವವ ಹೊಂದಿಸುವಂಥಾ ತಾಯೇ,

ಕನ್ಯಾ ಶುದ್ಧರ್ಕೆ ಉತ್ತಮ ಹಾದಿಯೇ,

ಸಕಲ ಪುಣ್ಯಗಳಿಗೆ ಉತ್ತಮ ಮಾತೃಕೆಯಾದಂಥಾ ವಿಮಲ ಸ್ವರೂಪಿಯೇ,

ಸಕಲ ಮೇಲು ವರಪ್ರಸಾದಗಳ ಪರಮ ಕಾಲುವೆಯೇ,

ನಮಗಾಗಿ ಬೇಡಿಕೊಳ್ಳೆ.

ನಿಂಮ ದಾಸರಿಗೆ ಜೀವದ ಕಾರಣವೇ,
ಭೂವನಕ್ಕೆ ಸ್ಥಿರವಾದ ನಂಬಿಕೆಯೇ,
ಪರಲೋಕಕ್ಕೆ ಆಶ್ಚರ್ಯವಾದ ಅಲಂಕಾರವೇ,
ಅರ್ಧ ಚಂದ್ರವ ಉಭಯ ಪಾದಗಳಿಂದ ಮೆಟ್ಟುವಂಥಾ ಪರಮ ರಾಣಿಯೇ,
ದ್ವಾದಶ ಜ್ಯೋತಿ ನಕ್ಷತ್ರಗಳಂನು ಕಿರೀಟವಾಗಿ ಧರಿಸುವಂಥಾ ರಾಣಿಯೇ,
ಸೂರ್ಯನಂನು ಉತ್ತರೀಯವಾಗಿ ಧರಿಸುವಂಥಾ ಮಹಾ ಅಲಂಕಾರಿಯೇ,
ಪತಿತರಿಗೆ ಎದಿರ್ಪಡೆಯಾಗಿದ್ದಂಥಾ ರಾಣಿಯೇ,
ಪತಿತ ಮತಗಳಂನು ನಿರ್ಮೂಲ ಮಾಡುವಂಥಾ ಸತ್ಯವಂತಿಯೇ,
ಪಿಶಾಚಿಯ ತಲೇ ತುಳಿದು ಶತ್ರುಗಳೆಲ್ಲರಂನು ಜಯಿಸಿ ತೊಲಗಿಸುವ ಶಕ್ತಿ ಸಂಪಂನವಾದಂಥಾ ಒಡತಿಯೇ,
ಉತ್ತರಿಸುವ ಸಭೆಗೆ ಅವಧಿಗಳಂನು ತಗ್ಗಿಸಿ ಪರಿಹರಿಸುವಂಥಾ ಪರಮೋಪಕಾರಿಯೇ,
ಯುದ್ಧ ಸಭೆಗೆ ಭದ್ರವಾದಾಸರೆಯಾಗಿದ್ದಂಥಾ ಆಳಿದವಳೇ,
ಜಯಶೀಲ ಸಭೆಗೆ ಮಹಿಮೆ ಅಲಂಕಾರವಾಗಿದ್ದಂಥಾ ರಾಣಿಯೇ,
ಸಂಮನಸ್ಸುಗಳಿಗೆ ರಾಣಿಯೇ,

ನಮಗಾಗಿ ಬೇಡಿ ಕೊಳ್ಳು.

ಪಿತಾ ಪಿತೃಗಳ ನಂಬಿಕೆಯಾದಂಥಾ ಪರಮ ಒಡತಿಯೇ,
ದೀರ್ಘ ದರ್ಶಿಗಳಿಂದ ಮುಂದರುಹಿಸಲ್ಪಟ್ಟಂಥಾ ಕನ್ಯಾ ತಾಯೇ,
ಅಪೋಸ್ತಲರಿಗೆ ಆನಂದವಾದಂಥಾ ಶರಣ್ಯ ಸಂಗಾತಿಯೇ,
ವೇದ ಸಾಕ್ಷಿಗಳಿಗೆ ದೃಢವಾದಂಥಾ ಧೈರ್ಯವೇ,
ಸ್ತುತಿಯರುಗಳಿಗೆ ಪ್ರಕಾಶವೇ,
ಕನ್ಯೆರುಗಳಿಗೆ ರಾಣಿಯೇ,
ಸರಲ ಅರ್ಚ್ಯಶಿಷ್ಟವರುಗಳಿಗೆ ಆಳಿದವಳೇ,
† ಶೋಕದ ಪಾಗವಳ... (೮೬೭ ನೇ ಪಕ್ಕ.)

(ಬಹುಸಾರಿ ಹೇಳು ಕೂಟ.)

ಪ್ರಾರ್ಥಿಸಿಕೊಂಬುವದು.

ನಿತ್ಯ ಪಿತನಾದ ಸರ್ವೇಶ್ವರಾ ಸ್ವಾಮಿ, ಮುಕ್ತಿಕೊಂಡಿದವಳೂ ಪರಿಶುದ್ಧ ಕನ್ಯಾಸ್ತ್ರಿಯೂ ಆಗಿರುವಂಥ ಅರ್ಚ್ಯ ಉತ್ತರೀಯದ ಮಾತೆಯ ಬೇಡುದಲೆಗಳಂನು ಅಂಗೀಕರಿಸಿ, ನಂಮ ಮೇಲೆ ಕೃಪೆ ದಯಾಪರರಾಗಿ ಈ ಭೂವನದಲ್ಲಿ ನಮಗೆ ಬೇಕಾದ ಮೇಲು ವರಪ್ರಸಾದಗಳಂನೂ, ನಾವು ಈ ಪರದೇಶಿತನವ ಗತಿಸಿದ ತರುವಾಯ ನಿಂಮ ಪ್ರತ್ಯಕ್ಷ ದರ್ಶನವಂನೂ, ನಮಗೆ ಪ್ರಸಾದಿಸಬೇಕೆಂದು ದೇವರವರಂನು ಮರಾ ದೈನ್ಯ ಭಕ್ತಿಯೊಡನೆ ಬೇಡಿಕೊಳ್ಳುತ್ತೇವೆ. ಇಂಥ ಬಿಂನಹಂಗಳೆಲ್ಲಾ ಜೇಸುನಾಥರ ದಿವ್ಯ ಮುಖವಂನು ನೋಡಿ ನಮಗೆ ದಯಾ ಮಾಡಿ, ಸ್ವಾಮಿ. ಆಮೆನ್ ಜೇಸು.

ಸ್ಪೀರಿತು ಸಾಂತ್ತುವಿನ ಪ್ರಾರ್ಥನೆ.

✝ ಸ್ವಾಮಿ, ಕೃಪೆಯಂನು ಮಾಡಿ;... (೪೬೧ ನೇ ಪರ್ಕ.)

ಪಿತನಿಗೂ ಸುತನಿಗೂ ಸರಿಸಮಾನರಾಗಿದ್ದು ಏಕ ದೇವರಾಗಿರುಂಥಾ ಸ್ಪೀರಿತು ಸಾಂತ್ತುವೇ,

ಪಿತನವೂ ಸುತನವೂ ಅನ್ಯೋನ್ಯ ಸ್ನೇಹದ ಚೆಶೆಯಿಂದ ದ್ವೈವೀಕ ಆವಿಮೆಂಬಂಥಾ ಸ್ಪೀರಿತು ಸಾಂತ್ತುವೇ,

ಪಿತನಿಗೂ ಸುತನಿಗೂ ದ್ವೈವೀಕ ಅನುಬಂಧನೆಯಾಗಿರುಂಥಾ ಸ್ಪೀರಿತು ಸಾಂತ್ತುವೇ,

ದೇವಸುತನು ಪರಿಶುದ್ಧ ಕನ್ಯಾಸ್ತ್ರೀಯ ಗರ್ಭದಲ್ಲಿ ಮನುಷ್ಯಾವತಾರ ಮಾಡುವದಕ್ಕೆ ಅನುಕಾರಣವಾದಂಥಾ ಸ್ಪೀರಿತು ಸಾಂತ್ತುವೇ,

ಜೋರ್ದಾನೆಂಬ ನದೀಕರೆಯಲ್ಲಿ ದಿವ್ಯ ರಕ್ಷಕರ ಮೇಲೆ ಅಲಂಕಾರವಾದ ಪಾರಿವಾಳದ ರೂಪವಾಗಿ ಸಾಕ್ಷಾತ್ಕರಿಸಿದಂಥಾ ಸ್ಪೀರಿತು ಸಾಂತ್ತುವೇ,

ಜ್ಞಾನ ಬಲ್ಮೆಯಂನೂ ಸುಜ್ಞಾನವಂನೂ ಪಾಲಿಸುವದಕ್ಕೆ ತಂಮ ಶಿಷ್ಯರಿಗೆ ಜೇಸುನಾಥರಿಂದ ವಾಗ್ದತ್ತ ಕೊಡಲ್ಪಟ್ಟಂಥಾ ಸ್ಪೀರಿತು ಸಾಂತ್ತುವೇ,

ನಮ್ಮ ಮೇಲೆ ದಯೆ, ಇಡು.

ಉಂನತವಾದ ಪಿತನಿಂದ ದಿವ್ಯ ಸುತನ ಮು
ಖಾಂತರವಾಗಿ ತಿರು ಸಭೆಗೆ ಕಳುಹಿಸಲ್ಪಟ್ಟಂಥಾ
ಸ್ಪಿರಿತು ಸಾಂರ್ತುವೇ,
ಮಹಾ ಕಾಂತಿಯುಳ್ಳ ಅಗ್ನಿ ನಾಲಿಗೆ ಭಾವನೆ
ಯಾಗಿ ಅಪೋಸ್ತಲರ ಮೇಲೆ ಚಿತ್ತೈಸಿ ಇಳಿದಂ
ಥಾ ಸ್ಪಿರಿತು ಸಾಂರ್ತುವೇ,
ಅಪೋಸ್ತಲರ ಮತಿಯೊಳತ್ಯಂತ ಜ್ಞಾನವಂ
ನ್ನೂ, ಅವರ ಹೃದಯದೊಳುತ್ತಮ ಭಕ್ತಿಯನ್ನೂ,
ಕದಲದ ಧೈರ್ಯವಂನೂ, ವಾಕ್ಕುಗಳಲ್ಲಿ ಸರ್ವಭಾಷೆ
ಗಳಂನೂ ಪಾಲಿಸಿದಂಥಾ ಸ್ಪಿರಿತು ಸಾಂರ್ತುವೇ,
ಪರಮ ಜ್ಞಾನಕ್ಕೆ ಕಾರಣ ಕರ್ತರಾಗಿರುಂಥಾ
ಸ್ಪಿರಿತುಸಾಂರ್ತುವೇ,
ಸರಲ ಸುಬುದ್ಧಿಗಳಿಗೆ ಮೂಲಕರ್ತರಾಗಿರುಂ
ಥಾ ಸ್ಪಿರಿತುಸಾಂರ್ತುವೇ,
ಜ್ಞಾನವಿಮರ್ಶೆಗೆ ದಿವ್ಯ ಉಪಾದ್ರಿಯಾಗಿರುಂ
ಥಾ ಸ್ಪಿರಿತು ಸಾಂರ್ತುವೇ,
ನಿರ್ಭಯವುಳ್ಳ ಸ್ಥಿರತ್ವರ್ಗೂ ಜ್ಞಾನಭದ್ರರ್ಗೂ ಆಸ್ಪದ
ವಾಗಿರುಂಥಾ ಸ್ಪಿರಿತು ಸಾಂರ್ತುವೇ,
ವೇದದ ಪರಮ ವಿದ್ಯಕ್ಕೆ ಮಧುರ ಗುರುವಾಗಿರುಂ
ಥಾ ಸ್ಪಿರಿತು ಸಾಂರ್ತುವೇ,
ಮನೋಹರರ ದೇವಭಕ್ತಿಗೆ ಪ್ರೇರೇಪರರಾಗಿರುಂ
ಥಾ ಸ್ಪಿರಿತು ಸಾಂರ್ತುವೇ,

ನಮಗೆ ದಯಾ ಮಾಡಿ, ಸ್ವಾಮಿ.

స్పీరితు సాంక్తువిన ప్రార్థనే.

పటువుళ్ళ దేవభయ వినయక్కె దివ్య బోధకరాగిరుంథా స్పీరితు సాంక్తువే,
అన్యరపక్ష జ్ఞానసంతోష మనోసమాధానవెంబ ఫలాదిగళంను పాలిసువంథా స్పీరితు సాంక్తువే,
తాళ్మె శాంతియెంబ పుణ్యగళంను అనుసరిసువంథా స్పీరితు సాంక్తువే,
దయ శ్రవణ ధర్మవెంబ సుగుణగళంను పాలిసువంథా స్పీరితు సాంక్తువే,
సుకృతగళల్లి నిధాన నెలె గుణగళంను కరుణిసువంథా స్పీరితు సాంక్తువే,
దృఢ విశ్వాసవంను హృదయగళల్లి స్థాపిసువంథా స్పీరితు సాంక్తువే,
నాణవు అంన పానదల్లి ప్రమాణ విరక్తవెంబ పుణ్యగళంను పాళ్కైసువంథా స్పీరితు సాంక్తువే,
హృదయగళిగె మధుర దీపవాగిరుంథా స్పీరితు సాంక్తువే,
దరిద్రరిగె అంతఃకరుణవుళ్ళ తందెయాగిరుంథా స్పీరితు సాంక్తువే,
సమస్త దేవ దత్తగళిగె ఆదియూ దాయకరూ ఆగిరుంథా స్పీరితు సాంక్తువే,

నమ్మ మేలె దయె మాడు.

ಚಿಂತಾಕ್ರಾಂತಗಳಲ್ಲಿ ಉತ್ತಮೋತ್ತಮ ಉಪಶಮಿಕರಾಗಿರುಂಥಾ ಸ್ಪೀರಿತು ಸಾಂತ್ವವೇ,

ನೀತಿವಂತರ ಆತ್ಮಗಳಲ್ಲಿ ಪ್ರಿಯವಾಸಿಯಾಗಿರುಂಥಾ ಸ್ಪೀರಿತು ಸಾಂತ್ವವೇ,

ತಾಪಕ್ಕೆ ಅಮೃತವಾದ ಶಾಂತಿಯಾಗಿರುಂಥಾ ಸ್ಪೀರಿತು ಸಾಂತ್ವವೇ,

ದಣುವಿಗೆ ವಿಶ್ರಮವೂ ಬಿಸಲಿಗೆ ತಂಪೂ ದುಃಖಕ್ಕೆ ಉಪಶಮನವೂ ಆಗಿರುಂಥಾ ಸ್ಪೀರಿತು ಸಾಂತ್ವವೇ,

ನಿಂಮಂನು ನಂಬುವವರ ಹೃದಯಗಳಂನು ವ್ಯಾಪಿಸುವಂಥಾ ಸ್ಪೀರಿತು ಸಾಂತ್ವವೇ,

ಅಶುಚಿಯಾದದ್ದಂನು ಶುದ್ಧಿಕರಿಸಿ ಪವಿತ್ರವಾಗ ಮಾಡುವಂಥಾ ಸ್ಪೀರಿತು ಸಾಂತ್ವವೇ,

ಒಣಗಿದದ್ದಂನು ನೆನೆದು ಮಿಳಿರ ಮಾಡುವಂಥಾ ಸ್ಪೀರಿತು ಸಾಂತ್ವವೇ,

ಸುರುಗಿಮೊರಟು ಹೋದದ್ದಂನು ಮೆತ್ತಗಿಸುವಂಥಾ ಸ್ಪೀರಿತು ಸಾಂತ್ವವೇ,

ಬೇನೆಯಾಗಿ ತಾರಿದದ್ದಂನು ಗುಣಪಡಿಸುವಂಥಾ ಸ್ಪೀರಿತು ಸಾಂತ್ವವೇ,

ಶೀತವಾದದ್ದಂನು ಉಷ್ಣಿಕರಿಸಿ, ಕ್ರಮತಪ್ಪಿದದ್ದಂನು ಕ್ರಮ ಪಡಿಸುವಂಥಾ ಸ್ಪೀರಿತು ಸಾಂತ್ವವೇ,

ಬೇಡಿಕೊಳ್ಳ ತಕ್ಕದ್ದೇನಂದಂನೂ ಕೇಳಿಕೊಳ್ಳ ಬೇ

ಕಾದ ವೈನವಂನೂ ನಮ್ಮಂಥಾ ದರಿದ್ರರಿಗೆ ಸೂಕ್ಷ್ಮವಾಗಿ ಪ್ರೇರೇಪಿಸುವಂಥಾ ಸ್ಪಿರಿತು ಸಾಂತ್ತುವೇ,

ಮನೋವಾಕ್ಕಿಗೆಟ್ಟದ ನಿಟ್ಟುಸುರು ಬಿಟ್ಟು, ಅಪ್ಪಾ, ಪಿತನೇ! ಎಂದು ನಂಮೊಳು ಬೇಡಿಕೊಳ್ಳುವಂಥಾ ಸ್ಪಿರಿತು ಸಾಂತ್ತುವೇ,

ಜ್ಞಾನಸ್ನಾನದಲ್ಲಿ ದೇವ ಪುತ್ರರ ಅಕ್ಷಯವಾದ ಮುದ್ರೆಯಂನು ನಮ್ಮ ಹೃದಯದೊಳಗೆ ಹಚ್ಚುವಂಥಾ ಸ್ಪಿರಿತು ಸಾಂತ್ತುವೇ,

ಭದ್ರವಾದ ಅಭ್ಯಂಗದಲ್ಲಿ ನಂಮೊಳು ಚಿತ್ತೈಸಿ, ಜೇಸುವಿನ ಶೇವಕರ ಹಾಗೆ ನಮ್ಮಂನು ಅಭಿಮಂತ್ರಿಸುವಂಥಾ ಸ್ಪಿರಿತು ಸಾಂತ್ತುವೇ,

ಗುರುತ್ವದಲ್ಲಿ ಉಂನತವಾದವರ ಕೈಂಕರ್ಯಕ್ಕೆ ಮನುಮಕ್ಕಳಿಗೆ ಪಟ್ಟಾಭಿಷೇಕವಂನು ಪಾಲಿಸುವಂಥಾ ಸ್ಪಿರಿತು ಸಾಂತ್ತುವೇ,

ಸಕಲ ದೇವದ್ರವ್ಯ ಅನುಮಾನಗಳಲ್ಲಿ ದೇವಿಷ್ಟ ಪ್ರಸಾದದಿಂದ ಹೃದಯಗಳಂನು ಅಲಂಕರಿಸುವಂಥಾ ಸ್ಪಿರಿತು ಸಾಂತ್ತುವೇ,

ಪಾಪ ದ್ರೋಹಗಳಲ್ಲಿ ನಿಲ್ಲದಹಾಗೂ, ಅನಾಥವಾಗದ ಹಾಗೂ, ಎಡೆಬಿಡದ ಪ್ರೇರೇಪಣೆಗಳಿಂದ ಪಾಪಿಗಳಂನು ಎಬ್ಬಿಸುವಂಥಾ ಸ್ಪಿರಿತು ಸಾಂತ್ತುವೇ,

ಸಂಮಾರ್ಗವಂಬಿಟ್ಟು ದಿಕ್ಕುತಪ್ಪಿಹೋದವರಿಗೆ ಮೋಕ್ಷ ದಾರಿಯಂನು ತೋರಿಸಿ ಕೈ ಕೊಟ್ಟು

ನಮ್ಮ ಮೇಲೆ ದಯೆ ಮಾಡು.

ಠರಿಗೆ ಅವರಂನು ಶೇರಿಸುವಂಥಾ ಸ್ಪೀರಿತು ಸಾಂಕ್ತುವೇ,

ಅಜ್ಞಾನಾಂಧಕಾರಕ್ಕೆ ನಿರ್ಮೂಲ ಮಾಡುವ ಯೋಗ್ಯಸೂರ್ಯನಾಗಿರುಂಥಾ ಸ್ಪೀರಿತು ಸಾಂಕ್ತುವೇ,

ತಿರು ಸಭೆಗೆ ಸಂಗಾತಿಯೂ ಪರಿಪಾಲಕರೂ ಬೋಧಕರೂ ಸ್ಥಿರವಾದ ಆಸ್ಪದವೂ ಆಗಿರುವಂಥಾ ಸ್ಪೀರಿತು ಸಾಂಕ್ತುವೇ,

ಗುರುಪಟ್ಟವುಳ್ಳವರಿಗೆ ಆಭರಣವಾಗಿರುಂಥಾ ಸ್ಪೀರಿತು ಸಾಂಕ್ತುವೇ,

ವೇದಪಾರಗರಿಗೆ ನಿರ್ಮಲವಾದ ಕಂನಡಿಯಾಗಿರುಂಥಾ ಸ್ಪೀರಿತು ಸಾಂಕ್ತುವೇ,

ತಪಸ್ವಿಗಳಿಗೆ ಅಳಿಯದ ವ್ರಜವಾಗಿರುಂಥಾ ಸ್ಪೀರಿತು ಸಾಂಕ್ತುವೇ,

ಸಮ್ಮನಸ್ಸುಗಳಿಗೆ ರಾಯರಾಗಿರುಂಥಾ ಸ್ಪೀರಿತು ಸಾಂಕ್ತುವೇ,

ದೀರ್ಘ ದರ್ಶಿಗಳಿಗೆ ಪ್ರೇರೇಪಕರಾಗಿರುಂಥಾ ಸ್ಪೀರಿತು ಸಾಂಕ್ತುವೇ,

ಪ್ರಧಾನ ಪಿತೃಗಳಿಗೆ ಒಡೆಯರಾಗಿರುಂಥಾ ಸ್ಪೀರಿತು ಸಾಂಕ್ತುವೇ,

ವೇದಸಾಕ್ಷಿಗಳಿಗೆ ಬಲ್ಮೆಯಾಗಿರುಂಥಾ ಸ್ಪೀರಿತು ಸಾಂಕ್ತುವೇ,

ಅಪೋಸ್ತಲರಂನು ಸಂತೈಸಿಕೊಂಡು ಬರು

ನಮಗೆ ದಯಾ ಮಾಡಿ, ಸ್ವಾಮಿಯಾ.

ವಂಥಾ ಸ್ಪೀರಿತು ಸಾಂಕ್ತುವೇ, — ನಮಗೆ . . .

ಕನ್ಯಾ ಸ್ತ್ರೀಯರುಗಳಿಗೆ ದಿವ್ಯ ಗುರುವಾಗಿರುಂಥಾ ಸ್ಪೀರಿತು ಸಾಂಕ್ತುವೇ, — ನಮಗೆ . . .

ಸ್ತುತಿಯರುಗಳಿಗೆ ವೇದವಾಗಿರುಂಥಾ ಸ್ಪೀರಿತುಸಾಂಕ್ತುವೇ, — ನಮಗೆ ದಯಾ ಮಾಡಿ, ಸ್ವಾಮಿ.

ಸಕಲ ಅಚ್ಯರ್ಶಿಷ್ಟವರುಗಳಿಗೆ ಕಾಂತಿಯುಳ್ಳ ಕಿರೀಟವಾಗಿರುಂಥಾ ಸ್ಪೀರಿತು ಸಾಂಕ್ತುವೇ, — ನಮಗೆ ದಯಾ ಮಾಡಿ, ಸ್ವಾಮಿ.

† ಲೋಕದ ಪಾಪಗಳ. . . . (೪೬೭ ನೇ ಪತ್ರ.)

ಪ್ರಾರ್ಥಿಸಿ ಕೊಂಬುವದು.

ಸಮಸ್ತರಿಗೆ ಕರ್ತರಾದವರೇ, ದೇವರವರ ದೆಸೆಯಿಂದ ಹೊರಡುವಂಥಾ ಉಪಶಮಿಕರಾಗಿರು ಸ್ಪೀರಿತು ಸಾಂಕ್ತುವಾದವರು ನಮ್ಮ ಮನಸ್ಸುಗಳಲ್ಲಿ ದಿವ್ಯತೇಜದ ಪ್ರಭೆಯಂನು ಬೀಸುವ ಹಾಗೂ, ನಿಂಮ ದಿವ್ಯ ಸುತನಾದವರು ವಾಗ್ದತ್ತವಂ ಪಾಲಿಸಿದ ಪ್ರಕಾರ ಸಕಲ ಸತ್ಯಗಳಲ್ಲಿ ನಮ್ಮಂನು ಪ್ರವೇಶಿಸ ಮಾಡುವ ಹಾಗೂ, ದೇವರವರಂನು ಪ್ರಾರ್ಥಿಸಿ ಕೊಳ್ಳುತ್ತಿದ್ದೇವೆ. ಆಮೆನ್ ಜೇಸು.

ದಿವ್ಯ ಬಾಲರಾದ ಜೇಸುವಿನ ಪ್ರಾರ್ಥನೆ.

ಉಂನತವಾದವರೂ ಸರ್ವಶಕ್ತಿಯುಳ್ಳವರೂ ಆಗಿರುಂಥಾ

ಸರ್ವೇಶ್ವರನ ಸುತನಾದವರು ಮಾನವರ ಮೇಲೆ ಮನೋವಾಕ್ಕಿಗೆಟ್ಟದ ಕೃಪಾಕಟಾಕ್ಷವಂನಿಟ್ಟು, ತಂಮ ಮಹಿಮೇ ಶೋಭನವಂನೂ ತಮ್ಮ ಸ್ವಯಂ ಕಾಂತಿಯ ಪ್ರಭೆಗಳಂನೂ ಮರೆಸಿ, ಬಾಲನ ನಿತ್ರಾಣಿಯಾದ ದೇಹದಲ್ಲಿ ಜನ್ಮಿಸಿದ ಪ್ರಯುಕ್ತದಿಂದ, ನಮಗಾಗಿ ಇಂಥಾ ರೂಪದಲ್ಲಿ ಚಿತ್ರೈಸಿದ ದಿವ್ಯ ಬಾಲಸ್ವಾಮಿಗೆ ಸ್ತುತಿ ಸ್ತೋತ್ರವಾರಾಧನೆಗಳ ಸಮರ್ಪಿಸುವದಕ್ಕೋಸ್ಕರ ಭಕ್ತಿಯುಳ್ಳ ಕ್ರೀಸ್ತುವರುಗಳು ಈ ಪ್ರಾರ್ಥನೆಗಳಂನು ಸ್ವಾಮಿ ಜನ್ಮಿಸಿದ ಉತ್ಸವದಿವಸ ಮೊದಲ್ಗೊಂಡು ದೇವರ ತಾಯಿ ಶುಚಿಕರದ ಆಚಾರವಂನು ಸಲ್ಲಿಸಿದ ರುಬ್ಬ ಪರಿಯಂತರಕ್ಕೂ ನಡಿಸಿಕೊಂಡು ಬರುವರಾಗಲಿ.

---

† ಸ್ವಾಮಿ, ಕೃಪೆಯಂನು ಮಾಡಿ;.. (೪೯೧ನೇ ಪತ್ರ.)

ಸರ್ವ ಲೋಕಗಳು ಸೃಷ್ಟಿಸಲ್ಪಡುವದಕ್ಕೆ ಮುಂಚಿತವಾದಂಥಾ ಜೇಸುವೆಂಬ ದಿವ್ಯ ಬಾಲರೇ,

ಸಮಸ್ತ ಕಾಲಂತರಗಳಂನು ನಿರ್ಮಿಸಿದಂಥಾ ಜೇಸುವೆಂಬ ದಿವ್ಯ ಬಾಲರೇ,

ಮನುಷ್ಯರ ಪ್ರಯೋಜನಕ್ಕಾಗಿ ಪರಲೋಕದ ದೆಶೆಯಿಂದ ಭೂಲೋಕಕ್ಕೆ ಇಳಿದಂಥಾ ಜೇಸುವೆಂಬ ದಿವ್ಯ ಬಾಲರೇ,

ಸ್ಪೀರಿತು ಸಾಂತುವಿನ ಕಾರಣದಿಂದ ಉದ್ಭವಿಸಿದಂಥಾ ಜೇಸುವೆಂಬ ದಿವ್ಯ ಬಾಲರೇ,

ಮನುಜರ ರಕ್ಷಣ್ಯರ್ರಾಗಿ ಅಡಿಮೆಯವರ ರೂಪವಂನು ಧರಿಸಿಕೊಂಡಂಥಾ ಜೇಸುವೆಂಬ ದಿವ್ಯ ಬಾಲಕೇ,

ಮಾತೆಯ ಉದರದಲ್ಲಿ ಇದ್ದು ಎಲಿಸಬೇಥಮ್ಮನ ಗರ್ಭದೊಳಿದ್ದ ಸ್ನಾಪಕ ಜೊವಾನಿಯಂನು ಸ್ಪೀರಿತು ಸಾಂಕ್ತುವಿನ ವರಪ್ರಸಾದಗಳಿಂದ ಶುದ್ಧಿಕರಿಸಿದಂಥಾ ಜೇಸುವೆಂಬ ದಿವ್ಯ ಬಾಲಕೇ,

ಮಾತೆಯ ಉದರದೊಳು ನವಮಾಸಗಳು ಅಡಕವಾದಂಥಾ ಜೇಸುವೆಂಬ ದಿವ್ಯ ಬಾಲಕೇ,

ನಿಜವಾದ ಮನುಷ್ಯನೂ ನಿಜವಾದ ದೇವರೂ ಆಗಿರುಂಥಾ ಜೇಸುವೆಂಬ ದಿವ್ಯ ಬಾಲಕೇ,

ಪಿತಾಪಿತೃಗಳಿಂದಲೂ ದೀರ್ಘದರ್ಶಿಗಳಿಂದಲೂ ಇಸ್ರಾಯೇಲೆಂಬ ಜನರಿಂದಲೂ ಅರ್ಚಿಸಲ್ಪಟ್ಟಂಥಾ ಜೇಸುವೆಂಬ ದಿವ್ಯ ಬಾಲಕೇ,

ಯಾವಾಗಲೂ ಕನ್ಯಾಸ್ತ್ರೀಯಾಗಿದ್ದಂಥಾ ಅರ್ಚ್ಯಶಿಷ್ಟ ಮರೀಯಂಮನವರ ಗರ್ಭದಲ್ಲಿ ಜನ್ಮಿಸಲ್ಪಟ್ಟಂಥಾ ಜೇಸುವೆಂಬ ದಿವ್ಯ ಬಾಲಕೇ,

ಸಕಲ ಮಾನವರಿಗಿಂತ ಅಧಿಕ ಸೌಂದರ್ಯವುಳ್ಳಂಥಾ ಜೇಸುವೆಂಬ ದಿವ್ಯ ಬಾಲಕೇ,

ದನದ ಕೊಟ್ಟಿಗೆಯಲ್ಲಿ ಜನ್ಮಿಸುವಾಗ ಮಾತೆಯ ಕೈಯಿಂದ ದರಿದ್ರ ಬಟ್ಟೆಗಳ ಹೊದ್ದಿಸಲ್ಪಟ್ಟಂಥಾ ಜೇಸುವೆಂಬ ದಿವ್ಯ ಬಾಲಕೇ,

ನಮಗೆ ದಯಾ ಮಾಡಿ, ಸ್ವಾಮಿಾ.

పరిశుద్ధ మాతెయిందలూ మరూ విరక్తరాద జోసేఫనిందలూ అత్యంత వినయదొందిగె నమస్కరిసల్పట్టంథా జేసువెంబ దివ్య బాలరే,

జన్మిసిద తరుణదల్లి సంమనస్సుగళింద శేవిసల్పట్టంథా జేసువెంబ దివ్య బాలరే,

పరమండలదిందిళిద దేవ దూతరుగళింద ఆరాధిసల్పట్టంథా జేసువెంబ దివ్య బాలరే,

దాక్షిణ్యవుళ్ళ ఆరాధనెగళను గొల్లర కైయల్లి మరూ దయదొందిగె అంగీకరిసిదంథా జేసువెంబ దివ్య బాలరే,

సలొమోన్ మొదలాద శాస్త్రిగళిగింత అతి జ్ఞానియాదంథా జేసువెంబ దివ్య బాలరే,

మితియిల్లద సద్గుణగళింద పరిపూర్ణరాదంథా జేసువెంబ దివ్య బాలరే,

కర్తరిగె కర్తా రాయరిగె రాజా ఆదంథా జేసువెంబ దివ్య బాలరే,

సంమనస్సుగళిగూ మానవరిగూ అళిదవరాగిరుంథా జేసువెంబ దివ్య బాలరే,

మనుష్య స్వభావవను వహిసికొండదరల్లి నమగె సహోదరనాదంథా జేసువెంబ దివ్య బాలరే,

నమగె దయా మాడి, స్వామీ.

೫೧೬ ದಿವ್ಯ ಬಾಲರಾದ ಜೇಸುವಿನ ಪ್ರಾರ್ಥನೆ.

ಆದಿ ಮೊದಲಿನಲ್ಲಿ ಜನ್ಮಿಸಲ್ಪಟ್ಟದರಿಂದ ಮನುಷ್ಯರೊಳಗೆ ಜೇಷ್ಠರಾದಂಥಾ ಜೇಸುವೆಂಬ ದಿವ್ಯ ಬಾಲರೇ,

ಪಿತನಾದ ಸರ್ವೇಶ್ವರನಿಗೂ ಮನುಷ್ಯರಿಗೂ ಸಮಾಧಾನವಂ ಪಡಿಸ ಬಂದಂಥಾ ಜೇಸುವೆಂಬ ದಿವ್ಯ ಬಾಲರೇ,

ದರಿದ್ರ ಜನ್ಮವಂಗೊಂಡು ಲೋಕದ ಆಸ್ತಿಗಳನ್ನು ವರ್ಜಿಸಿದಂಥಾ ಜೇಸುವೆಂಬ ದಿವ್ಯ ಬಾಲರೇ,

ದಾಕ್ಷಿಣ್ಯದಲ್ಲಿ ಜನ್ಮಿಸಿ ಅರುಂಕಾರವುಳ್ಳ ಲೋಕದ ಬರುಮಾನ ಮರಿಮೆಗಳಂನು ತೊರೆದು ಬಿಟ್ಟಂಥಾ ಜೇಸುವೆಂಬ ದಿವ್ಯ ಬಾಲರೇ,

ಕಸ್ತಿಯುಳ್ಳ ಜನ್ಮವಂ ಗೈದು ಲೋಕದ ಸೊಗಸುಗಳನ್ನು ವರ್ಜಿಸಿ, ವೃತ್ತಛೇದನೆಯಲ್ಲಿ ರುರಿದ ರಕ್ತದಿಂದ ಜೇಸುವೆಂಬ ನಾಮವಂಗೊಂಡು, ಲೋಕದ ರಕ್ಷಣ್ಯವಂನು ಉಪಕ್ರಮಿಸಿದಂಥಾ ಜೇಸುವೆಂಬ ದಿವ್ಯ ಬಾಲರೇ,

ಕಿರಾಸ ನಕ್ಷತ್ರವಂನುದಯಿಸ ಮಾಡಿ ಮೂರು ರಾಯರುಗಳಿಗೆ ತಂಮ ಜನ್ಮವಂನು ತಿಳಿಸಿದಂಥಾ ಜೇಸುವೆಂಬ ದಿವ್ಯ ಬಾಲರೇ,

ಮೂರು ರಾಯರು ಬಂದು ಸುವರ್ಣ, ಧೂಪ, ಮೀರ್ರೆಂಬ ಪರಿಮಳವಂನು ಕಾಣಿಕೆಯಾಗಿ ಒಪ್ಪಿಸಿ ಆರಾಧಿಸಲ್ಪಟ್ಟಂಥಾ ಜೇಸುವೆಂಬ ದಿವ್ಯ ಬಾಲರೇ,

ನಮಗೆ ದಯಾ ಮಾಡಿ, ಸ್ವಾಮಿ.

ಸುವರ್ಣದಿಂದ ರಾಯನೆಂತಲೂ, ಧೂಪದಿಂದ ದೇವರೆಂತಲೂ, ಮೀರ್ರೆಂಬ ಪರಿಮಳದಿಂದ ಮನುಜನೆಂತಲೂ ಎಣಿಸಲ್ಪಟ್ಟಂಥಾ ಜೇಸುವೆಂಬ ದಿವ್ಯ ಬಾಲರೇ,

ನಿಮ್ಮ ಮಾತೆಯಿಂದ ದೇವಾಲಯದಲ್ಲಿ ಕಾಣಿಕೆಯಾಗಿ ಒಪ್ಪಿಸಿಕೊಟ್ಟು ರಕ್ಷಿಸಲ್ಪಟ್ಟಂಥಾ ಜೇಸುವೆಂಬ ದಿವ್ಯಬಾಲರೇ,

ನಿಮ್ಮನ್ನು ತಮ್ಮ ಕರಗಳಲ್ಲಿ ಎತ್ತಿಕೊಂಡ ಮಹಾತ್ಮರಾದ ಸಿಮಿಯೋನೆಂಬವರ ಹೃದಯಾ ಆನಂದಿಸ ಮಾಡಿದಂಥಾ ಜೇಸುವೆಂಬ ದಿವ್ಯಬಾಲರೇ,

ದೀರ್ಘದರ್ಶಿನಿಯಾದ ಅಂನಮ್ಮನವಳಿಂದ ಕೋರಿದ ರಕ್ಷಕರೆಂಬದಾಗಿ ಜ್ಞಾದರುಗಳಿಗೆ ತೋರಿಸಲ್ಪಟ್ಟಂಥಾ ಜೇಸುವೆಂಬ ದಿವ್ಯಬಾಲರೇ,

ಹೆರೋದೆಸೆಂಬ ರಾಯನ ನಿಷ್ಠೂರಗಳಿಗೆ ಶಿಕ್ಕದಹಾಗೆ ದೇವಯತ್ನದಿಂದ ಏಜಿಪ್ತೆಂಬ ರಾಜ್ಯಕ್ಕೆ ಕೊಂಡು ಹೋಗಲ್ಪಟ್ಟಂಥಾ ಜೇಸುವೆಂಬ ದಿವ್ಯ ಬಾಲರೇ,

ಕಡಿಧಾರಲ್ಪಟ್ಟ ಪಾವನಶಿಸುವುಗಳ ಮರಣದಿಂದ ಪ್ರಸಿದ್ಧವಾದಂಥಾ ಜೇಸುವೆಂಬ ದಿವ್ಯಬಾಲರೇ,

ಏಜಿಪ್ತ್ ರಾಜ್ಯವಂ ಪ್ರವೇಶಿಸುವಲ್ಲಿ ಇದ್ದಂಥಾ ಕಳ್ಳದೇವತೆಗಳ ವಿಗ್ರಹಂಗಳನ್ನು ಕೆಳಗೆ ದೊಬ್ಬಿಬಿಟ್ಟು ಆಶ್ಚರ್ಯ ಮಾಡಿದಂಥಾ ಜೇಸುವೆಂಬ ದಿವ್ಯ

ನಮಗೆ ದಯಾ ಪಾಲಿ, ಒಪ್ಪಿಸು.

೫೧೯ ದಿವ್ಯ ಬಾಲರಾದ ಜೇಸುವಿನ ಪ್ರಾರ್ಥನೆ.

ಬಾಲರೇ,

ಏಜಿಪ್ತ್ ರಾಜ್ಯದಲ್ಲಿ ಏಳುವರುಷ ಪರಿಯಂತರ ದೊಳು ಪರದೇಶಿಯಾದಂಥಾ ಜೇಸುವೆಂಬ ದಿವ್ಯ ಭಾಲರೇ,

ಏಜಿಪ್ತ್ ರಾಜ್ಯವಂ ಬಿಟ್ಟು ಜೂದೆಯ ಶೀಮೆಗೆ ತಿರಿಗಿ ಬರುವಲ್ಲಿ ಮಹಾ ಪ್ರಯಾಸ ಸಂಕಟವಂನು ಅನುಭವಿಸಿದಂಥಾ ಜೇಸುವೆಂಬ ದಿವ್ಯ ಬಾಲರೇ,

ನಿಂಮ ಪರಮ ಪಿತನಾದವರ ಶೇವೆ ಸ್ತೋತ್ರಗಳಿಗಾಗಿ ಪ್ರಿಯ ಮಾತೆಗೂ ಅಜ್ಜರ್. ಜೋಸೇಫರಿಗೂ ಕಾಣದಹಾಗೆ ಜೆರೂಸಲೇಮಿನಲ್ಲಿ ಮೂರು ದಿವಸ ತಳುರಿಂದ ಜೇಸುವೆಂಬ ದಿವ್ಯ ಬಾಲರೇ,

ಸಮಸ್ತ ಆಶ್ಚರ್ಯಕೆ ಗುರಿಯಾಗಿ ವೇದ ಶಾಸ್ತ್ರಿಗಳಿಗೆ ಪ್ರಶ್ನೋತ್ತರಗಳ ಮಾಡಿಕೊಂಡಿರುವಾಗ, ಮೂರನೇ ದಿನದಲ್ಲಿ ಅತ್ಯಂತ ಸಂತೋಷದೊಂದಿಗೆ ಮರಳಿ ಕಾಣಿಸಿದಂಥಾ ಜೇಸುವೆಂಬ ದಿವ್ಯ ಬಾಲರೇ,

ಮೂವತ್ತು ವರುಷ ಪರಿಯಂತರದೊಳು ಹಿರಿಯರಿಗೆ ಕೀಳ್ಪಟ್ಟು ನಡಿದಂಥಾ ಜೇಸುವೆಂಬ ದಿವ್ಯ ಬಾಲರೇ,

ಬಾಲರುಗಳಿಗೆ ಅತಿ ಮಧುರವುಳ್ಳ ಮಾದ್ರಿಯಾದಂಥಾ ಜೇಸುವೆಂಬ ದಿವ್ಯ ಬಾಲರೇ,

ಪ್ರಾಯದಲ್ಲಿಯೂ ಜ್ಞಾನದಲ್ಲಿಯೂ ಪ್ರವರ್ಧಿಸಿ

ನಮಗೆ ದಯಾ ಮಾಡಿ, ಸ್ವಾಮಿ.

ಕೊಂಡು, ಸರ್ವೇಶ್ವರನಿಗೂ ಮನುಷ್ಯರಿಗೂ ಸಮರ್ಪಕರ ವಾದಂಥಾ ಜೇಸುವೆಂಬ ದಿವ್ಯ ಬಾಲರೇ, — ನಮಗೆ ದಯಾ ಮಾಡಿ, ಸ್ವಾಮಿ.

ಸರಲ ಅಭ್ಯರ್ಶಿಷ್ಟವರುಗಳಿಗೆ ಮೊದಲಿನ ಫಲವಾದ ಜೇಸುವೆಂಬ ದಿವ್ಯ ಬಾಲರೇ, — ನಮಗೆ ದಯಾ ಮಾಡಿ, ಸ್ವಾಮಿ.

† ಘೋರದ ಪಾಪಗಳ.... (೪೬೭ ನೇ ಪತ್ರ.)

ಪ್ರಾರ್ಥಿಸಿಕೊಂಬುವದು.

ದಿವ್ಯ ಬಾಲರಾದ ಜೇಸುವೇ, ಈಗಲು ನಿಂಮ ತಿರು ನಾಮಧೇಯದ ಮೇಲೆ ನಾವು ಸಲ್ಲಿಸಿದ ಸ್ತುತಿ ಸ್ತೋತ್ರಗಳಂನು ನೋಡಿ, ಇಂಥಾ ದಿವ್ಯ ನಾಮದ ಮೇಲೆ ಯೋಗ್ಯವಾದ ಭಕ್ತಿ ನಂಮ ಹೃದಯಗಳಲ್ಲಿ ಹುಟ್ಟಿಸಿ ನಮ್ಮಂನು ರಕ್ಷಿಸಬೇಕೆಂದು ಬೇಡಿಕೊಳ್ಳುತ್ತಿದ್ದೇವೆ, ಸ್ವಾಮಿ. ಆಮೆನ್ ಜೇಸು.

ಜೇಸುವಿನ ದಿವ್ಯ ಹೃದಯದ ಪ್ರಾರ್ಥನೆ.

† ಸ್ವಾಮಿ, ಕೃಪೆಯಂನು ಮಾಡಿ;... (೪೬೧ ನೇ ಪತ್ರ.)

ಜೇಸುನಾಥರ ದಿವ್ಯ ಹೃದಯವೇ, — ನಮಗೆ ದಯಾ ಮಾಡಿ, ಸ್ವಾಮಿ.

೫೨೦ ಜೇಸುವಿನ ದಿವ್ಯ ಹೃದಯದ ಪ್ರಾರ್ಥನೆ.

ಪರಿಶುದ್ಧ ಕನ್ಯಾ ತಾಯ್ಯ ಗರ್ಭದಲ್ಲಿ ಅದ್ಭುತವಾಗಿ ದೈವೀಕದಿಂದ ಉಂಟಾದ ಜೇಸುವಿನ ದಿವ್ಯ ಹೃದಯವೇ,

ನಿತ್ಯ ಪಿತನಾದವರ ವಾರ್ತೆಯಾಗಿರು ದೇವಸುತನೊಂದಿಗೆ ಐಕ್ಯವಾದಂಥಾ ಜೇಸುವಿನ ದಿವ್ಯ ಹೃದಯವೇ,

ದೇವತ್ವದ ಸ್ಥಾನವಾದಂಥಾ ಜೇಸುವಿನ ದಿವ್ಯ ಹೃದಯವೇ,

ಅಚ್ಯರ್ಶಿಷ್ಟ ತಮ ತ್ರಿತ್ವಕ್ಕೆ ಪ್ರಿಯವುಳ್ಳ ದೇವಾಲಯವಾದಂಥಾ ಜೇಸುವಿನ ದಿವ್ಯ ಹೃದಯವೇ,

ಪರಿಪೂರ್ಣ ಪಶಿಶುದ್ಧತನಕ್ಕೆ ತಿರು ಪೀಠವಾದಂಥಾ ಜೇಸುವಿನ ದಿವ್ಯ ಹೃದಯವೇ,

ಜ್ಞಾನಕ್ಕೆ ಅಗಾಧ ಸಾಗರವಾದಂಥಾ ಜೇಸುವಿನ ದಿವ್ಯ ಹೃದಯವೇ,

ಕಡೇಗಾಣದ ಕರುಣಾ ಸಮುದ್ರವಾದಂಥಾ ಜೇಸುವಿನ ದಿವ್ಯ ಹೃದಯವೇ,

ದೇವ ಕನಿಕರಕ್ಕೆ ಸಿಂಹಾಸನವಾದಂಥಾ ಜೇಸುವಿನ ದಿವ್ಯ ಹೃದಯವೇ,

ಸಕಲ ವರಪ್ರಸಾದಗಳ ಬತ್ತಿಹೋಗದ ಬುಗ್ಗೆಯಾದಂಥಾ ಜೇಸುವಿನ ದಿವ್ಯ ಹೃದಯವೇ,

ಎಂದಿಗಾದರೂ ಸರ್ವ ಮೇಲುಗಳ ತಗ್ಗದ ಬೊಕ್ಕಸವಾದಂಥಾ ಜೇಸುವಿನ ದಿವ್ಯ ಹೃದಯವೇ,

ನಮಗೆ ದಯಾ ಮಾಡಿ, ಸ್ವಾಮಿ.

నిమ్మల్లి సంపూర్తియాగిరువ మేలుగళింద నమగెల్లరిగె పూర్తి మాడువంథా జేసువిన దివ్య హృదయవే,

నమగె సమాధాన సల్లావంను పడిసువంథా జేసువిన దివ్య హృదయవే,

అత్యంత సాధువాదంథా జేసువిన దివ్య హృదయవే,

మట్టిల్లద శాంతియూ దాక్షిణ్యవూ ఉళ్ళంథా జేసువిన దివ్య హృదయవే,

ఆశ్చర్యక్కె ఆస్పదవాద శ్రవణధర్మవుళ్ళంథా జేసువిన దివ్య హృదయవే,

విరక్తవుళ్ళద్దంనూ విరక్తరంనూ అభిలాషిసువంథా జేసువిన దివ్య హృదయవే,

సకల పుణ్యగళిగె సుమాత్రకెయాగిరుంథా జేసువిన దివ్య హృదయవే,

పరిశుద్ధ స్నేహద జ్వాలాగ్నియాగిరుంథా జేసువిన దివ్య హృదయవే,

అత్యంత స్నేహవుళ్ళద్దూ అత్యంత స్నేహక్కె యోగ్యవూ ఆగిరుంథా జేసువిన దివ్య హృదయవే,

నిత్య జీవవ కొడువ జలవు ఒసరువ బుగ్గెయాగిరుంథా జేసువిన దివ్య హృదయవే,

నమగె దయ మాడి, ఒప్పిసి.

೫೨೨ ಜೇಸುವಿನ ದಿವ್ಯ ಹೃದಯದ ಪ್ರಾರ್ಥನೆ.

ದಿವ್ಯ ಪಿತನಿಗೆ ಕೇವಲ ಸ್ನೇಹವುಳ್ಳಂಥಾ ಜೇಸುವಿನ ದಿವ್ಯ ಹೃದಯವೇ,

ನಮ್ಮ ಪಾಪಗಳಿಗೆ ಪಿತನಾದವರ ಬಳಿಯಲ್ಲಿ ಕ್ಷಮೆ ಹೊಂದಿಸುವಂಥಾ ಜೇಸುವಿನ ದಿವ್ಯ ಹೃದಯವೇ,

ನಮಗಾಗಿ ಶೃಂಗಾರತೋಪಿನಲ್ಲಿ ದುಃಖಸಾಗರದೊಳು ಮುಣುಗಿದಂಥಾ ಜೇಸುವಿನ ದಿವ್ಯ ಹೃದಯವೇ,

ದುಃಖ ಕೋರಳಿಕ್ಕೆದಿಂದಲೂ ರಕ್ತ ಬೆವರಿನಿಂದಲೂ ಸೊರಗಿ ಮರಣಾವಸ್ಥೆಯುಮಟ್ಟಿಗೆ ಕಲಗಿದಂಥಾ ಜೇಸುವಿನ ದಿವ್ಯ ಹೃದಯವೇ,

ನಿಂದೆ ಅಪಮಾನದಿಂದ ತುಂಬಿಸಲ್ಪಟ್ಟಂಥಾ ಜೇಸುವಿನ ದಿವ್ಯ ಹೃದಯವೇ,

ನಮ್ಮ ಮೇಲೆ ಇರಿಸಿದ ಅಂತಃಕಾರುಣ್ಯದಿಂದ ಘಾಯ ಪಟ್ಟಂಥಾ ಜೇಸುವಿನ ದಿವ್ಯ ಹೃದಯವೇ,

ಈಟಿಯಿಂದ ತಿವಿಯಲ್ಪಟ್ಟಂಥಾ ಜೇಸುವಿನ ದಿವ್ಯ ಹೃದಯವೇ,

ಕಡೇ ಬೊಟ್ಟು ಪರಿಯಂತ ರಕ್ತವಂನು ಸುರಿದು ಬಿಟ್ಟಂಥಾ ಜೇಸುವಿನ ದಿವ್ಯ ಹೃದಯವೇ,

ನಂಮ ಪಾಪಗಳಿಗೋಸ್ಕರ ಬಲಿಯಾದಂಥಾ ಜೇಸುವಿನ ದಿವ್ಯ ಹೃದಯವೇ,

ನಮಗೆ ದಯೆ ಮಾಡಿ, ಒಪ್ಪೆವಾ.

ಶಿಲ್ವೇ ಮರಣದ ಮಟ್ಟಿಗೆ ವಿಧೇಯವಾದಂಥಾ ಜೇಸುವಿನ ದಿವ್ಯ ಹೃದಯವೇ,

ನಮ್ಮ ಅಕ್ರಮಗಳ ನಿಮಿತ್ತ ಜಜ್ಜಲ್ಪಟ್ಟಂಥಾ ಜೇಸುವಿನ ದಿವ್ಯ ಹೃದಯವೇ,

ನಿಮ್ಮ ಸ್ನೇಹದ ದೇವದ್ರವ್ಯ ಅನುಮಾನವಾಗಿದಂಥಾ ಸತ್ ಪ್ರಸಾದದಲ್ಲಿ ಈಗಲೂ ಮೊದಲಾಗಿ ಮೇಲುಗೆಟ್ಟ ಮನುಷ್ಯರಿಂದ ಹರಿಯಲ್ಪಟ್ಟಿರುವಂಥಾ ಜೇಸುವಿನ ದಿವ್ಯ ಹೃದಯವೇ,

ಪಾಪಿಗಳಿಗೆ ಶರಣಾಗತಿಯಾಗಿರುಂಥಾ ಜೇಸುವಿನ ದಿವ್ಯ ಹೃದಯವೇ,

ಬಲಹೀನರಿಗೆ ಬಲವಾಗಿರುಂಥಾ ಜೇಸುವಿನ ದಿವ್ಯ ಹೃದಯವೇ,

ದುಃಖ ವ್ಯಾಧಿಗಳ ಭರಿತರಿಗೆ ಉಪಶಮನವಾಗಿರುಂಥಾ ಜೇಸುವಿನ ದಿವ್ಯ ಹೃದಯವೇ,

ಭೂತಾದಿಗಳಿಗೆ ಭಯಪಡಿಸುವಂಥಾ ಜೇಸುವಿನ ದಿವ್ಯ ಹೃದಯವೇ,

ಹೃದಯಗಳನ್ನು ಶುಚಿಪಡಿಸುವಂಥಾ ಜೇಸುವಿನ ದಿವ್ಯ ಹೃದಯವೇ,

ನೀತಿವಂತರಿಗೆ ಸನ್ಮಾರ್ಗದ ಸ್ಥೈರ್ಯವಾಗಿರುಂಥಾ ಜೇಸುವಿನ ದಿವ್ಯ ಹೃದಯವೇ,

ನಿಮ್ಮನ್ನು ನಂಬುವವರಿಗೆ ರಕ್ಷಣ್ಯವಾಗಿರುಂಥಾ ಜೇಸುವಿನ ದಿವ್ಯ ಹೃದಯವೇ,

ನಮಗೆ ದಯಾ ಮಾಡಿ, ಸ್ವಾಮಿ.

ನಿಂಮ ಶರಣದಲ್ಲಿ ಮೃತವಾಗುವವರಿಗೆ ನಂಬಿಕೆಯಾಗಿರುಂಥಾ ಜೇಸುವಿನ ದಿವ್ಯ ಹೃದಯವೇ,

ನಿಂಮ ಮೇಲೆ ಭಕ್ತಿಯುಳ್ಳವರಿಗೆ ಮಧುರವಾಸ್ಪದವಾಗಿರುಂಥಾ ಜೇಸುವಿನ ದಿವ್ಯ ಹೃದಯವೇ,

ಸಕಲ ಮೋಕ್ಷವಾಸಿಗಳಿಗೆ ಮನೋಹರವಾನಂದವಾಗಿರುಂಥಾ ಜೇಸುವಿನ ದಿವ್ಯ ಹೃದಯವೇ,

ನಂಮಂನು ಸುತ್ತಿ ಬಾಧಿಸಿಕೊಂಡಿರುವ ತಾಪತ್ರಯಗಳಲ್ಲಿ ನಮಗೆ ಸಂರಕ್ಷಣೆಯಾಗಿರುಂಥಾ ಜೇಸುವಿನ ದಿವ್ಯ ಹೃದಯವೇ,

ನಮಗೆ ದಯಾ ಮಾಡಿ, ಸ್ವಾಮಿ.

† ಲೋಕದ ಪಾಪಗಳ.... (೫೬೭ ನೇ ಪರ್ಕ.)

(ಉ.) ದಾಕ್ಷಿಣ್ಯವೂ ಶಾಂತವೂ ಗುಣವುಳ್ಳಂಥಾ ಹೃದಯವಂ ಗೊಂಡ ಜೇಸುವೇ,

(ಜ.) ನಂಮ ಹೃದಯಗಳು ದೇವರವರ ಹೃದಯಕ್ಕೆ ಹೊಂದಿಕೆಯಾಗುವ ಹಾಗೆ ಮಾಡ ಕರುಣಿಸಿರಿ, ಸ್ವಾಮಿ.

(ಉ.) ನಮ್ಮ ತುಂಬ ಹೃದಯದೊಂದಿಗೆ ನಿಮ್ಮಂನು ಯೋಗ್ಯ ವಿಧವಾಗಿ ಸ್ನೇಹಿಸುವಹಾಗೆ,

(ಜ.) ಮಹಾ ಪರಿಶುದ್ಧವಾದ ಜೇಸುವಿನ ದಿವ್ಯ ಹೃದಯವೇ, ನಂಮ ಮೇಲೆ ಮರುಕವಾಗಿರಿ.

ಪ್ರಾರ್ಥಿಸಿಕೊಂಬುವದು.

ಪರಮ ಕರ್ತರಾಗಿರುಂಥಾ ಜೇಸುವೇ, ಹೊಸ ಉದಾರತ್ವದಿಂದ ನಿಂಮ ದಿವ್ಯ ಹೃದಯದ ಮನೋವಾಕ್ಕಿಗೆಟ್ಟದ ದ್ರವ್ಯಗಳ ಭೊಕ್ಕಸವಂನು ನಿಂಮ ತಿರು ಸಭೆಗೆ

ತೆರದೊಪ್ಪಿಸಿಬಿಡ ಕರುಣಿಸಿದಿರೇ. ದೇವರವರ ಪರಿಶುದ್ಧ ತಿರು ಹೃದಯದ ಪಕ್ಷಕ್ಕೆ ಪ್ರತಿ ಪಕ್ಷವಂನು ನಾವು ಸಲ್ಲಿಸುವ ಹಾಗೂ, ಕೆಂಜ್ಬಾದ ಮನೋವೇಧನೆಯಿಂದ ತುಂಬಿದ ನಿಂಮ ಹೃದಯಕ್ಕೆ ಮೇಲು ಗೆಟ್ಟ ಮನುಷ್ಯರಿಂದ ಹೊಡಲ್ಪಡುವ ನಿಂದೆ ಅಪಮಾನಗಳಂನು ಭಕ್ತ ವಿನಯ ಆರಾಧನೆ ಸ್ತೋತ್ರಗಳಿಂದ ಪರಿಹರಿಸುವ ಹಾಗೂ, ನಮಗೆ ಬೇಕಾದ ಅನುಗ್ರಹವ ಮಾಡ ಕರುಣಿಸಿರಿ, ಸ್ವಾಮಿ. ನಮ್ಮ ಸ್ನೇಹಕ್ಕೆ ಗುರಿಯಾದ ಜೇಸುವೇ, ದೇವರವರ ತಿರು ಹೃದಯದೊಳುರಿಯುವ ದಿವ್ಯ ಸ್ನೇಹದ ಅಗ್ನಿಯಲ್ಲಿ ಒಂದು ಕಿಡಿಯಾದರೂ ನಂಮ ಹೃದಯಗಳಲ್ಲಿ ಬೀಳ ಬಿಟ್ಟು, ಅವುಗಳಂನು ಪರಿಶುದ್ಧಿಕರಿಸಿ, ದೇವರವರಿಗೆ ಪ್ರಿಯವಾದ ದೇವಾಲಯಗಳೂ ಪೀಠಗಳೂ ಆಗುವ ಹಾಗೆ ಅಂಗೀಕರಿಸಿಕೊಳ್ಳ ಕೃಪೆ ಮಾಡಿ, ಸ್ವಾಮಿ. ಆಮೆನ್ ಜೇಸು.

ಅರ್ಚ್ಯಶಿಷ್ಟ ದೇವರ ತಾಯಾದವಳ ನಿಷ್ಕಳಂಕವಾದ ಹೃದಯದ ಪ್ರಾರ್ಥನೆ.

† ಸ್ವಾಮಿ, ಕೃಪೆಯಂನು ಮಾಡಿ;...(೪೬೧ ನೇ ಪಕ್ಕ.)
ಜನ್ಮ ಪಾಪದ ಕಳಂಕವಿಲ್ಲದೆ ಉದ್ಭವಿಸಿದ ಅರ್ಚ್ಯಕನ್ಯೆ ಮರೀಯಂಮನವರ ತಿರು ಹೃದಯವೇ,—ನಮಗಾಗಿ ಬೇಡಿಕೊಳ್ಳಿ, ತಾಯೇ.

* ೨೬ ದೇವರ ತಾಯ್ಯ ತಿರು ಹೃದಯದ ಪ್ರಾರ್ಥನೆ.

ಎಂದೆಂದಿಗೂ ಸ್ವಲ್ಪ ಮಾಸಿಲ್ಲದೆ ಪರಿಶುದ್ಧವಾಗಿದ್ದಂಥಾ ತಿರು ಹೃದಯವೇ,

ಪ್ರಿಯದತ್ತಗಳಿಂದ ಸಂಪೂರ್ತಿಯಾದಂಥಾ ತಿರು ಹೃದಯವೇ,

ನಿಂಮೊಳು ತಂಬಿಯಿರುವ ವರಪ್ರಸಾದಗಳಂನು ಮನುಜರಲ್ಲಿ ಸುರಿಸುವಂಥಾ ತಿರು ಹೃದಯವೇ,

ಪಿತನಾದ ಸರ್ವೇಶ್ವರನಿಗೆ ಮನೋಹರವಾದಂಥಾ ತಿರು ಹೃದಯವೇ,

ಮಾಂಸವಾಗಿ ಅವತರಿಸಿದ ದೈವ ವಾರ್ತೆಗೆ ಪ್ರಿಯಸ್ಥಾನವಾದಂಥಾ ತಿರು ಹೃದಯವೇ,

ದೇವ ಸ್ನೇಹದಿಂದ ಸ್ಪೀರಿತು ಸಾಂತುವಿನೊಂದಿಗೆ ವಿಶೇಷ ಬಂಧನೆಯಾದಂಥಾ ತಿರು ಹೃದಯವೇ,

ಆರಾಧನೆಗೆ ಪಾತ್ರವಾಗಿರುವಂಥಾ ಪರಮ ತ್ರಿತ್ವಕ್ಕೆ ಯೋಗ್ಯ ದೇವಾಲಯವಾದಂಥಾ ತಿರು ಹೃದಯವೇ,

ಅತ್ಯಂತ ಆಸೆ ಅಭಿವೃದ್ಧಿಯುಳ್ಳ ಬೇಡುದಲೆಗಳಿಂದ ಭೂಲೋಕದ ರಕ್ಷಣ್ಯವಂನು ತೀವರಿಸಿದ ತಿರು ಹೃದಯವೇ,

ನಂಮ ರಕ್ಷಣ್ಯ ಬಲಿಯಾದ ತಿರು ದೇಹವಂ ನೊಪ್ಪಿಸುವದಕ್ಕೆ ಕಾರಣವಾದಂಥಾ ತಿರು ಹೃದಯವೇ,

ನಮಗಾಗಿ ಬೇಡಿ ಕೊಳ್ಳು ತಾಯೇ.

ನಮಗಾಗಿ ಸುರಿದ ರಕ್ತವನು ಕೊಟ್ಟಂಥಾ ತಿರು ಹೃದಯವೇ,
ಸರ್ವೇಶ್ವರನ ಹೃದಯಕ್ಕೆ ಅನುಕೂಲವಾದಂಥಾ ತಿರು ಹೃದಯವೇ,
ಜೇಸುನಾಥರ ದಿವ್ಯ ಹೃದಯಕ್ಕೆ ಅನ್ಯೋನ್ಯವಾದಂಥಾ ತಿರು ಹೃದಯವೇ,
ಅಂಥಾ ದಿವ್ಯ ಹೃದಯದ ಸುಕೃತ ಗುಣಾದಿಗಳೆಲ್ಲವನು ತೋರಿಸುವದಕ್ಕೆ ನಿರ್ಮಲ ಕಂನಡಿಯೂ ಉತ್ತಮ ಕಿಟಕಿಯೂ ಆಗಿದ್ದಂಥಾ ತಿರು ಹೃದಯವೇ,
ದೇವ ಚಿತ್ತಕ್ಕೆ ಎಡೆಬಿಡದೆ ಎಲ್ಲದರಲ್ಲಿ ಸ್ವಾಭಾವಿಕವಾಗಿ ಕೀಳ್ಪಟ್ಟಿದ್ದಂಥಾ ತಿರು ಹೃದಯವೇ,
ಉತ್ತಮ ವಂದನೆಗೆ ಯೋಗ್ಯವಾದಂಥಾ ತಿರು ಹೃದಯವೇ,
ಅತ್ಯಂತ ಪರಿಶುದ್ಧ ಪಕ್ಷವುಳ್ಳದ್ದೂ ಪಕ್ಷಕ್ಕೆ ಪಾತ್ರವೂ ಆಗಿರುವಂಥಾ ತಿರು ಹೃದಯವೇ,
ಮರಿಯಮ್ಮನ ಪ್ರತಾಪದ ಸಿಂಹಾಸನವಾದಂಥಾ ತಿರು ಹೃದಯವೇ,
ಎಲ್ಲೆಲ್ಲಿಯೂ ಸ್ತುತಿಗೆ ಯೋಗ್ಯವಾಗಿಯೂ ಎಲ್ಲೆಲ್ಲಿಯೂ ತಕ್ಕಷ್ಟು ಸ್ತುತಿಸಲ್ಪಡ ಕೂಡದಾಗಿಯೂ ಇರುವಂಥಾ ತಿರು ಹೃದಯವೇ,
ಭೂಲೋಕವನಾಧರಿಸುವ ಸಕಲ ವಿಧ ಮೇಲು

ನಮಗಾಗಿ ಬೇಡಿ ಕೊಳ್ಳಿ ತಾಯೇ.

ಗಳಂನು ಎಡೆಬಿಡದೆ ಕರುಣಿಸಿ ಕೊಂಡಿರುವಂಥಾ ತಿರು ಹೃದಯವೇ,

ಈ ಕಾಲದಲ್ಲಿ ವಿಶೇಷವಾಗಿ ಆಶ್ಚರ್ಯಕ್ಕೆ ಕಾರಣವಾದ ಎಣಿಸ ಕೂಡದ ಅದ್ಭುತಾದಿಗಳಂನು ಮಾಡ ಕರುಣಿಸುವಂಥಾ ತಿರು ಹೃದಯವೇ,

ಎಲ್ಲಾ ಶೀಮೆಗಳಲ್ಲಿ ಸುಕೃತ ಸುಗಂಧ ಪರಿಮಳಿಸುವಂಥಾ ತಿರು ಹೃದಯವೇ,

ಸತ್ಯ ವೇದದ ಬೋಧಕರಿಗೆ ಬೆಳಕಿರುವಂಥಾ ತಿರು ಹೃದಯವೇ,

ಪಿಶಾಚನ್ನ ಜಯಿಸುವ ಜಯವಂನು ಕೊಂದಿಸುವಂಥಾ ತಿರು ಹೃದಯವೇ,

ಪಾಪಿಗಳ ಮನಸ್ಸಂನು ತಿರುಗಿಸುವದಕ್ಕೆ ಒತ್ತಾಸೆಯಾಗಿರುವಂಥಾ ತಿರು ಹೃದಯವೇ,

ಪಾಪವಂನು ಕೋಸಿಸುವ ಪಾಪಿಗಳೆಲ್ಲರಿಗೆ ಕರಣವೂ ಆಧಾರವೂ ಆಗಿರುವಂಥಾ ತಿರು ಹೃದಯವೇ,

